ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಮಾರ್ಚ್ 11, 2009 ರೂ. 12/-


ಸುಳ್ಳುಪತ್ತೆ ರಾಣಿಯ ಸುಳ್ಳುಗಳು!



ಮಾಲಿನಿಯ ಮಾಲಿನ್ಯಗಾಥೆ

ಸೊಗಡು ಶಿವಣ್ಣನ ರಗಳೆ





ರೌಡಿ ರೆಡ್ಡಿಗಳ ಏರ್‌ಪೋರ್ಟ್ ಶೋಕಿ

ರಾಘವೇಂದ್ರನಿಗೆ ಟಿಕೆಟ್

ಶಿವಮೊಗ್ಗ ಬಿಜೆಪಿ ಇಬ್ಭಾಗ?



ಲೋಕಸಭಾ ಚುನಾವಣೆ ಸಿದ್ಧತೆ ಚಿತ್ರದುರ್ಗ, ಕೊಪ್ಪಳ



ಆಸ್ಕರಾ ಯಾರಿಗೋಸ್ಕರ?

ಆಸ್ಕರಾ.....! ಯಾರಿಗೋಸ್ಕರಾ?!

ಜಾಗತಿಕ ಬಲಿಷ್ಠರ ಸಾಂಸ್ಕೃತಿಕ ರಾಜಕಾರಣದ ಪ್ರಶ್ನೆ



ಚಾರ್ವಾಕ

ಶಿವಸುಂದರ್

ಎಲ್ಲರ ನಿರೀಕ್ಷೆಯಂತೆ ಮತ್ತು ಅಂತರರಾಷ್ಟ್ರೀಯ ಸಿನಿಮಾ ಮಲ್ಟಿ ನ್ಯಾಷನಲ್‌ಗಳ ಪೂರ್ವ ನಿರ್ಧಾರದಂತೆ ಈ ವರ್ಷ 'ಸ್ಲಂಡಾಗ್ ಮಿಲಿಯನೇರ್' ಚಿತ್ರಕ್ಕೆ ಎಂಟು ಆಸ್ಕರ್ ಪ್ರಶಸ್ತಿಗಳು ದಕ್ಕಿವೆ. ಅಥವಾ ಪಡೆದುಕೊಳ್ಳಲಾಗಿದೆ..? (ಈ 'ದಕ್ಕಿದೆ' ಅಥವಾ 'ಪಡೆದುಕೊಳ್ಳಲಾಗಿದೆ' ಎಂಬುದರ ನಡುವಿನ ವ್ಯತ್ಯಾಸ ಕೇವಲ ಪದಗಳ ವ್ಯತ್ಯಾಸ ವಲ್ಲ, ಅವುಗಳ ಹಿಂದೆ ದೊಡ್ಡ ಅರ್ಥದ ವ್ಯತ್ಯಾಸಗಳೂ ಇವೆ. ಉದಾಹರಣೆಗೆ ಮೊನ್ನೆ ಸಭೆಯೊಂದರಲ್ಲಿ ಚಿಂತಕ-ಹೋರಾಟಗಾರ ವಿಠಲ್ ಹೆಗಡೆಯವರು ಈ ದೇಶದ ಸ್ವಾತಂತ್ರವನ್ನು ನಾವು ಪಡೆದುಕೊಂಡಿದ್ದೋ, ಬ್ರಿಟಿಷರು ಕೊಟ್ಟದ್ದೋ ಅಥವಾ ಹೋರಾಡಿ ಗಳಿಸಿದ್ದೋ ಎಂಬ ಜಿಜ್ಞಾಸೆಯನ್ನು ಎತ್ತಿದ್ದರು. ಈ ಪದ ವ್ಯತ್ಯಾಸಗಳು ಹೇಗೆ ಒಂದು ಐತಿಹಾಸಿಕ ಪ್ರಕ್ರಿಯೆಯನ್ನೇ ತಪ್ಪಾಗಿ ವ್ಯಾಖ್ಯಾನಿಸಿ ತಪ್ಪು ಇತಿಹಾಸವನ್ನು ಬಿತ್ತಬಲ್ಲವು ಎಂಬುದನ್ನು ಸೂಚಿಸುತ್ತದೆ. ಕೊಡುವುದರ ರಾಜಕಾರಣಕ್ಕೂ, ಗಳಿಸುವುದರ ರಾಜಕಾರಣಕ್ಕೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಅಲ್ಲವೇ?) ಅದೇನೇ ಇರಲಿ, ಈ ಬಾರಿಯ ಆಸ್ಕರ್ ಪ್ರಶಸ್ತಿಯನ್ನು ಸ್ಲಂ ಡಾಗ್ ಮಿಲಿಯ ನೇರ್‌ಗೆ ಕೊಡಲಾಗಿದ್ದರೂ, ಅಥವಾ ಅದೇ ಗಳಿಸಿಕೊಂಡಿದ್ದರೂ, ಭಾರತದ ಅಪ್ರತಿಮ ಸಂಗೀತಗಾರ ಎ.ಆರ್. ರೆಹಮಾನ್‌ಗೂ, ಅದೇ ಚಿತ್ರದ ಧ್ವನಿ ಸಂಯೋಜನೆಗೆ ರಸೂಲ್ ಪೂಕುಟ್ಟಿಗೂ, ಹಾಡು ಬರೆದ ಗುಲ್ಜಾರ್‌ಗೂ ಆಸ್ಕರ್ ಪ್ರಶಸ್ತಿ ಸಿಕ್ಕಿರುವುದು ಇಡೀ ಭಾರತೀಯರನ್ನು ಸಂತಸದಲ್ಲಿ ತೇಲಾಡುವಂತೆ ಮಾಡಿದೆ.

ಪ್ರಶಸ್ತಿ ಪಡೆದ ರೆಹಮಾನ್ "ಆಸ್ಕರ್ ಪಡೆದ ನನ್ನ ಈ ಯಶಸ್ಸು ದ್ವೇಷದ ಬದಲಿಗೆ ಪ್ರೀತಿಯನ್ನೇ ಆಯ್ಕೆ ಮಾಡಿಕೊಂಡ ನನ್ನ ಆಯ್ಕೆಗೆ ಸಮರ್ಪಿತ" ಎಂದು ಹೇಳುತ್ತಾ ಸಾಮಾಜಿಕ ದ್ವೇಷವೇ ತುಂಬಿರುವ ಭಾರತದ ಸಂದರ್ಭದಲ್ಲಿ ಅಪಾರ ಮಾನವ ಪ್ರೀತಿಯ ಸಂದೇಶ ಕೊಟ್ಟರೆ, ರಸೂಲ್ ಪೂಕುಟ್ಟಿ ತನ್ನ ಪ್ರಶಸ್ತಿಯನ್ನು ಭಾರತ ದೇಶಕ್ಕೆ ಅರ್ಪಿಸಿ ದೇಶಪ್ರೇಮ ಮೆರೆದರು. ಅಷ್ಟು ಮಾತ್ರವಲ್ಲ, ತನ್ನ ದೇಶದಲ್ಲಿ ಪ್ರೀತಿ ತಾಳ್ಮೆಗೆ ಪ್ರತಿರೂಪ ವಾಗಿರುವ 'ಓಂ' ಕಾರವನ್ನು ನೆನಪಿಸಿಕೊಂಡರು. ಸ್ಲಂ ಡಾಗ್ ಕಥೆಯ ಪಾತ್ರಗಳು, ಆಸ್ಕರ್ ಪಡೆದ ತಂತ್ರಜ್ಞರು ಎಲ್ಲರೂ ಮುಸ್ಲಿಮರೇ ಆಗಿರುವುದರಿಂದಲೋ ಏನೋ ದೇಶಭಕ್ತಿಯ ಬಗ್ಗೆ ಬೊಗಳುವ ಚಿಲ್ಲರೆ ಸಂಘಪರಿವಾರ ದವರು, ಭಾರತೀಯರು ಆಸ್ಕರ್ ಪಡೆದ ಬಗ್ಗೆ ಈವರೆಗೆ ಕಿಂಚಿತ್ತೂ ಹೆಮ್ಮೆಯನ್ನು ವ್ಯಕ್ತ ಪಡಿಸಿಲ್ಲ, ನಾಯಿ ಬೊಗಳಿದರೂ, ಬೊಗಳದಿದ್ದರೂ ದೇವಲೋಕ ಹಾಳಿಲ್ಲ ಎಂಬ ಗಾದೆ ಇರುವುದೇ ಇಂತವರಿಗಾಗಿ.

ಅದಿರಲಿ, ಈ ಪೊಳ್ಳು ದೇಶಾಭಿಮಾನಿಗಳ ಹೊಟ್ಟೆ ಸಂಕಟ ಅರ್ಥವಾಗುವಂತದ್ದೇ ಆದರೂ ಸ್ಲಂ ಡಾಗ್ ಬಗ್ಗೆ ಇತರ ಅಪಸ್ವರಗಳು ಬಂದಿವೆ. ಈ ಚಿತ್ರದ ಶೀರ್ಷಿಕೆ ಯಲ್ಲಿ ಸ್ಲಂ ಜನರನ್ನು ಡಾಗ್ ಎಂದು ಬೈದಿದ್ದಾರೆ ಎಂಬ ಇಂಗ್ಲಿಷ್ ಕುಪಂಡಿತರ ತಗಾದೆಯಿಂದ ಪ್ರಾರಂಭಗೊಂಡು ನಿಜಕ್ಕೂ ಈ ಚಿತ್ರಕ್ಕೆ ಆಸ್ಕರ್ ಪಡೆಯುವ ಅರ್ಹತೆ ಇತ್ತೇ ಎಂಬುವರೆಗೆ ಈ ತಕರಾರುಗಳು ಹರಡಿಕೊಂಡಿವೆ. ಅವುಗಳಲ್ಲಿ ಕೆಲವು ಸಂಘಪರಿವಾರದ ಕರ್ಕಶ ಗೀತೆಗಳ ಅನುಪಲ್ಲವಿಗಳಂತಿದ್ದರೆ ಕೆಲವು ವಸಾಹತೋತ್ತರ ಸಂದರ್ಭದ ಸಾಂಸ್ಕೃತಿಕ ರಾಜಕಾರಣದ ಪ್ರಶ್ನೆಗಳನ್ನೂ ಎತ್ತುತ್ತಿವೆ.

'ಸ್ಲಂ ಡಾಗ್' ಚಿತ್ರ ಭಾರತದ ಕೆಲವು ನ್ಯೂನತೆಗಳನ್ನು ಅಂತರರಾಷ್ಟ್ರೀಯ ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ಚಿತ್ರಿಸಿ ಭಾರತದ ಮರ್ಯಾದೆ ತೆಗೆಯುತ್ತಿದೆ ಎಂಬುದು ಕೆಲವರ ತಗಾದೆ. ಇವರುಗಳ ಪ್ರಕಾರ ಈ ದೇಶದ ಬಡತನ, ಜಾತೀಯತೆ ಕೇವಲ ಕೆಲವು ನ್ಯೂನತೆಗಳು ಅಷ್ಟೆ. ಅದನ್ನು ಜಗತ್ತಿಗೆ ತೋರಿಸುವುದು ದೇಶದ್ರೋಹ. ಇವರು ಶೈನಿಂಗ್ ಇಂಡಿಯಾ ಎಂಬ ಅಗ್ರಹಾರದಲ್ಲಿರುವ ಕುಲೀನರು ಮತ್ತು ಸಂಘಪರಿವಾರದ ಗುಪ್ತ ಪ್ರಚಾರಕರು. ಈ ಮಹನೀಯರೇ ಡರ್ಬಾನ್‌ನಲ್ಲಿ ಜನಾಂಗೀಯ ದಮನದ ಬಗ್ಗೆ ನಡೆದ ಅಂತರರಾಷ್ಟ್ರಿಯ ಸಮ್ಮೇಳನದಲ್ಲಿ ಈ ದೇಶದ ದಲಿತರ ಮೇಲೆ ಸವರ್ಣೀಯರು ಮಾಡುತ್ತಿರುವ ದೌರ್ಜನ್ಯದ ಬಗ್ಗೆ ಚರ್ಚೆ ಎತ್ತಬಾರದೆಂದು ಫತ್ವಾ ಹೊರಡಿಸಿದವರು. ಅರವಿಂದ ಅಡಿಗರ 'ವೈಟ್ ಟೈಗರ್' ಪುಸ್ತಕಕ್ಕೆ ಬೂಕರ್ ಪ್ರಶಸ್ತಿ ಬಂದಾಗ ಮೂಗುಮುರಿದವರು. ಅಂದರೆ ಸಾರಾಂಶದಲ್ಲಿ ಈ ದೇಶದ ಕತ್ತಲಿನ ನಿಜವನ್ನು ಮುಚ್ಚಿಡಲು ಬಯಸುವ ಇರುಳ ಪಕ್ಷಪಾತಿಗಳು. ಹಗಲಿನ ದ್ವೇಷಿಗಳು. ಇದೀಗ ಮತ್ತೆ ಅವರೇ 'ಸ್ಲಂ ಡಾಗ್' ಚಿತ್ರದ ಬಗ್ಗೆ ಮತ್ತು ಅದಕ್ಕೆ ಆಸ್ಕರ್ ಬಂದ ಬಗ್ಗೆ ಅಸಹನೆಯನ್ನು ಬಚ್ಚಿಡಲಾಗದೆ ಕಾರಿಕೊಳ್ಳುತ್ತಿದ್ದಾರೆ. ಇವರ ಟೀಕೆಯ ಸಾರಾಂಶ ಮತ್ತು ಉದ್ದೇಶಗಳೆರಡೂ ಖಂಡನೀಯ.

ಆದರೆ 'ಸ್ಲಂ ಡಾಗ್'ಗೆ ಆಸ್ಕರ್ ಪ್ರಶಸ್ತಿ ಬಂದ ಬಗ್ಗೆ ಗಮನಿಸಲೇಬೇಕಾದ ಕೆಲವು ಗಂಭೀರ ಟೀಕೆಗಳೂ ಇವೆ. ಅವು ಸಾರಾಂಶದಲ್ಲಿ ವಸಾಹತೋತ್ತರ ಸಂದರ್ಭದ ಸಾಂಸ್ಕೃತಿಕ ರಾಜಕಾರಣಕ್ಕೆ ಸಂಬಂಧಪಟ್ಟವು. ರೆಹಮಾನ್ ಅಪ್ರತಿಮ ಸಂಗೀತಗಾರನೆಂಬುದರಲ್ಲಿ ಎರಡು ಮಾತಿಲ್ಲ. ಅವರಿಗೆ ಆಸ್ಕರ್ ಪ್ರಶಸ್ತಿ ಎಂದೋ ಬರಬೇಕಿತ್ತು. ಹಾಗೆ ನೋಡಿದಲ್ಲಿ 'ಸ್ಲಂ ಡಾಗ್' ನಲ್ಲಿ ಅವರು ಅಂತಹ ಅತ್ಯುತ್ತಮ ಸಂಗೀತವೇನೂ ನೀಡಿಲ್ಲ. ಅದೇ ರೀತಿ 'ಸ್ಲಂ ಡಾಗ್' ಅಂತಹ ಅತ್ಯುತ್ತಮ ಚಿತ್ರವೇನೂ ಅಲ್ಲ. ಹಿಂದಿಯನ್ನೂ ಒಳಗೊಂಡಂತೆ ಈ ದೇಶದ ಹಲವು ಭಾಷೆಗಳಲ್ಲಿ ಅದಕ್ಕಿಂತ ಅತ್ಯುತ್ತಮ ಚಿತ್ರಗಳು ಬಂದಿವೆ. ಬಾಲಿವುಡ್‌ನ ಹಲವು ಮಸಾಲ ಚಿತ್ರಗಳಿಗಿಂತ 'ಸ್ಲಂ ಡಾಗ್' ಭಿನ್ನವಾಗಿಯೇನೂ ಇಲ್ಲ. ಭಾರತೀಯ ನಿರ್ದೇಶಕರು 'ಸ್ಲಂ ಡಾಗ್'ಗಿಂತ ಅತ್ಯುತ್ತಮ ಚಿತ್ರ ಮಾಡಿದರೂ, ರೆಹಮಾನ್ ಇದಕ್ಕಿಂತ ಅತ್ಯುತ್ತಮ ಸಂಗೀತವನ್ನು ಹಿಂದಿ ಮತ್ತು ಇತರ ಭಾರತೀಯ ಚಿತ್ರಗಳಿಗೆ ನೀಡಿದ್ದರೂ ವಾರ್ನರ್ ಬ್ರದರ್ಸ್‌ನಂತಹ ಅಮೆರಿಕನ್ ಚಿತ್ರ ನಿರ್ಮಾಣ ಸಂಸ್ಥೆ ಮತ್ತು ಡ್ಯಾನಿ ಬೋಯಲ್‌ನಂತ ಬ್ರಿಟಿಷ್ ನಿರ್ದೇಶಕರ ಏಣಿಯಿಲ್ಲದೆ ಭಾರತೀಯ ಕಲಾವಿದರಿಗೆ ಆಸ್ಕರ್ ಮನ್ನಣೆ ಏಕೆ ಸಿಗುವುದಿಲ್ಲ? ಇದಕ್ಕೆ ಕಾರಣ ಆಸ್ಕರ್ ಮಾನದಂಡಗಳಲ್ಲಿ ಮತ್ತು ಆ ಪ್ರಶಸ್ತಿ ಪ್ರಕ್ರಿಯೆಗಳಲ್ಲೇ ಇರುವ ಜನಾಂಗೀಯ ತಾರತಮ್ಯವಲ್ಲವೇ? ಈ ಆಸ್ಕರ್ ಪ್ರಶಸ್ತಿಗಳ ಹಿಂದೆ ಒಂದು ಬಗೆಯ ಕಲಾಭಿರುಚಿಯನ್ನು ಮಾತ್ರ ಶ್ರೇಷ್ಠವೆಂದೂ ಉಳಿದದ್ದು ಕನಿಷ್ಠವೆಂದು ಪರಿಗಣಿಸುವ ಸಾಂಸ್ಕೃತಿಕ ರಾಜಕಾರಣವಿದೆ ಎಂಬುದು ಈ ಆಕ್ಷೇಪಣೆಗಳ ಸಾರಾಂಶ.

ಇದನ್ನು ಎಟುಕದ ದ್ರಾಕ್ಷಿ ಹುಳಿ ಎನ್ನುವವರ ಟೀಕೆ ಎನ್ನಲಾಗದು. ಈ ತಕರಾರಿನ ಹಿಂದೆ ಚಾರಿತ್ರಿಕವಾದ ಮತ್ತು ಸಮಕಾಲೀನವೂ ಆಗಿರುವ ಕೆಲವು ರಾಜಕೀಯ ಮತ್ತು ಸಾಂಸ್ಕೃತಿಕ ಸತ್ಯಗಳು ಅಡಗಿವೆ. 'ಸ್ಲಂ ಡಾಗ್'ನಲ್ಲಿರುವ ರೆಹಮಾನ್‌ರ 'ಜೈ ಹೋ' ಹಾಡು ಕುಣಿಸುತ್ತದೆ. ಆದರೆ ಅದು ಅವರು 'ರೋಜಾ'ದಲ್ಲಿ ನೀಡಿದ ಅಥವಾ ಆಸ್ಕರ್ ಪ್ರಶಸ್ತಿಗೆ ನಾಮಕರಣಗೊಂಡಿದ್ದ 'ಲಗಾನ್' ಚಿತ್ರದ ಸಂಗೀತಕ್ಕಿಂತ ಅದ್ಭುತವಾದದ್ದು ಎಂದು ಯಾವ ಮಾನದಂಡದಲ್ಲೂ ಹೇಳಲು ಸಾಧ್ಯ?

ಆಸ್ಕರ್ ಪ್ರಶಸ್ತಿಯನ್ನು 'ಅಕಾಡೆಮಿ ಆಫ್ ಮೋಷನ್ ಪಿಕ್ಚರ್ಸ್ ಆರ್ಟ್ ಅಂಡ್ ಸೈನ್ಸಸ್'ನ 6000 ಸದಸ್ಯರು ನೀಡುವ ಓಟಿನ ಆಧಾರದಲ್ಲಿ ನಿರ್ಧರಿಸಲಾಗುತ್ತದೆ. ಅಂದರೆ ಈ 6000 ಸದಸ್ಯರ ಸಾಂಸ್ಕೃತಿಕ ಅಭಿರುಚಿ ಮತ್ತು ಮಾನದಂಡಗಳೇ ಒಂದು ಚಿತ್ರದ ಜಾಗತಿಕ ಗುಣಮಟ್ಟವನ್ನು ನಿರ್ಧರಿಸುತ್ತದೆ ಎಂದಾಯ್ತು. ಆದರೆ ಜಗತ್ತು ಹಲವು ಸಂಸ್ಕೃತಿಗಳ ರಂಗಮಂಚ. ಭಾರತದಂಥ ಒಂದೇ ದೇಶದಲ್ಲಿ ನೂರಾರು ಬಗೆಯ ಸಂಸ್ಕೃತಿಗಳಿವೆ. ಯಾವುದು ಉತ್ತಮ, ಯಾವುದು ಅಲ್ಲ ಎನ್ನುವುದರ ಬಗ್ಗೆ ಒಂದೊಂದು ಸಂಸ್ಕೃತಿಗೆ ಒಂದೊಂದು ಮಾನದಂಡಗಳಿರುತ್ತವೆ. ಉದಾಹರಣೆಗೆ ಯಾವುದು ಸುಂದರ ಎಂಬ ಬಗ್ಗೆ ಕಪ್ಪು ಜನರ ಅಭಿರುಚಿಗೂ, ಬಿಳಿಯರ ಅಭಿರುಚಿಗೂ ಭೂಮ್ಯಾಕಾಶದಷ್ಟು ವ್ಯತ್ಯಾಸಗಳಿರುತ್ತವೆ. ಹೀಗಿರುವಾಗ ಕಲಾಭಿರುಚಿಯಲ್ಲಿ ಶ್ರೇಷ್ಠ ಮತ್ತು ಕನಿಷ್ಠ ಎಂಬ ಮಾನದಂಡಗಳನ್ನು ಹೇರುವುದು ಯಾವಾಗಲೂ ಒಂದು ಸಂಸ್ಕೃತಿಯ ಮೇಲೆ ಇನ್ನೊಂದು ಸಂಸ್ಕೃತಿಯ ಆಕ್ರಮಣವೇ ಆಗಿರುತ್ತದೆ. ಅದರಲ್ಲೂ ಈ ಅಕಾಡೆಮಿಯ 6000 ಸದಸ್ಯರಲ್ಲಿ ಬಿಳಿಯೇತರ ಸದಸ್ಯರೆಷ್ಟು? ಭಾರತ, ಆಫ್ರಿಕಾ, ಲ್ಯಾಟಿನ್ ಅಮೆರಿಕದಂತಹ ಮೂರನೇ ಜಗತ್ತಿನ ದೇಶದ ಸದಸ್ಯರೆಷ್ಟು? ಅವರಿಲ್ಲದಿದ್ದರೂ ಇತರ ಸಂಸ್ಕೃತಿಗಳ ಮಾನದಂಡಗಳ ಬಗ್ಗೆ ಅವರಿಗಿರುವ ಅರಿವೆಷ್ಟು?

ಭಾರತೀಯರಿಗೆ ಆಸ್ಕರ್ ಪ್ರಶಸ್ತಿ ದಕ್ಕಿರುವ ಸಂಭ್ರಮ ದಲ್ಲಿ ಈ ಮೇಲಿನ ಪ್ರಶ್ನೆಗಳನ್ನು ಮರೆತುಬಿಡುವುದು ಆತ್ಮಘಾತುಕತನವೇ ಆಗುತ್ತದೆ. ಏಕೆಂದರೆ ಆ ಮೂಲಕ ಆಸ್ಕರ್ ಪ್ರಶಸ್ತಿ ಪಡೆದ ಚಿತ್ರದ ಸಂಗೀತ, ಕಥೆ, ಚಿತ್ರಕಥೆ ಇನ್ನಿತರ ಚಿತ್ರರಂಗದ 14 ಕ್ಷೇತ್ರಗಳ ಸಾಧನೆಗಳು ಮಾತ್ರ ಅತ್ಯುತ್ತಮ. ಮಿಕ್ಕವು ಅಲ್ಲ ಎಂಬ ಅಭಿಪ್ರಾಯಕ್ಕೆ ಇನ್ನಷ್ಟು ಮನ್ನಣೆ ಸಿಕ್ಕಿ ಬಿಡುತ್ತದೆ. ಆ ಬಗೆಯ ಅಭಿಪ್ರಾಯ ಮತ್ತೊಂದು ಬಗೆಯಲ್ಲಿ ನಮ್ಮ ಅಭಿರುಚಿಗಳನ್ನು ಸಾಂಸ್ಕೃತಿಕ ವಸಾಹತೀಕರಣಕ್ಕೆ ಗುರಿಪಡಿಸುತ್ತದೆ. ಆದ್ದರಿಂದ ಈ ಪ್ರಶ್ನೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಲೇಬೇಕು.

ಇವಿಷ್ಟು ಆಸ್ಕರ್ ಪ್ರಶಸ್ತಿಯ ಸಾಂಸ್ಕೃತಿಕ ರಾಜಕಾರಣ. ಆದರೆ ಆಸ್ಕರ್ ಪ್ರಶಸ್ತಿ ಕೇವಲ ಸಾಂಸ್ಕೃತಿಕ ವಿದ್ಯಮಾನವೇನಲ್ಲ. ಅದೊಂದು ರಾಜಕೀಯ ಮತ್ತು ಆರ್ಥಿಕ ವಿದ್ಯಮಾನವೂ ಹೌದು. 'ಸ್ಲಂ ಡಾಗ್' ಚಿತ್ರ ಆಸ್ಕರ್‌ಗೆ ನಾಮಕರಣಗೊಂಡಾಗಲೇ ಅದಕ್ಕೆ ಪ್ರಶಸ್ತಿ ಸಿಕ್ಕೇ ಸಿಗುತ್ತದೆ ಎಂದು ಅಮೆರಿಕದ ಮಾಧ್ಯಮಗಳು ಮತ್ತು ಚಿತ್ರೋದ್ಯಮಿಗಳು ಭವಿಷ್ಯ ನುಡಿದಿದ್ದರು. ಚಿತ್ರೋದ್ಯಮಿಗಳು ಈ ಭವಿಷ್ಯ ನುಡಿದಿದ್ದು ಚಿತ್ರ ನೋಡಿದ ನಂತರವಲ್ಲ, ಚಿತ್ರದ ಗುಣಮಟ್ಟದ ಬಗೆಗಿನ ಮೆಚ್ಚುಗೆಯಿಂದಲೂ ಅಲ್ಲ, ಬದಲಿಗೆ ಆ ಚಿತ್ರವನ್ನು ನಿರ್ಮಿಸಿದ್ದು ಹಾಲಿವುಡ್ಡಿನ ಅತಿ ಶ್ರೀಮಂತ ಉದ್ಯಮ ಸಂಸ್ಥೆಯಾದ ಟೈಮ್-ವಾರ್ನರ್ ಸಂಸ್ಥೆ. ಹೀಗಾಗಿ ಆಸ್ಕರ್ ಪ್ರಶಸ್ತಿ ಮತ್ತು ಅದು ತರುತ್ತಿರುವ ಉದ್ಯಮ ಸಂಸ್ಕೃತಿಯ ಹಿಂದೆ ಮತ್ತು ಅದು ಬಿತ್ತಬಯಸುವ ಸಾಮಾಜಿಕ ಮೌಲ್ಯಗಳ ಹಿಂದೆಯೂ ಜಾಗತೀಕರಣದ ಕಾಲಘಟ್ಟದ ಸಾಮ್ರಾಜ್ಯಶಾಹಿ ರಾಜಕೀಯ-ಆರ್ಥಿಕತೆ ಇದೆ. ಅದನ್ನು ಮುಂದಿನ ವಾರ ವಿಶ್ಲೇಷಿಸೋಣ! ■

No Comments

"ಸಂಸತ್ ಕಲಾಪದ ಶೇ.24 ರಷ್ಟು ಅವಧಿ ವ್ಯರ್ಥವಾಗಿರುವುದು ಕಳವಳಕಾರಿ ಬೆಳವಣಿಗೆ. ಆರಿಸಿ ಕಳಿಸಿದ ಮತದಾರರ ಮೇಲಿನ ಕಾಳಜಿಗಿಂತ ರಾಜಕೀಯ ಸಂಘರ್ಷವೇ ಹೆಚ್ಚೆನ್ನುವಂತೆ ಸದಸ್ಯರು ವರ್ತಿಸುತ್ತಿರುವುದು ವಿಷಾದನೀಯ."

-ಸೋಮನಾಥ ಚಟರ್ಜಿ

"ಹಿಂದೂ ಧರ್ಮ ಒಂದರಲ್ಲೇ ಸುಮಾರು 2756 ಉಪಜಾತಿಗಳಿದ್ದು ಎಲ್ಲಾ ಜಾತಿಗಳ ಮಠಮಾನ್ಯಗಳಿಗೂ ಹಣ ನೀಡುತ್ತಾ ಹೋದರೆ ಬಜೆಟ್ಟಿನಲ್ಲಿರೋ ಹಣವೂ ಸಾಕಾಗುವುದಿಲ್ಲ, ಜನೋಪಯೋಗಿ ಯೋಜನೆಗಳಿಗೂ ಹಣವಿರುವುದಿಲ್ಲ."

- ಸಿದ್ದರಾಮಯ್ಯ

"ನಾನು ಮುಖ್ಯಮಂತ್ರಿಯಾಗಿರುವುದು ಮಠ-ಮಂದಿರಗಳ ಆಶೀರ್ವಾದದಿಂದ."

-ಯಡಿಯೂರಪ್ಪ

"ಈ ಸರ್ಕಾರ ಎಮ್ಮೆ ಚರ್ಮದ್ದು, ಸ್ವಲ್ಪವೂ ಸೂಕ್ಷ್ಮತೆಯಿಲ್ಲ, ಮನುಷ್ಯ ಚರ್ಮವಾಗಿದ್ದರೆ ಒಮ್ಮೆ ಚುಚ್ಚಿದ್ದರೆ ಗೊತ್ತಾಗುತ್ತಿತ್ತು."

-ಮಲ್ಲಿಕಾರ್ಜುನ ಖರ್ಗೆ

"ಬಳ್ಳಾರಿಯ ಗಡಿಭಾಗವನ್ನು ಏಕಪಕ್ಷೀಯವಾಗಿ ಗುರುತಿಸಿರುವುದರ ಹಿಂದೆ ಕೆಲವೇ ವ್ಯಕ್ತಿಗಳಿಗೆ ಅನುಕೂಲ ಮಾಡಿಕೊಡುವ ಮತ್ತು ರಾಜ್ಯದ ಖನಿಜ ಸಂಪತ್ತನ್ನು ಕೊಳ್ಳೆ ಹೊಡೆಯುವ ಸಂಚಿದೆ."

-ಲೋಕಾಯುಕ್ತ ಸಂತೋಷ್ ಹೆಗ್ಡೆ

"ನಿರಂತರ ವಿದ್ಯುತ್ ಪೂರೈಕೆ ಮಾತಿನಲ್ಲಿ, ನಿರಂತರ ಲೋಡ್ ಶೆಡ್ಡಿಂಗ್ ಕೃತಿಯಲ್ಲಿ."

- ಶ್ರೀನಿವಾಸ್ ಪ್ರಸಾದ್

ನಂಬಿದ್ರೆನಂಬಿ ಬಿಟ್ರೆಬಿಡಿ

"ಬಳ್ಳಾರಿ ಮತ್ತು ರಾಯದುರ್ಗದ ನಡುವೆ ಇರುವ ಸಾಮಾನ್ಯ ಗಡಿಯೇ ಇನ್ನೂ ನಿರ್ಧಾರವಾಗಿಲ್ಲವೆಂಬುದು ಆಂಧ್ರ ಸರ್ಕಾರದ ಹೊಸ ತಗಾದೆ. ಆದರೆ ಈ ಬಗ್ಗೆ ಆಂಧ್ರವು ರಾಜ್ಯಕ್ಕೆ ಬರೆದ ಪತ್ರಕ್ಕೆ ಬಿಜೆಪಿ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡದೆ ಮುಚ್ಚಿಟ್ಟಿದೆ."

-ಪತ್ರಿಕಾ ವರದಿ

"ದೇವರ ಮೇಲೆ ಆಣೆ ಮಾಡಿ ಹೇಳುತ್ತೀನಿ, ನನ್ನ ಮಗ ಲೋಕಸಭಾ ಅಭ್ಯರ್ಥಿಯಲ್ಲ."

-ಯಡಿಯೂರಪ್ಪ

"ಯಾವಾಗ ಬೇಕಾದರೂ ಚುನಾವಣಾ ಆಯೋಗ ಲೋಕಸಭಾ ಚುನಾವಣೆಯನ್ನು ಘೋಷಿಸುವ ಸಾಧ್ಯತೆ ಇರುವುದರಿಂದ ಕಳೆದ ಸೋಮವಾರ ನಡೆದ ಕೇಂದ್ರದ ಕ್ಯಾಬಿನೆಟ್ ಸಭೆಯಲ್ಲಿ ಪ್ರತಿ ಮೂರು ನಿಮಿಷಕ್ಕೊಂದರಂತೆ 70 ಯೋಜನೆಗಳಿಗೆ ಅನುಮತಿ ನೀಡಲಾಯಿತು."

-ಪತ್ರಿಕಾ ವರದಿ

"ನನ್ನ ಪ್ರಾಮಾಣಿಕ ಸೇವೆ ಸಹಿಸದ ಕೆಲವರು ವ್ಯವಸ್ಥಿತ ಪಿತೂರಿ ನಡೆಸಿ ನನ್ನನ್ನು ವರ್ಗಾಗೊಳಿಸುವಲ್ಲಿ ಯಶಸ್ವಿಯಾದರು."

-ಮಾಲಿನಿ, ಮಂಪರು ಪರೀಕ್ಷೆ ಮಾಡುತ್ತಿದ್ದ ಅಧಿಕಾರಿ

ದಲಿತರು ದೇವರಾದರೂ ಅಸ್ಪೃಶ್ಯರೇ!

"ಬಜೆಟ್ಟಿನಲ್ಲಿ ಬಲಾಢ್ಯ ದೇವರಿಗೆ ಹಣ ಹಂಚಲಾಗಿದೆ, ತಿಪ್ಪಮ್ಮ, ಮಾರಮ್ಮನಂಥ ಬಡ ದೇವರುಗಳತ್ತ ನೋಡಿಯೂ ಇಲ್ಲ."

-ಖರ್ಗೆ

ಹೈಲ್ ಹಿಟ್ಲರ್!

"ಮೊನ್ನೆ ಯಡಿಯೂರಪ್ಪನವರ ಮಂತ್ರಿಮಂಡಲದ ಮಂತ್ರಿಯೊಬ್ಬರು ನಾನೇ ಸರ್ಕಾರ, ನನ್ನ ವಿರುದ್ಧವಾಗಿ ಮಾತಾಡುತ್ತಿರುವವರನ್ನು ಹೊರಹಾಕಿ ಎಂದರಂತೆ. ಈಗ ಬಿಎಸ್‌ವೈರವರ ಸರ್ಕಾರದಲ್ಲಿ 42 ಮಂತ್ರಿಗಳು ಮತ್ತು ತತ್ಸಮಾನ ದರ್ಜೆಯವರೂ ಸೇರಿ ನೂರು ಜನ ಮಂತ್ರಿಗಳಿದ್ದಾರೆ. ಅಂದರೆ ಕರ್ನಾಟಕದಲ್ಲೀಗ ನೂರು ಸರ್ಕಾರಗಳಿವೆ!"

- ಸೂರ್ಯನಾರಾಯಣ.ಹೆಚ್.ಎಸ್.

ವಾಚಕರ ವಾಣಿಯಲ್ಲಿ

ಪ್ಯಾರ್! ತುಜೇ ಸಲಾಂ!

"ಆಸ್ಕರ್ ಪಡೆದ ನನ್ನ ಈ ಯಶಸ್ಸು ದ್ವೇಷದ ಬದಲಿಗೆ ಪ್ರೀತಿಯನ್ನೇ ಆಯ್ಕೆ ಮಾಡಿಕೊಂಡ ನನ್ನ ಆಯ್ಕೆಗೆ ಸಮರ್ಪಿತ."

-ಎ.ಆರ್. ರೆಹಮಾನ್

ಬಿಜೆಪಿಯನ್ನು ಆಯ್ಕೆ ಮಾಡಿದ ಪಾಪ!

"ಯಾರದೋ ಪಾಪಕ್ಕೆ ಮಳೆ-ಬೆಳೆ ಆಗ್ತಾ ಇಲ್ಲ, ದೇವರ ದಯೆಯಿಂದಲಾದರೂ ಮಳೆ-ಬೆಳೆ ಆಗಲಿ ಎಂದು ದೇವಸ್ಥಾನಗಳಿಗೆ ಹಣ ಕೊಟ್ಟಿದ್ದೇನೆ."

-ಯಡಿಯೂರಪ್ಪ

ಚಿಂತಕರ ಚಾವಡಿ

ನ್ಯಾಯಾಧೀಶರುಗಳಿಗೆ ಒಂದು ಬುದ್ಧಿಮಾತು!



"ಸುಪ್ರೀಂಕೋರ್ಟಿನ ಮತ್ತು ಹೈಕೋರ್ಟಿನ ನ್ಯಾಯಾಧೀಶರುಗಳು ತಮ್ಮ ಆಸ್ತಿಪಾಸ್ತಿಗಳ ಲೆಕ್ಕವನ್ನು ಬಹಿರಂಗವಾಗಿ ಘೋಷಿಸುವುದು ಒಳ್ಳೆಯ ಮೇಲ್ಪಂಕ್ತಿ ಹಾಕಿಕೊಡುತ್ತದೆ ಎಂದು ಸುಪ್ರೀಂಕೋರ್ಟಿನ ಹಲವರು ನಿವೃತ್ತ ಮುಖ್ಯ ನ್ಯಾಯಾಧೀಶರುಗಳನ್ನೂ ಒಳಗೊಂಡಂತೆ ಗಣ್ಯರಾದ ದೇಶದ ಹಲವಾರು ಮಾಜಿ ನ್ಯಾಯಮೂರ್ತಿಗಳು ಸಾರ್ವಜನಿಕವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಮಾಡಿದಲ್ಲಿ ಅವರ ಮೇಲ್ಪಂಕ್ತಿಯನ್ನು ಸಾರ್ವಜನಿಕ ಸೇವೆಯಲ್ಲಿರುವ ಇತರರೂ ಅನುಸರಿಸುತ್ತಾರೆ. ಆದ್ದರಿಂದ ಸ್ವಯಂಪ್ರೇರಣೆಯಿಂದಲೇ ನ್ಯಾಯಾಧೀಶರುಗಳು ತಮ್ಮ ಆಸ್ತಿಪಾಸ್ತಿಯನ್ನು ಬಹಿರಂಗಪಡಿಸಬೇಕೆಂದು ನಾವು ಕರೆ ನೀಡುತ್ತೇವೆ.

- ಆರ್.ಹೆಚ್.ತಹಿಲಿಯಾನಿ,
ಅರುಣಾ ರಾಯ್, ರಾಮಸ್ವಾಮಿ ಐಯರ್,
ಅಮಿತ್ ಬಾಧುರಿ,
ಜೀನ್ ಡ್ರೇಜ್,
ಪ್ರಶಾಂತ್ ಭೂಷಣ್ ಮತ್ತಿತರರು


ಇದು ನಮ್ಮ ತಂಡ

ನಿಮ್ಮ ಈ ಪತ್ರಿಕೆ ತನ್ನ ನೇ ವರ್ಷಕ್ಕೆ ಕಾಲಿಡುತ್ತಿರುವ ಸಂತೋಷದ ಸಂದರ್ಭದಲ್ಲಿ ಪತ್ರಿಕೆ ಹಾದುಬಂದಿರುವ), ಎದುರಿಸಿರುವ ಸಮಸ್ಯೆ ವಿಗಳ ಬಗ್ಗೆ ಬರೆಯಬಹುದು. ರೆ ಅದೆಲ್ಲ ನಿಮಗೆ ತ್ತಿರುವುದರಿಂದ ಅದರ ಬಗ್ಗೆ ಯುದೆ. ಈ ಪಯಣದಲ್ಲಿ ನಾತಿಗಳಾಗಿರುವವರ ಬಗ್ಗೆ ಈ) ಬರೆಯಬೇಕೆನಿಸುತ್ತದೆ.

ಅದಕ್ಕೆ ಕಾರಣವೂ ಇದೆ. ೇನೆಂದರೆ ಇವರೆಲ್ಲ ಇರದಿದ್ದರೆ ಈ ಪಯಣವೇ ವಾಗುತ್ತಿರಲಿಲ್ಲ ಎಂಬುದು. ಅವರಲ್ಲಿ ಹಲವರ ನನ್ನು, ಅವರು ಬರೆದಿರುವ ಲೇಖನ/ ದಿಗಳನ್ನು ಓದಿರುತ್ತೀರಿ. ಆದರೆ ಅವರ ಬಗ್ಗೆ ನಿಗೆ ಹೆಚ್ಚು ಗೊತ್ತಿರುವುದಿಲ್ಲ. ಹಾಗೆಯೇ ಕೆಯಲ್ಲಿ ತಮ್ಮ ಹೆಸರು ಕಾಣದಿದ್ದರೂ ಇದರ ಶಸ್ಸಿಗೆ ಶ್ರಮಿಸುತ್ತಿರುವವರೂ ಇರುತ್ತಾರೆ. ಯಾರೆಂದು ಜನರಿಗೆ ಗೊತ್ತಿಲ್ಲದಿದ್ದರೂ ಅವರೂ ಸಂಸ್ಥೆಯ ಪ್ರತಿದಿನದ ರ್ವಭಾರಕ್ಕೆ, ದೀರ್ಘಕಾಲದ ವಿಗೆ ಮುಖ್ಯ. ಆದ್ದರಿಂದ ನಮ್ಮ ಡದ ಸದಸ್ಯರನ್ನು ನಿಮಗೆ ಚಯಿಸುತ್ತಿದ್ದೇನೆ.

ಸತೀಶ್: ನಮ್ಮ ಈ ಸತೀಶ್‌ನನ್ನು ಮ್ಸ್ ಬಾಂಡಿಗೆ ಹೋಲಿಸಬಹುದು. ಕೆಂದರೆ ಜೇಮ್ಸ್ ಬಾಂಡ್‌ನಂತೆ ಾತ ಚಂದವಾಗಿರುವ ಮತ್ತು ಲೇಟೆಸ್ಟ್ ುವ ಶರ್ಟ್, ಪ್ಯಾಂಟ್, ಜಾಕೆಟ್, ಲಿಂಗ್ ಗ್ಲಾಸ್ ಮತ್ತು ಮೊಬೈಲ್ ನ್ನು ಹೊಂದಿರುವ ಹುಡುಗನೀತ. ಅಷ್ಟೇ ಅಲ್ಲ, ನ ಬೆರಳುಗಳು ಎಷ್ಟು ಚುರುಕೆಂದರೆ ಜೇಮ್ಸ್ ಡ್ ತನ್ನ ಗನ್ ತೆಗೆದು ಹತ್ತು ಜನರತ್ತ ಗುಂಡು ಸುವ ವೇಗದಲ್ಲೇ ಈ ಹುಡುಗ ಹತ್ತಾರು ಗಳನ್ನು ಕಂಪೋಸ್ ಮಾಡಿಬಿಟ್ಟಿರುತ್ತಾನೆ. ಅದೂ ಕಟ್ಟಾಗಿ. ಯಾವುದೋ ಕಾಲದ ಪ್ರಾಚೀನ ಗಳನ್ನು ಹೋಲುವ ನಮ್ಮ ಸದಾಶಿವ ಶೆಣೈರವರ ರಹವನ್ನೂ, ಬರೆಯುವ ರಭಸದಲ್ಲಿ ಅಕ್ಷರಗಳನ್ನೆ ಿರುವ ನನ್ನ ಹಸ್ತಾಕ್ಷರವನ್ನೂ ಸತೀಶ್ ಸರಿಯಾಗಿ ಡಿಸುತ್ತಾನೆಂದರೆ ಅದು ಸಾಮಾನ್ಯ ಕಲೆ ಅಲ್ಲ! ಶ್ ನಮ್ಮ technical ತಂಡದ ಹಿರಿಯನೂ ತು, ಅದರ ಮುಖ್ಯಸ್ಥನೂ ಹೌದು.


ಮೊದಲಿನಿಂದಲೂ ನನ್ನೊಂದಿಗಿರುವ ಸತೀಶ್,) ಅಪಾರವಾಗಿ ನಂಬಿಕೆ ಇಟ್ಟಿರುವ ಹುಡುಗ. ಸಂಸ್ಥೆ ಬಗ್ಗೆ, ನಮ್ಮ ತಂಡದ ಬಗ್ಗೆ ನನ್ನಷ್ಟೇ ಜಿ ಹೊಂದಿರುವ ಸತೀಶ್ ಎಂತಹ ಹುಡುಗ ದರೆ ತನ್ನ ತಂದೆಗೆ ಕಾಯಿಲೆ ಆಗಿದ್ದಾಗಲೂ ಕೇಶ್' ಕೆಲಸಕ್ಕೆ ಯಾವುದೇ ತೊಂದರೆ ಆಗದಂತೆ ನೋಡಿಕೊಂಡ. ಸದಾ ನಗುಮುಖದ ಸತೀಶ್ ಒಂದೆಡೆ ಇತರರನ್ನು ಕಿಚಾಯಿಸುತ್ತಾ ಎಲ್ಲರನ್ನು ನಗಿಸುತ್ತಿರುತ್ತಾನೆ, ಇನ್ನೊಂದೆಡೆ ಯಾವ ಕಾರಣಕ್ಕೂ ಪತ್ರಿಕೆಯ ಕೆಲಸಕ್ಕೆ ಧಕ್ಕೆಬಾರದಂತೆ ಎಚ್ಚರಿಕೆ ವಹಿಸುತ್ತಾನೆ.


ಸತೀಶ್

ಅರುಣ್: 25 ವರ್ಷದ ಅರುಣ್ ನಮ್ಮ ತಂಡದ 'ಪಾಪು'. ಪುಟ್ಟ ಮಕ್ಕಳಂತೆ ಹಲವೊಮ್ಮೆ ಈತ ಮುನಿಸಿಕೊಂಡರೂ, ಅದೇ ಪಾಪುಗಳಂತೆ ಮುಗ್ಧ ಪ್ರೀತಿಯನ್ನು ತೋರುವ ಹುಡುಗ. ನನಗೆ ತಿಳಿದಿರುವಂತೆ ಐದಾರು ವರ್ಷಗಳ ಹಿಂದೆ ಅರುಣ್‌ಗೆ ಕಂಪ್ಯೂಟರ್ ಎಂದರೇನೆಂದೇ ಗೊತ್ತಿರಲಿಲ್ಲ. ಅದರ ಬಗ್ಗೆ ಯಾರೂ ಆತನಿಗೆ ಹೇಳಿಕೊಡಲಿಲ್ಲ. ಆದರೆ ಅರುಣ್ ಸಾಮಾನ್ಯ ಹುಡುಗನಲ್ಲ. ತನ್ನ ಸ್ವಂತ ಆಸಕ್ತಿಯಿಂದಲೇ ಕಂಪ್ಯೂಟರ್‌ನ ಹಲವಾರು ಕಲೆಗಳನ್ನು ಕರಗತ ಮಾಡಿಕೊಂಡ ಈ ಹುಡುಗ ಇವತ್ತು ಪತ್ರಿಕೆ ಮತ್ತು ಗೈಡ್ ಮಾತ್ರವಲ್ಲ, ನಮ್ಮ ಎರಡೂ ಪ್ರಕಾಶನಗಳ ಪುಸ್ತಕಗಳನ್ನು, ಅವುಗಳ ಮುಖಪುಟಗಳನ್ನೂ ರೂಪಿಸುವ ಕಲಾವಿದ.

ಬಣ್ಣಗಳ ಬಗ್ಗೆ, ವಿನ್ಯಾಸದ ಬಗ್ಗೆ ಅರುಣ್‌ನದ್ದು ಎಂತಹ ಸದಭಿರುಚಿ ಎಂದರೆ ಇವತ್ತು ಹಲವಾರು ಬರಹಗಾರರು ಮತ್ತು ಚಿತ್ರೋದ್ಯಮಿಗಳು ತಮ್ಮ ಪುಸ್ತಕದ ಹೊದಿಕೆಯನ್ನು, ಸಿನಿಮಾದ ಪೋಸ್ಟರ್‌ಗಳನ್ನು ರೂಪಿಸಿಕೊಡುವಂತೆ ಇವನ ಬೆನ್ನು ಹತ್ತುತ್ತಾರೆ. ಅವರೆಲ್ಲರ ಬೇಡಿಕೆಗಳನ್ನು ಪೂರೈಸಲು ದಿನದ 24 ಗಂಟೆಗಳೂ ಅರುಣ್‌ಗೆ ಸಾಲುತ್ತಿಲ್ಲ. ಇದೆಲ್ಲದರ ಮಧ್ಯೆಯೂ ತನ್ನ ಬಿಎ ಮುಗಿಸಿಕೊಂಡ ಅರುಣ್‌ಗೆ ಬರೆಯುವುದರ ಬಗ್ಗೆಯೂ ಅಪಾರ ಆಸಕ್ತಿ. ಆ ನಿಟ್ಟಿನಲ್ಲೂ ಈಗ ಕ್ರಿಯಾಶೀಲನಾಗಿರುವ ಅರುಣ್ ಇತ್ತೀಚೆಗೆ ನಮ್ಮ ಸಿನಿಮಾ ಪುಟಗಳಲ್ಲೂ ಬರೆಯುತ್ತಿರುವುನ್ನು ನೀವು ಖಂಡಿತವಾಗಿಯೂ ಗಮನಿಸಿರುತ್ತೀರಿ. ಹೊಸ ಪೀಳಿಗೆಯ 'ಪದ ಪ್ರಯೋಗ'ಗಳು ಅದರಲ್ಲಿ ವ್ಯಕ್ತವಾಗುತ್ತಿರುವುದು ನನಗೆ ಸಂತೋಷ ನೀಡಿದೆ.


ಅರುಣ್


ರಾಜು

ರಾಜು: ಇಂಗ್ಲಿಷಿನಲ್ಲಿ 'uncut diamond' ಅಂತಾರೆ. ಸಾಣೆ ಹಿಡಿದಿರದ ವಜ್ರಗಳು ಒರಟು, ಕೈಗಳಿಗೆ ತರಚು ಗಾಯ ಮಾಡುವಂತಹವು. ಆದರೂ ಅಪಾರ ಮೌಲ್ಯದ ವಜ್ರಗಳು! ಅಂತಹ ಡೈಮಂಡ್ ನಮ್ಮ ರಾಜು.

ಈ ರಾಜು ಮಾಡುವ ತರಚುಗಾಯಗಳ ಒಂದು ಇತ್ತೀಚಿನ ಉದಾಹರಣೆ: ನಮ್ಮ ಆಫೀಸಿನ ಫ್ಯಾಕ್ಸ್ ನಂಬರ್ ಕೇಳಿ ಚಂಪಾ ಅವರು ಫೋನ್ ಮಾಡಿದ್ದರೆ ಅತ್ತ ಕಡೆ ಇರುವವರು ಯಾರೆಂದು ಗೊತ್ತಾಗದೆ "ಫ್ಯಾಕ್ಸ್ ಕೆಟ್ಟೋಗಿದೆ, ನಿಮ್ಮ ಪತ್ರನ ಪೋಸ್ಟ್ ಮಾಡಿ" ಎಂದು ಫೋನ್ ಕುಕ್ಕಿದ್ದರು ರಾಜು. ಆಮೇಲೆ ನಿಜಸಂಗತಿ ಗೊತ್ತಾಗಿ ರಾಜು ಮುಜುಗರಪಟ್ಟುಕೊಂಡರು.

ರಾಜು ಇಲ್ಲದಿದ್ದರೆ ನಮ್ಮ ಸಂಸ್ಥೆ ಇವತ್ತು ಅಸ್ತಿತ್ವದಲ್ಲೇ ಇರುತ್ತಿರಲಿಲ್ಲ ಎಂದು ಹೇಳಿದರೆ ನಿಮಗೆ ಅಚ್ಚರಿಯಾಗಬಹುದು, ಆದರೆ ಅದು ವಾಸ್ತವ.

ನನಗಿನ್ನೂ ನೆನಪಿದೆ. ಸರಿಯಾಗಿ ನಾಲ್ಕು ವರ್ಷಗಳ ಹಿಂದೆ ಲಂಕೇಶ್ ಅವರ ಪತ್ರಿಕೆಗೆ ಮರುಜನ್ಮ ನೀಡಲು ನಾವೆಲ್ಲ ನಿರ್ಧರಿಸಿದಾಗ ನಾನು ಮೊದಲು ಫೋನ್ ಮಾಡಿದ್ದೇ ರಾಜುಗೆ. ಅದೆಂತಹ ಕಾಕತಾಳೀಯ ಅಂತೀರಿ: ನಾನು ಫೋನ್ ಮಾಡಿದಾಗ ರಾಜು ಮತ್ತೊಂದು ಪತ್ರಿಕೆಯ ವಿತರಣಾ ವ್ಯವಸ್ಥಾಪಕರಾಗಲು ಹೋಗುತ್ತಿದ್ದರು. ಆದರೆ ನಾನು ಕರೆ ಮಾಡಿದ್ದರಿಂದ ತಮ್ಮ ಸ್ಕೂಟರ್ ಅನ್ನು ನಮ್ಮ ಆಫೀಸಿನ ದಿಕ್ಕಿನತ್ತ ತಿರುಗಿಸಿ ನಮ್ಮ ತಂಡದ ಸದಸ್ಯರಾದರು.


ಹಾಗೆ ನೋಡಿದರೆ ನಮ್ಮ ಈಗಿನ ತಂಡದ 'ಹಿರಿಯಣ್ಣ' ರಾಜು. ವಿದ್ಯಾಭ್ಯಾಸದತ್ತ ಹೆಚ್ಚು ಗಮನ ಕೊಡದಿದ್ದ ರಾಜು ಚಿಕ್ಕ ಹುಡುಗನಾಗಿದ್ದಾಗಲೇ ಅಪ್ಪನ ತಂಡ ಸೇರಿದ್ದವರು. ಆಗ ಅಪ್ಪ ಬೆಂಗಳೂರು ಬಸ್ ಸ್ಟಾಂಡಿನಲ್ಲಿರುವ ಪುಸ್ತಕದ ಮಳಿಗೆಯನ್ನು ನಡೆಸುತ್ತಿದ್ದರು. ಆ ಅಂಗಡಿಗೆ ಸೇರಿದ ರಾಜು ಅಲ್ಲಿಂದ ಪತ್ರಿಕೆಯ ವಿತರಣೆ, ಪ್ರಕಟಣೆ-ಹೀಗೆ ಒಂದೊಂದೇ ಜವಾಬ್ದಾರಿಗಳನ್ನು ತನ್ನ ಹೆಗಲಿಗೇರಿಸಿಕೊಂಡು ಸಂಸ್ಥೆಯಲ್ಲಿ ಬೆಳೆದವರು. ಕರ್ನಾಟಕದ ಪ್ರತಿ ಇಂಚು ಬಲ್ಲ ರಾಜು ಏಜೆಂಟರನ್ನು ಭೇಟಿಯಾಗಲು ಇಡೀ ರಾಜ್ಯವನ್ನೇ ಸುಂಟರಗಾಳಿಯಂತೆ ಸುತ್ತಾಡಿ ಬರಬಲ್ಲರು. ಪುಸ್ತಕಗಳ ಬಗ್ಗೆ ಅಪಾರ ಆಸಕ್ತಿ ಹೊಂದಿರುವ ರಾಜು ತಮ್ಮ ಕುತೂಹಲ ಕೆರಳಿಸುವ ಪುಸ್ತಕವನ್ನು ಒಂದೇ ದಿನದಲ್ಲಿ ಓದಿ ಮುಗಿಸಬಲ್ಲರು.



ಕಂಡಹಾಗೆ

ಗೌರಿ ಲಂಕೇಶ್

ಇವತ್ತು ನಮ್ಮ ಸಂಸ್ಥೆ ಭದ್ರವಾಗಿ ನಿಂತಿದ್ದರೆ ಅದಕ್ಕೆ ರಾಜು ಕೊಡುಗೆ ಅಪಾರ. ಆಕಾರದಲ್ಲಿ ಮತ್ತು ಮಾತಿನ ಶೈಲಿಯಲ್ಲಿ ರಾಜು ಸ್ವಲ್ಪ ಗಡಸು. ಆದರೆ ಅಂತರಾಳದಲ್ಲಿ ರಾಜು ಬಹಳ ಪ್ರೀತಿ, ಅನುಕಂಪೆ ಹೊಂದಿರುವ ಯುವಕ. ಅದಕ್ಕೇ ರಾಜು ತಮ್ಮ ತಂಡದ uncut diamond ಅಂದಿದ್ದು.


ಕಿಶೋರ್


ಕಿಶೋರ್: ಕಳೆದ ವರ್ಷ ನಮ್ಮ ತಂಡ ಸೇರಿದ ಕಿಶೋರ್ ನಮ್ಮೆಲ್ಲರಿಗಿಂತ ವಿಭಿನ್ನ. ನಾವೆಲ್ಲ ಪಾದರಸದಂತೆ ಎತ್ತೆತ್ತಲೋ ಹರಿದಾಡುತ್ತಿದ್ದರೆ ಕಿಶೋರ್ ಸಮಚಿತ್ತದಿಂದ, ಅಪಾರ ಎಚ್ಚರಿಕೆಯಿಂದ ಮಾತಾಡುವ, ಪ್ರತಿಕ್ರಿಯಿಸುವ ವ್ಯಕ್ತಿ. ಅಷ್ಟೇ ಅಲ್ಲ, ಹೆಚ್ಚಾಗಿ ಎಡಪಂಥೀಯ, ನಾಸ್ತಿಕರೇ ತುಂಬಿರುವ ನಮ್ಮ ತಂಡದಲ್ಲಿರುವ ಏಕೈಕ ಆಸ್ತಿಕ ಕಿಶೋರ್. ಒಮ್ಮೆ ಈತ ಅಯ್ಯಪ್ಪ ಮಾಲೆ ಧರಿಸಿದ್ದನ್ನು ಕಂಡು ನಮ್ಮ ಬಿ. ಚಂದ್ರೇಗೌಡರು "ಇದ್ದಾರಪ್ಪ ನಮ್ಮ ಆಫೀಸಿನಲ್ಲಿ" ಎಂದು ಉದ್ಗಾರವೆತ್ತಿದ್ದರು.

ಆದರೆ ಯಾವುದೇ ಸದ್ದುಗದ್ದಲವಿಲ್ಲದೆ, ತರಾತುರಿ ಇಲ್ಲದೆ ಕಂಪ್ಯೂಟರ್ ಮುಂದೆ ಕೂತು ತನ್ನ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸುವ ಕಿಶೋರ್ ನಮ್ಮ technical ತಂಡದ ಆಸ್ತಿ.

▶▶▶ 8

ರೌಡಿರೆಡ್ಡಿಗಳ ಏರ್‌ಪೋರ್ಟ್ ಶೋಕಿ

ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರೀಲಿ ಕೊಡೆ ಹಿಡಿದನಂತೆ ಎನ್ನುವ ಮಾತು ಬಳ್ಳಾರಿಯ ಗಣಿ ರೆಡ್ಡಿಗಳಿಗೆ ಹೇಳಿಮಾಡಿಸಿದಂತಿದೆ. ಒಂದು ಕಾಲದಲ್ಲಿ ಎನ್ನೋಬೆಲ್ ಇಂಡಿಯಾ ಎಂಬ ತಗಡು ಸಂಸ್ಥೆ ಮಾಡಿಕೊಂಡು ಬಳ್ಳಾರಿ ಜನರಿಗೆ ಬೇರೆಬೇರೆ ಸೈಜಿನ ಟೋಪಿ ಹಾಕುತ್ತಾ ಅನ್ನ ಸಂಪಾದಿಸಿಕೊಳ್ಳುತ್ತಿದ್ದ ರೆಡ್ಡಿ ಬ್ರದರ್ಸ್‌ಗೆ ಈಗ ಗಣಿ ದುಡ್ಡಿನ ಪಿತ್ತ ನೆತ್ತಿಗೇರಿಬಿಟ್ಟಿದೆ. ಅವರಿಗೆ ಅದಿರು ಕಳ್ಳ ಸಾಗಾಣಿಕೆಯಲ್ಲೆ ರಾಶಿರಾಶಿ ದುಡ್ಡು ಬಂತು. ಅರಮನೆಯೂ ಆಯಿತು. ಕೋಟಿಗಟ್ಟಲೆ ಬೆಲೆಯ ಕಾರ್‌ಗಳೂ ಓಡಿಬಂದವು. ಹೆಲಿಕಾಪ್ಟರೂ ಬಂದಿಳಿಯಿತು. ಹಣ ಚೆಲ್ಲಿ ರಾಜಕೀಯ ಅಧಿಕಾರವನ್ನು ಖರೀದಿಸಿ ಈಗ ಮಂತ್ರಿಗಳಾಗಿದ್ದಾರೆ.



ಇಷ್ಟು ಸಾಕಾಗಲಿಲ್ಲವೆಂದು ಕಾಣುತ್ತದೆ. ಈಗ ರೆಡ್ಡಿಗಳಿಗೆ ತಮ್ಮ ಮನೆ ಮುಂದೆಯೇ ಒಂದು ಏರ್‌ಪೋರ್ಟ್ ಇರಬೇಕು ಎಂಬ ಖಯಾಲಿ ಬಂದುಬಿಟ್ಟಿದೆ.

ಬಳ್ಳಾರಿಯಲ್ಲಿ ಏರ್‌ಪೋರ್ಟ್ ಬೇಕು-ಬೇಡವೆಂಬ ಹೊಸ ಗಲಾಟೆ ಭುಗಿಲೇಳಲು ಇದೇ ಮೂಲಕಾರಣ. ಹಾಗೆ ನೋಡಿದರೆ ನಾಲ್ಕು ಲಕ್ಷ ಜನಸಂಖ್ಯೆಯಿರುವ ಇಡೀ ಬಳ್ಳಾರಿ ಟೌನಿನಲ್ಲಿ ವಿಮಾನ-ಹೆಲಿಕಾಪ್ಟರ್ ಲೆವೆಲ್ಲಿನ ಒಂದೆರಡು ಡಜನ್ ಮಂದಿ ಇರಬಹುದಷ್ಟೇ.

ಇಡೀ ಜಿಲ್ಲೆ ಹುಡುಕಿದರೂ ಅಂತವರ ಸಂಖ್ಯೆ ನೂರೂ ದಾಟುವುದಿಲ್ಲ. ಮತ್ತವರು ದಿನಾ ವಿಮಾನದಲ್ಲಿ ಓಡಾಡುವ ರಾಜಕಾರ್ಯವೂ ಏನಿಲ್ಲ. ವಸ್ತುಸ್ಥಿತಿ ಹೀಗಿದ್ದಾಗಲೂ ಇಂಥ ಬಡವರ ಬಳ್ಳಾರಿಯಲ್ಲೂ ಈಗಾಗಲೇ ಎರಡು ವಿಮಾನ ನಿಲ್ದಾಣಗಳಿವೆ. ಜಿಂದಾಲ್ ಸ್ಟೀಲ್ ಕಂಪನಿಯದೊಂದು. ಇದು ಖಾಸಗಿ ಮಾಲೀಕತ್ವದ್ದು. ಇನ್ನೊಂದು ಕೊಳಗಲು ರೋಡಿನ ವಿದ್ಯಾನಗರ ಬಳಿ ಇರುವ ಸರ್ಕಾರಿ ವಿಮಾನ ನಿಲ್ದಾಣ. ಈ ಹಿಂದೆ ಬ್ರಿಟಿಷರು ಎರಡನೇ ಮಹಾಯುದ್ಧದ ಕಾಲದಲ್ಲಿ ಜರ್ಮನಿಯ ಹಿಟ್ಲರ್‌ನೊಂದಿಗೆ ಜಗಳಕ್ಕೆ ಬಿದ್ದಿದ್ದಾಗ ಯುದ್ಧದ ಕಾರಣಕ್ಕೇ ಬಳ್ಳಾರಿಯಲ್ಲಿ ಈ ವಿಮಾನ ನಿಲ್ದಾಣ ನಿರ್ಮಿಸಿದ್ದರು. ನಂತರ ಎಲ್ಲರೂ ಅದನ್ನು ನಿರ್ಲಕ್ಷಿಸಿ ಬಿಟ್ಟರು. ಈಗಲೂ ಅಲ್ಲಿ ವಿಮಾನ ನಿಲ್ದಾಣವೆಂಬುದಿದೆಯಾದರೂ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲ. ಆದರೆ ಏರ್‌ಪೋರ್ಟ್‌ಗೆ ಮೀಸಲಿಟ್ಟಿದ್ದ ಜಮೀನು ಮಾತ್ರ ಹಾಗೇ ಇದೆ. ಸರ್ಕಾರ ಮನಸ್ಸು ಮಾಡಿದಿದ್ದರೆ, ಈ ರೆಡ್ಡಿಗಳ ತೀಟೆ ತೀರಿಸಲೇ ಬೇಕೆಂದಿದ್ದರೆ ಇದೇ ಹಳೆಯ ಏರ್‌ಪೋರ್ಟನ್ನೇ ನವೀಕರಿಸಬಹುದಿತ್ತು.



ಆದರೆ ಹಾಗಾಗುತ್ತಿಲ್ಲ ಯಾಕೆ?

ಬಳ್ಳಾರಿಯ ಜನ ಉತ್ತರ ಹುಡುಕುತ್ತಿರುವುದು ಈ ಪ್ರಶ್ನೆಗಳಿಗೆ. ಹೊಸ ಏರ್‌ಪೋರ್ಟ್‌ಗಾಗಿ 1800 ಎಕರೆಯಷ್ಟು ಜಮೀನು ಕಳೆದುಕೊಳ್ಳಲಿರುವ ಶಿರ್ವ, ಜಾಗನೂರು ಮತ್ತು ಕಪ್ಪಗಲ್ಲಿನ ಸಾವಿರಾರು ರೈತರು ರೊಚ್ಚಿಗೇಳುತ್ತಿರುವುದು ಇದೇ ಕಾರಣಕ್ಕೆ.

ರೆಡ್ಡಿಗಳ ಸ್ವಾರ್ಥ

ಮುಖ್ಯಮಂತ್ರಿ ಯಡಿಯೂರಪ್ಪ 'ಅದೇನೆ, ಆಗಲಿ, ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ನಿರ್ಮಿಸಿಯೇ ಸಿದ್ಧ' ಎಂದು ಛಾಲೆಂಜ್ ಮಾಡಿದ್ದಾರೆ. ರೆಡ್ಡಿಗಳಿಗೂ ಈಗ ಇದು ಪ್ರತಿಷ್ಠೆಯ ವಿಚಾರವಾಗಿಬಿಟ್ಟಿದೆ. ಮತ್ತೊಂದೆಡೆ ಕಾಂಗ್ರೆಸ್-ಜೆಡಿಎಸ್-ಕಮ್ಯೂನಿಸ್ಟ್ ಪಾರ್ಟಿಗಳೆಲ್ಲಾ ರೈತರ ಪರವಾಗಿ ಯುದ್ಧರಂಗಕ್ಕಿಳಿದಿವೆ. ಏರ್‌ಪೋರ್ಟ್ ವಿರೋಧಿಸಿ, ರೈತರ ಮೇಲಿನ ಪೊಲೀಸರ ದೌರ್ಜನ್ಯ ಖಂಡಿಸಿ ಮೊನ್ನೆ ನಡೆದ ಬಳ್ಳಾರಿ ಬಂದ್ ಕೂಡ ಯಶಸ್ವಿಯಾಗಿದೆ. ಅತೀ ಮುಖ್ಯವಾಗಿ ಜಾಗನೂರಿನ ಮೊನ್ನೆ ನಡೆದ ಬಳ್ಳಾರಿ ಬಂದ್ ಕೂಡ ಯಶಸ್ವಿಯಾಗಿದೆ. ಅತೀ ಮುಖ್ಯವಾಗಿ ಜಾಗನೂರಿನ ರೈತರು 'ರಕ್ತ ಹರಿದರೂ ಪರರಾಗಿಲ್ಲ ಭೂಮಿ ಬಿಟ್ಟುಕೊಡುವುದಿಲ್ಲ'ವೆಂದು ಪಣ ತೊಟ್ಟಿದ್ದಾರೆ.

ಗಣಿ ಖದೀಮರಾದ ರೆಡ್ಡಿಗಳಿಗೆ ಏರ್‌ಪೋರ್ಟ್ ಬೇಕಿರುವುದು ತಮ್ಮ ಅದಿರು ದಂಧೆ ಬೆಳೆಸಲು. ಸರ್ಕಾರ ಮೇಲುನೋಟಕ್ಕೆ ಪ್ರವಾಸೋದ್ಯಮದ ಕಾರಣಕ್ಕೆ ಬಳ್ಳಾರಿಯಲ್ಲಿ ಏರ್‌ಪೋರ್ಟ್ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದರೂ ಒಳಹಿತಾಸಕ್ತಿಗಳು ಬೇರೆಯೇ ಇವೆ. ಈಗ ತೋರಣದಲ್ಲಿನ ಹಾಗೂ ಜಿಂದಾಲ್ ಏರ್‌ಪೋರ್ಟ್‌ಗಳೆರಡೂ ಒಟ್ಟೊಟ್ಟಾಗಿವೆ. ಇದರಿಂದಾಗಿ ವಿದೇಶಗಳಿಂದ ಬಂದು ಹೋಗುವ ವ್ಯಾಪಾರಿಗಳು ಎಲ್ಲೆಲ್ಲಿಂದಲೋ ಹೊರಟು ನೇರಾ ಜಿಂದಾಲ್ ಕಾಂಪೌಂಡಿನೊಳಗೇ ಬಂದಿಳಿಯುತ್ತಿದ್ದಾರೆ. ಯಾರು ಬಂದರು, ಯಾರು ಹೋದರೆಂಬುದು ಸಾರ್ವಜನಿಕರಿಗೆ ಗೊತ್ತೇ ಆಗದ ವ್ಯವಸ್ಥೆ ಇದು. ಈಗ ರೆಡ್ಡಿಗಳಿಗೂ ಬೇಕಿರುವುದು ಇಂತದ್ದೇ ವ್ಯವಸ್ಥೆ.

ಈಗ್ಗೆ 2 ವರ್ಷಗಳ ಹಿಂದೆ ನೆರೆಯ ಆಂಧ್ರಪ್ರದೇಶದ ಕಡಪಾ ಬಳಿ ಈ ರೆಡ್ಡಿಗಳು ಬ್ರಹ್ಮಿಣಿ ಸ್ಟೀಲ್ಸ್ ಎಂಬ ಕಾರ್ಖಾನೆ ನಿರ್ಮಿಸಲು ಹೊರಟಿದ್ದರು. 20 ಸಾವಿರ ಕೋಟಿ ರೂಪಾಯಿಗಳ ಯೋಜನೆ ಇದು. ಇದಕ್ಕೆ ಪೂರಕವಾಗಿ

▶▶▶

ಎಕರೆಗೆ 3 ಲಕ್ಷ ಪರಿಹಾರ!

ಏರ್‌ಪೋರ್ಟ್‌ಗಾಗಿ ಸರ್ಕಾರ ಗುರುತಿಸಿರುವ 1800 ಎಕರೆ ಜಮೀನು ಫಲವತ್ತಾದ ನೀರಾವರಿ ಪ್ರದೇಶ. ಶಿರ್ವ, ಜಾಗನೂರು, ಕಪ್ಪಗಲ್ಲಿನ ಲಿಂಗಾಯತ, ನಾಯಕ ಹಾಗೂ ರೆಡ್ಡಿ ಜನಾಂಗದ ರೈತರು ವರ್ಷದ 6 ತಿಂಗಳು ತುಂಗಾಭದ್ರಾ ಡ್ಯಾಂನ ಬಲದಂಡೆ ಕಾಲುವೆ ಮೂಲಕ ಸಿಗುವ ನೀರಿನಲ್ಲಿ ತೊಗರಿ, ಹತ್ತಿ, ಶೇಂಗಾ ಮುಂತಾದ ವಾಣಿಜ್ಯ ಬೆಳೆ ಬೆಳೆಯುತ್ತಿದ್ದಾರೆ. ಇಲ್ಲಿ ಎಕರೆ ಜಮೀನಿನ ಬೆಲೆ 10 ಲಕ್ಷ ರೂಗಿಂತ ಜಾಸ್ತಿ ಇದೆ. ಆದರೂ ಬಿಜೆಪಿ ಸರ್ಕಾರ ಎಕರೆಗೆ ನೀಡಲು ಹೊರಟಿರುವ ಪರಿಹಾರದ ಮೊತ್ತ ಜುಜುಬಿ ಮೂರು ಲಕ್ಷ ಮಾತ್ರ.

ರೈತರು ಇದನ್ನು ಹೇಗೆ ತಾನೆ ಒಪ್ಪಿಯಾರು?

ಮಲಪನಗುಡಿಯಲ್ಲಿ 450 ಕೋಟಿ ಮೊತ್ತದ ಡಕಾಯಿತಿ


ನಮ್ಮ ರಾಜ್ಯದ ಗಡಿಯನ್ನು ಗುರುತಿಸುವಂತೆ ಕರ್ನಾಟಕ ಸರ್ಕಾರ ಆಂಧ್ರಕ್ಕೆ ಪತ್ರ ಬರೆಯುತ್ತದೆಯಂತೆ. ಹಾಗಂಥ ಮೊನ್ನೆಯಷ್ಟೇ ವಿಧಾನಸಭೆಯಲ್ಲಿ ಗೃಹಮಂತ್ರಿ ಆಚಾರ್ಯ ಹೇಳಿಕೆ ಕೊಟ್ಟಿದ್ದಾರೆ!

ಇದರ ಹುನ್ನಾರ ಮತ್ತು ಮೋಸದ ವಿರುದ್ಧ ವಿರೋಧಿ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳು ಬೀದಿಗಿಳಿಯಬಹುದೆಂಬ ಪ್ರಜ್ಞಾವಂತರ ನಿರೀಕ್ಷೆ ಕೂಡ ಹುಸಿಯಾಗಿದೆ!


ಬಹುಶಃ ವಿರೋಧ ಪಕ್ಷಗಳಿಗಾಗಲಿ, ಜನಪರ ಸಂಘಟನೆಗಳಿಗಾಗಲಿ ಅಥವಾ ಕಸಾಪ, ರಕ್ಷಣಾ ವೇದಿಕೆ, ವಾಟಾಳ್ ಥರದವರಿಗಾಗಲಿ ಬಳ್ಳಾರಿಯ ಸಂಡೂರು ತಾಲ್ಲೂಕಿನ ಮಲಪನಗುಡಿಯ ನಕಾಶೆಯನ್ನೇ ತಿದ್ದಿ ಗಣಿರೆಡ್ಡಿಗಳು ದೋಚಿದ ಅದಿರು ಸಂಪತ್ತಿನ ಅರಿವಿದ್ದಿದ್ದರೆ ಈ ಹೊತ್ತಿಗಾಗಲೇ ಕಾವೇರಿ ಹೋರಾಟವನ್ನೂ ಮೀರಿದ ಪ್ರತಿಭಟನೆಗಳಾಗಬೇಕಿತ್ತು. ಕರ್ನಾಟಕ ಬಂದ್‌ಗೆ ಕರೆ ಕೊಡಬೇಕಿತ್ತು.

ದುರಂತವೆಂದರೆ ಗೃಹಮಂತ್ರಿಯ ಮಾತಿನ ಮರ್ಮವೇ ಯಾರಿಗೂ ಅರ್ಥವಾಗಲಿಲ್ಲ!

ನಮ್ಮ ರಾಜ್ಯದ ಗಡಿಯನ್ನು ಗುರುತಿಸಲು ಆಂಧ್ರ ಸರ್ಕಾರಕ್ಕೆ ಯಾವ ಅಧಿಕಾರವಿದೆ? ಅಷ್ಟಕ್ಕೂ ಆಂಧ್ರ ಸರ್ಕಾರವೇಕೆ ಕರ್ನಾಟಕದ ಗಡಿಯನ್ನು ಗುರುತಿಸಿ ಕೊಡಬೇಕು? ಹಾಗೊಮ್ಮೆ ಆಂಧ್ರ ಸರ್ಕಾರ ತನಗಿಷ್ಟ ಬಂದಂತೆ ಸರ್ವೇ ಮಾಡಿ ಇದೇ ಕರ್ನಾಟಕದ ಗಡಿರೇಖೆ ಎಂದುಬಿಟ್ಟರೆ ಅದನ್ನು ಯಡ್ಡಿ ಸರ್ಕಾರ ಒಪ್ಪಿಕೊಳ್ಳುತ್ತದಾ? ಗಣಿ ರೆಡ್ಡಿಗಳು ತಿದ್ದಿದ ಗಡಿರೇಖೆಯನ್ನೇ ಆಂಧ್ರ ಸರ್ಕಾರ ಸಮ್ಮತಿಸಿತೆಂದರೆ ಕರ್ನಾಟಕದ ಮೂವತ್ತೆಂಟು ಮೈಲಿಗಳ ಭೂಭಾಗವನ್ನು ಆಂಧ್ರಕ್ಕೆ ಬಿಟ್ಟುಕೊಡಬೇಕೆ? ಹೀಗೆ ಗಡಿ ನಕಾಶೆ ತಿದ್ದಿ ಗಣಿ ರೆಡ್ಡಿಗಳು ದೋಚಿದ ನಾನೂರೈವತ್ತು ಕೋಟಿ ರೂಪಾಯಿಗಳ ಮೊತ್ತದ ಅದಿರಿನ ರೊಕ್ಕ ಮಾಫಿಯಾದಂತೆಯೇ?



ಕರ್ನಾಟಕದ ಗಡಿಯನ್ನು ಗುರುತಿಸಿ ಕೊಡುವಂತೆ ಆಂಧ್ರಕ್ಕೆ ಪತ್ರ ಬರೆಯುವುದಕ್ಕೂ ಕರ್ನಾಟಕದ ಮೂವತ್ತೆಂಟು ಮೈಲಿಗಳ ಅದಿರು ಸಮೃದ್ಧ ಭೂಭಾಗವೊಂದನ್ನು ಆಂಧ್ರಕ್ಕೆ ತಾನಾಗಿಯೇ ಬಿಟ್ಟು ಕೊಟ್ಟು ಗಣಿ ರೆಡ್ಡಿಗಳು ದೋಚಿದ ನಾನೂರೈವತ್ತು ಕೋಟಿ ರೂಪಾಯಿ ಮೊತ್ತದ ಹಗಲು ದರೋಡೆಯೊಂದನ್ನು ಮುಚ್ಚಿ ಹಾಕುವುದಕ್ಕೂ ಯಾವುದೇ ವ್ಯತ್ಯಾಸವಿಲ್ಲ.



ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತುಮಟಿ ಮತ್ತು ವಿಠಲಾಪುರ ಗ್ರಾಮಗಳ ಗಡಿಗೆ ಹೊಂದಿಕೊಂಡಿರುವ ಆಂಧ್ರದ ಮಲಪನಗುಡಿಯಲ್ಲಿ ಗಣಿಗಾರಿಕೆ ನಡೆಸಲು ಜನಾರ್ದನ ರೆಡ್ಡಿ ಒಡೆತನದ ಓಎಂಸಿ ಕಂಪೆನಿ ಮರುಪರವಾನಗಿ ಪಡೆದದ್ದು 2007 ರ ಜೂನ್ 18 ರಂದು. ಆಂಧ್ರ ಸರ್ಕಾರ 2007 ರ ಜೂನ್ 18 ರಂದು ಮರುಪರವಾನಗಿ ಕೊಟ್ಟಿದ್ದಷ್ಟೇ ಅಲ್ಲ ಅದರ ಮರುದಿನವೇ ಅಂದರೆ 2007 ರ ಜೂನ್ 19 ರಂದು ಆಂಧ್ರದ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಇಲಾಖೆಗೂ ರೆಡ್ಡಿಯ ಓಎಂಸಿ ಕಂಪೆನಿಗೂ ಲೀಸ್ ಡೀಡ್ ಆಗುತ್ತದೆ. ಅದೂ ಎಂಥಾ ಒಪ್ಪಂದವೆಂದರೆ ಮಲಪನಗುಡಿಯ ಸರ್ವೆ ನಂ. 1 ಮತ್ತು 2 ರಲ್ಲಿದ್ದ 29700 ಟನ್ ಅದಿರಿನ ಹಳೇ ದಾಸ್ತಾನನ್ನು ಮಾತ್ರವೇ ಸಾಗಿಸುತ್ತೇನೆಂಬ ಕಪೋಲ ಕಲ್ಪಿತ ಒಪ್ಪಂದ.

ಹಕೀಕತ್ತೇನೆಂದರೆ, ಈ ಭಾಗದಲ್ಲಿ ಯಾವುದೇ ಗಣಿಗಾರಿಕೆ ನಡೆಸದಂತೆ ಆಂಧ್ರದ ಹೈಕೋರ್ಟ್ 2006 ರಲ್ಲೇ ಆದೇಶ ಕೊಟ್ಟಿತ್ತು. ಹೀಗೆ ಆಂಧ್ರದ ಭೂಭಾಗದಲ್ಲಿ ಹಳೇ ದಾಸ್ತಾನನ್ನು ಸಾಗಿಸುವ ಪರವಾನಗಿ ಪಡೆದಂತೆ ಮಾಡಿ, ಕ್ರಮೇಣ ಮಲಪನಗುಡಿಯ ನಕಾಶೆಯನ್ನೇ ತಿದ್ದಿ, ಗಡಿ ಗುರುತುಗಳನ್ನು ನಾಶಪಡಿಸಿದ ಜನಾರ್ದನ ರೆಡ್ಡಿ 2007 ರ ಜೂನ್ 19 ನೇ ತಾರೀಖಿನಿಂದ 2009 ರ ಜನವರಿ 21 ರ ತನಕ ಸಾಗಿಸಿದ ಅದಿರಿನ ಒಟ್ಟೂ ಮೊತ್ತ 2252000 ಮೆಟ್ರಿಕ್ ಟನ್ನುಗಳು!



ಅರ್ಥಾತ್ ಇದು ಸರ್ಕಾರಿ ಲೆಕ್ಕದ ಪ್ರಕಾರ ಸಾಗಿಸಿದ ಅದಿರಿನ ಮೊತ್ತ ಮಾತ್ರ. ಇದಕ್ಕೆಂದು ಆಂಧ್ರ ಸರ್ಕಾರಿ ಬೊಕ್ಕಸಕ್ಕೆ ಎರಡು ಕೋಟಿ ಎಂಭತ್ತೈದು ಲಕ್ಷದ ಎಂಭತ್ತು ಸಾವಿರ ರೂಪಾಯಿಗಳ ರಾಜಧನವನ್ನೂ (ರಾಯಲ್ಟಿ) ಕಟ್ಟಿದ್ದಾರೆ. ಈ ಪ್ರಕಾರ ಪ್ರತಿ ಟನ್ನಿಗೆ ಎರಡು ಸಾವಿರ ರೂ.ಗಳಂತೆ ಲೆಕ್ಕ ಹಾಕಿದರೂ ಓಎಂಸಿ ಕಂಪೆನಿ ಆಂಧ್ರದ ಪರ್ಮಿಟ್ ತೋರಿಸಿ ರಾಜ್ಯದಿಂದ ದೋಚಿದ ಅದಿರಿನ ಮೊತ್ತ 450,40,000.00 (ನಾನೂರೈವತ್ತು ಕೋಟಿ ನಲವತ್ತು ಲಕ್ಷ ರೂ.ಗಳು) ರೂಪಾಯಿಗಳಷ್ಟಾಗುತ್ತದೆ.

ಹಾಗೊಂದು ಪಕ್ಷ ಓಎಂಸಿ ಕಂಪೆನಿ ತನಗೆ ಆಂಧ್ರ ಸರ್ಕಾರ ಕೊಟ್ಟ ಲೈಸೆನ್ಸ್ ಪ್ರದೇಶದಲ್ಲೇ 2252000 ಟನ್‌ಗಳಷ್ಟು ಅದಿರನ್ನು ತೆಗೆದಿದ್ದರೆ, ಓಎಂಸಿ ಕಂಪೆನಿ ಗಣಿಗಾರಿಕೆ ಮಾಡಿತೆನ್ನಲಾದ ಗುಡ್ಡದ ಎತ್ತರ ಕಮ್ಮಿಯಾಗಬೇಕಿತ್ತು. ಕೇವಲ ಅದಿರಷ್ಟೇ ಅಲ್ಲದೇ ವೇಸ್ಟ್‌ಓವರ್ ಬರ್ಡನ್ ಮೆಟೀರಿಯಲ್ ಕೂಡ ಸೇರುತ್ತದೆಯಾದ್ದರಿಂದ ಅಗೆತದ ಪ್ರಮಾಣ ಅದರ ದುಪ್ಪಟ್ಟಿರುತ್ತದೆ. ಓಎಂಸಿ ಕಂಪೆನಿಗೆ ತನ್ನ ಹಳೇ ದಾಸ್ತಾನು ಸಾಗಿಸಲು ಆಂಧ್ರ ಸರ್ಕಾರ ಪರವಾನಗಿ ಕೊಟ್ಟ ಪ್ರದೇಶದಲ್ಲಿ ಒಂದೇ ಒಂದು ಬುಟ್ಟಿ ಮಣ್ಣು ಕೂಡ ಅಗೆದ ಗುರುತಿಲ್ಲ.

ಗುಡ್ಡವೇ ಸವೆಯದ ಹಾಗೆ ಅದಿರನ್ನು ತೆಗೆಯಲು ಹೇಗೆ ಸಾಧ್ಯ?

ಹೀಗೆ ಆಂಧ್ರದ ಪರವಾನಗಿ ಹಿಡಿದು ಕರ್ನಾಟಕ ಅರಣ್ಯ ದೋಚಿದ್ದು ಒಂದೆಡೆಯಾದರೆ ಮತ್ತೊಂದೆಡೆ ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ಗಡಿಭಾಗವನ್ನೇ ಜಂಟಿ ಸರ್ವೆ ಮಾಡುತ್ತೇನೆಂದು ಉಳಿದೆಲ್ಲ ಗಣಿ ಮಾಲಿಕರನ್ನು ಹೆದರಿಸಿ ಅವರೆಲ್ಲರ ಗಣಿಯನ್ನೂ ತನ್ನ ಹತೋಟಿಗೆ ತೆಗೆದುಕೊಂಡವನು ಜನಾರ್ದನ ರೆಡ್ಡಿ. ಲೋಕಾಯುಕ್ತ ತನ್ನ ವರದಿಯಲ್ಲಿ ಸ್ಪಷ್ಟವಾಗಿ ಓಎಂಸಿ ಕಂಪೆನಿಯ ಗಡಿ

▶▶▶

...ಭಯೋತ್ಪಾದಕ ಪೊಲೀಸರು

...ರೌಡಿ ರೆಡ್ಡಿಗಳ ವಿರುದ್ಧ ಈಗ ಬಳ್ಳಾರಿಯಲ್ಲಿ ಯಾರೇ ಮಾತಾಡಿದರೂ ಅಂಥವರ ವಿರುದ್ಧ ಪೊಲೀಸರ ಕೇಸ್ ...ರಂಟಿಯಾಗಿದೆ. ತೀರಾ ಇತ್ತೀಚೆಗೆ ಅಲ್ಲಿನ ಬಿಜೆಪಿಗಳ ಪುಂಡು ಹುಡುಗರೇ ತಮ್ಮದೇ ಪಾರ್ಟಿಯ ನಾಗರಾಜ-ಸೀನಾ ...ಬುವರ ಕೊಲೆ ಮಾಡಿದ್ದಾರೆ. ಹಳೇ ವೈಷಮ್ಯದಿಂದಾಗಿರುವ ಕೊಲೆಗಳಿವು. ಆದರೆ ಪೊಲೀಸರು ಮಾತ್ರ ದಲಿತ ಸಂಘರ್ಷ ...ಜೊತೆಗೆ ಸೇರಿರುವ ಅರುಣ್‌ಕುಮಾರ್, ದೇಗುಲಪಾಡು, ನಾರಾಯಣನನ್ನು ಅರೆಸ್ಟ್ ಮಾಡಿ ಜೊತೆಗೆ ಮುಂದರಗಿ ...ಗರಾಜ, ಬಸಪ್ಪ ಮುಂತಾದ ಅಮಾಯಕರನ್ನು ಕೇಸಿನಲ್ಲಿ ಸಿಕ್ಕಿಸಿದ್ದಾರೆ. ರೈತ ನಾಯಕರಾದ ಮಲ್ಲಿಕಾರ್ಜುನ ರೆಡ್ಡಿ, ಪ್ರತಾಪ ...ಗಳ ಮೇಲೂ ಹಲವಾರು ಕೇಸ್ ಹಾಕಿ ಹಣಿಯುವ ಯತ್ನ ನಡೆಸಿದ್ದಾರೆ. ಬಳ್ಳಾರಿ ಬಂದ್ ನಡೆದ ದಿನ ಸಿಪಿಎಂ ನಾಯಕ ...ಮಾರುತಿ ಮಾನ್ಪಡೆಯವರನ್ನು ಬಂಧಿಸಲು ಅವರು ತಹಶೀಲ್ದಾರನನ್ನು ಬೈಯ್ದರೆಂಬ ನೆಪ ಬಳಸಿಕೊಂಡಿದ್ದರು. ಪೊಲೀಸರು ...ಲೇ ರೀತಿ ಕಾನೂನಿನ ದುರ್ಬಳಕೆ ಮಾಡುತ್ತಾ ಹೋದರೆ ನಾಳೆ ಜನರೇ ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳುವ ಸೂಚನೆ ...ಳ್ಳಾರಿಯಲ್ಲಿ ಕಾಣುತ್ತಿದೆ.


▶▶

...ಳ್ಳಾರಿಯಲ್ಲೇ ಕಬ್ಬಿಣ ಆಧಾರಿತ ಉಪ ...ದ್ಯಮವೊಂದನ್ನು ಸ್ಥಾಪಿಸಲು ರೆಡ್ಡಿಗಳು ಪ್ಲಾನ್ ...ಕಿಕೊಂಡಿದ್ದಾರೆ. ಆ ಯೋಜನೆ ಪ್ರಕಾರ ಈ ...ಪ್ರಸ ಕಾರ್ಖಾನೆ ಮತ್ತು ಏರ್‌ಪೋರ್ಟ್‌ಗಳೆರಡೂ ...ಂದೇ ಕಾಂಪೌಂಡಿನೊಳಗಿರಬೇಕು. ಈ ಪ್ಲಾನಿನ ...ಮುಂದುವರೆಯುವ ಭಾಗ ಏನೆಂದರೆ ಮೊದಲು ...ರ್ಕಾರದಿಂದ ವಿಮಾನ ನಿಲ್ದಾಣಕ್ಕೆ ಅನುಮತಿ ...ಪಿಸಿ, ರೈತರ ಜಮೀನು ಕಸಿದು ನಂತರ ಖಾಸಗಿ ...ಸಹಭಾಗಿತ್ವದಲ್ಲಿ ತಾವೇ ಏರ್‌ಪೋರ್ಟ್ ...ನಿರ್ಮಾಣದಲ್ಲಿ ತೂರಿಕೊಂಡು ಬಿಡುವುದು. ...ಜೊತೆಗೆ ಅಲ್ಲೇ ಹತ್ತಿರದಲ್ಲೇ ತಮ್ಮ ಉದ್ದೇಶಿತ ...ಪ್ ಪ್ಲಾಂಟ್ ಕಟ್ಟಿಕೊಳ್ಳುವುದು... ...ಹೇಗಿದೆ ಈ ಮನೆಹಾಳರ ಪ್ಲಾನ್.

...ಯಾವಾಗ ರೈತರಿಗೆ ಇವೆಲ್ಲಾ ಗೊತ್ತಾಯಿತೊ ...ಗನೂರು, ಶಿರ್ವ, ಕಪ್ಪಗಲ್ಲು ಗ್ರಾಮಗಳು ...ಯುತೊಡಗಿದವು. ಒಂದು ಸಾರಿ ಭೀಕರ ಲಾರಿ ...ರ್ಜಿನ ಪೊಲೀಸ್ ದೌರ್ಜನ್ಯವೂ ...ದುಹೋಯಿತು. ಇಲ್ಲಿ ಜಿಲ್ಲಾ ಪೊಲೀಸ್ ...ವರಿಷ್ಠಾಧಿಕಾರಿ ಹಾಗೂ ಎಎಸ್‌ಪಿಗಳೆಲ್ಲಾ ರೆಡ್ಡಿ ...ಆಳುಗಳಂತಿದ್ದಾರೆ. ಇನ್ನು ತಹಶೀಲ್ದಾರ್ ...ಮುಕನಂತೂ ರೆಡ್ಡಿ ಮನೆಯ ಕಾವಲುಗಾರನಿಗೆ ...ಂ. ಮೊನ್ನೆ ಏರ್‌ಪೋರ್ಟ್ ವಿರೋಧಿಸಿ ಬಳ್ಳಾರಿ ...ಬಂದ್‌ಗೆ ಕರೆ ನೀಡಿದ್ದಾಗ ಬಂದ್ ...ವಿಫಲಗೊಳಿಸಲು ಈ ಗುಲಾಮರು ಒಟ್ಟಾಗಿ ...ಶ್ರಮಿಸಿದ್ದು ಜನರಿಗೆ ಕಾಣಿಸಿದೆ. ಪ್ರತಿಭಟನೆಯ ನಾಯಕರಾಗಿದ್ದ ದಿವಾಕರ ಬಾಬು, ಮಲ್ಲಿಕಾರ್ಜುನ ರೆಡ್ಡಿ, ಪ್ರತಾಪ್ ರೆಡ್ಡಿಯವರನ್ನು ಅರೆಸ್ಟ್ ಮಾಡಿ ಜನರಲ್ಲಿ ಅನಾಯಕತ್ವ ಉಂಟುಮಾಡಲು ಯತ್ನಿಸಿದರೂ ಬಂದ್ ಯಶಸ್ವಿಯಾಯಿತು. ಆದರು ಸುಮ್ಮನಿರದ ಪೊಲೀಸರು ಇತ್ತೀಚೆಗೆ ಬಿಜೆಪಿಗಳ ಗುಂಪಿನವರೇ ಮಾಡಿರುವ ಡಬಲ್ ಮರ್ಡರ್ ಕೇಸಿನಲ್ಲಿ ಕೆಲ ದಲಿತ ಹೋರಾಟಗಾರರನ್ನು ಫಿಟ್ ಮಾಡಿದ್ದಾರೆ.

ಮತ್ತೊಂದೆಡೆ ಈ ರೆಡ್ಡಿಗಳು ಪ್ರತಿಭಟನಾನಿರತ ರೈತರಲ್ಲೇ ಒಡಕು ತರಲು ಪಿತೂರಿ ನಡೆಸುತ್ತಿದ್ದಾರೆ. ಶಿರವಾರದ ಹಳೇ ಸೇಂದಿ ಕಂಟ್ರಾಕ್ಟರ್ ಲಿಂಗಣ್ಣನ ಮೂಲಕ ಕೆಲ ರೈತರನ್ನು ತಮ್ಮ ಪರ ಮಾತಾಡುವಂತೆ ನೋಡಿಕೊಂಡಿದ್ದಾರೆ. ಈ ಲಿಂಗಣ್ಣ ಆ ಏರಿಯಾದ ದೊಡ್ಡ ಖದೀಮ. ಬಡ ರೈತರಿಗೆ ಸಾಲ ಕೊಟ್ಟೂ ಕೊಟ್ಟು ಜನರ ಮೇಲೆ ಹಿಡಿತ ಬೆಳೆಸಿಕೊಂಡಿದ್ದಾನೆ. ಆದರೆ ಜಾಗನೂರಿನ ರೈತರು ಈಗ ಎಷ್ಟು ಆಕ್ರೋಶಗೊಂಡಿದ್ದಾರೆಂದರೆ ಲಿಂಗಣ್ಣ-ಮಂಗಣ್ಣಗಳ ಮಾತಿಗೆ ಕೇರ್ ಮಾಡುತ್ತಿಲ್ಲ. ರೆಡ್ಡಿಗಳ ಸ್ವಂತ ಲಾಭಕ್ಕಾಗಿ ಬಡರೈತರ **1800** ಎಕರೆ ಭೂಮಿ ಬಲಿಯಾಗದಂತೆ ತಡೆಯಲು ಬಳ್ಳಾರಿಯಲ್ಲೊಂದು ಬಹುದೊಡ್ಡ ಜನ ಹೋರಾಟ ಸ್ಫೋಟಗೊಳ್ಳುವ ಸೂಚನೆಗಳು ಕಾಣುತ್ತಿವೆ.

ಬಳ್ಳಾರಿಯ ತಮ್ಮ ಅರಮನೆ ಎದುರು ಹೊಸ ಏರ್‌ಪೋರ್ಟ್ ನಿರ್ಮಿಸಿ ಮೆರೆಯಲು ಹೊರಟಿರುವ ರೆಡ್ಡಿಗಳಿಗೆ ಇದೇ ತಿರುಗುಬಾಣವಾಗುವ ಸೂಚನೆ ಕಾಣುತ್ತಿದೆ. ಅಲ್ಲಿ **run way** ಬೇಕೇಬೇಕೆಂದು ಹಠ ಮಾಡಿದರೆ ರೆಡ್ಡಿಗಳಿಗೆ **run away** ಬಿಟ್ಟರೆ ಬೇರೆ ಗತಿ ಇರುವುದಿಲ್ಲ. ■



...This consent order is valid for carrying the following activity with quantities mentioned ...below only

Sl.No.	Products	Quantity
1.	Mining of Iron Ore / Iron Ore fines	1.2 Million TPA

...This consent shall be valid for a period ending with the **31st day of May, 2008.**


JOINT CHIEF ENVIRONMENTAL ENGINEER,
ZONAL OFFICE, KURNOOL.

To
M/s. Obulapuram Mining Company Private Limited,
C/o Sri B.V.Sreenivasa Reddy,
Ganesh Nagar, Opp: to Kumara Swamy Temple,
Bellary - 583 101.

Copy to:-

1. The Member Secretary, A.P.Pollution Control Board, Sanath Nagar, Hyderabad for information.
2. The S.E.E., (Coss) A.P. P.C.B. Board Office, Hyderabad for information.
3. The General Manager, District Industries Centre, Anantapur for information.
4. The Environmental Engineer, Regional Office, Kurnool for information and necessary action.
5. Stock File.

ಆಂಧ್ರ ಸರ್ಕಾರದ ದಾಖಲೆ.....



ಕರ್ನಾಟಕದ ಸೊತ್ತಿಗೆ ಆಂಧ್ರ ಸರ್ಕಾರಕ್ಕೆ ರಾಯಲ್ಟಿ..

▶▶

...ವರಿ, ಅಕ್ರಮ ಗಣಿಗಾರಿಕೆ, ಅಕ್ರಮ ರಸ್ತೆಗಳ ...ಳ್ಳಾಳಿಕೆಯ ರೈಜಿಂಗ್ ಕಾಂಟ್ರಾಕ್ಟ್‌ಗಳ ವಿರುದ್ಧ ...ರ್ಕಾರಕ್ಕೆ ವರದಿ ಕೊಟ್ಟಿದೆ. ಮೂರು ಹಳ್ಳಿಗಳು ...ಕೂಡುವ ಟ್ರೈಜಂಕ್ಷನ್‌ನ ಬ್ರಿಟಿಷ್ ಬೆಂಚ್ ...ಮಾರ್ಕ್‌ಗಳನ್ನು ಓಎಂಸಿ ಕಂಪೆನಿ ನಾಶಪಡಿಸಿದ ...ನ್ನಯೂ ಲೋಕಾಯುಕ್ತ ವರದಿ ಮಾಡಿದೆ. ಹಾಗೇ ...ಸಿದ ಗಡಿ ಕಲ್ಲುಗಳನ್ನಾದರೂ ಸರ್ಕಾರ ಮತ್ತೆ ...ದೆಯೇ?

...ಅದೂ ಇಲ್ಲ. ಏಕೆಂದರೆ ಸರ್ಕಾರ ಒಮ್ಮೆ ರೆಡ್ಡಿಗಳು ...ಸಿದ ಟ್ರೈಜಂಕ್ಷನ್ ಪಾಯಿಂಟನ್ನು ಪುನರ್‌ಸ್ಥಾಪಿಸಿತೆಂದರೆ ...ಗಳು ದೋಚಿದ ಅದಿರಿನ ಲೆಕ್ಕ ಸಿಕ್ಕಿಬಿಡುತ್ತದೆ.

...ಕುಚೋದ್ಯವೆಂದರೆ ಓಎಂಸಿ ಕಂಪನಿಯ ಗಣಿ ರೆಡ್ಡಿಗಳು ...ಮ ಸಮ್ಮತವಾಗಿ ಪರವಾನಗಿ ಪಡೆದು ಸಂಪಾದನೆ ...ಡಿದ್ದಾರೆಂದು ಮುಖ್ಯಮಂತ್ರಿ ಯಡ್ಡಿಯೇ ಬೆಳಗಾವಿ ...ಅಧಿವೇಶನದಲ್ಲಿ ಕ್ಲೀನ್ ಚಿಟ್ ಕೊಡುತ್ತಾರೆ. ಓರ್ವ ...ಮುಖ್ಯಮಂತ್ರಿಯಾಗಿ ಯಡ್ಡಿ ಯಾವ ಯಾವ ಆಧಾರದ ...ಲೆ ಗಣಿ ರೆಡ್ಡಿಗಳಿಗೆ ಕ್ಲೀನ್ ಚಿಟ್ ಕೊಡುತ್ತಾರೆ? ಮಲಪನಗುಡಿಯಲ್ಲಿ ಓಎಂಸಿ ಕಂಪೆನಿಗೆಂದು ಆಂಧ್ರ ಸರ್ಕಾರ ಕೊಟ್ಟ ಲೈಸೆನ್ಸನ್ನು ಮುಖ್ಯಮಂತ್ರಿಗಳು ಪರಿಶೀಲಿಸಿದ್ದಾರಾ? ಹೈದರಾಬಾದಿನ ಹೈಕೋರ್ಟು ಓಎಂಸಿ ಕಂಪೆನಿಗೆ ಕೊಟ್ಟ ಪರವಾನಗಿಯನ್ನು ರದ್ದುಗೊಳಿಸಿರುವ ಸಂಗತಿ ಗೊತ್ತಿಲ್ಲವೆ?

ಹಾಳಾಗಲಿ, ಗೃಹಮಂತ್ರಿ ಆಚಾರ್ಯ ನಮ್ಮ ರಾಜ್ಯದ ಗಡಿಯನ್ನು ಗುರುತಿಸುವಂತೆ ಆಂಧ್ರಕ್ಕೆ ಪತ್ರ ಬರೆಯುತ್ತೇನೆನ್ನುತ್ತಾರಲ್ಲ; ನಮ್ಮ ರಾಜ್ಯದ ಗಡಿಯನ್ನು ಗುರುತಿಸಿಕೊಳ್ಳುವ ಯೋಗ್ಯತೆಯೂ ಕನ್ನಡಿಗರಿಲ್ಲವೆ? ಇದೆಂಥ ಮೂರ್ಖ ಮತ್ತು ಹೇಡಿತನದ ಹೇಳಿಕೆ? ಬ್ರಿಟಿಷ್ ಆಳ್ವಿಕೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿದ್ದ ರಾಯದುರ್ಗ ತಾಲ್ಲೂಕು **1956** ರಲ್ಲಿ ಆಂಧ್ರಕ್ಕೆ ಸೇರ್ಪಡೆಯಾಯಿತು. ಕರ್ನಾಟಕವೇ ಆಂಧ್ರಕ್ಕೆ ಬಿಟ್ಟುಕೊಟ್ಟ ರಾಯದುರ್ಗ ತಾಲ್ಲೂಕಿನ ಮಲಪನಗುಡಿ ಎಂಬ ಗ್ರಾಮದ ಗಡಿಯನ್ನು ಆಂಧ್ರವೇ ಗುರುತಿಸಬೇಕಾ?

ಇದೆಂಥ ಹೇಡಿತನ? ಇದನ್ನು ಕಂಡೂ ಕಾಣದಂತಿರುವ ವಿರೋಧ ಪಕ್ಷಗಳಿಗೆ ಏನೆನ್ನಬೇಕು? ಎಂಥೆಂಥದೋ ಚಿಲ್ಲರೆ ಸಂಗತಿಗಳೆಲ್ಲ ಸಿಬಿಐ ತನಿಖೆಗೊಳಪಡುವಾಗ ಗಣಿ ಲೂಟಿಯ ಬಗ್ಗೆ ಯಾರೂ ಏಕೆ ಸಿಬಿಐ ತನಿಖೆಗೆ ಒತ್ತಾಯಿಸುತ್ತಿಲ್ಲ?

■ ರಾ. ಸೋಮನಾಥ್

ಶಿವಮೊಗ್ಗ ಬಂ? ಇಲ್ಲಾ ಕು ಬಂ?

ತಮ್ಮ ವೃತ್ತಿ ರಾಜಕೀಯ ಜೀವನದಲ್ಲಿ ಮತ್ತೊಂದು ಜಂಪ್‌ಗೆ ಸಿದ್ಧವಾಗಿದ್ದ ಮಾಜಿ ಮುಖ್ಯಮಂತ್ರಿ 'ಬಂ'ಗೆ ಕಾಂಗ್ರೆಸ್ ಇನ್ನೂ 'ಗ್ರೀನ್ ಸಿಗ್ನಲ್' ಕೊಟ್ಟಿಲ್ಲ. ದೈಹಿಕವಾಗಿ ಮತ್ತು ರಾಜಕೀಯವಾಗಿ ಸೋತು ಸುಣ್ಣವಾಗಿರುವ ಇವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವುದರಿಂದ ಲಾಭವೇನು ಎಂಬ ಲೆಕ್ಕಾಚಾರ ಹಾಕುವುದರಲ್ಲಿಯೇ ಹೈಕಮಾಂಡ್ ಕಾಲ ನೂಕುತ್ತಿದೆ. ಈ ಮಧ್ಯೆ ಬಂಗಾರಪ್ಪನವರ ಬದ್ಧ ದ್ವೇಷಿಗಳೆನಿಸಿಕೊಂಡ ಮಾಜಿ ಮುಖ್ಯಮಂತ್ರಿ ಮೊಯ್ಲಿ ಮತ್ತು ಮಾಜಿ ಸಚಿವ ಜನಾರ್ಧನ ಪೂಜಾರಿ, ಈ 'ಮುದಿ ಹುಲಿ' ಮೇಲೆ ತಮ್ಮ 'ಪರಾಕ್ರಮ' ತೋರಿಸಿ, ಹೈಕಮಾಂಡ್‌ನ ಗೊಂದಲವನ್ನು ಇನ್ನಷ್ಟು ಹೆಚ್ಚು ಮಾಡಿದ್ದಾರೆ. ಈ ಎಲ್ಲ ಕಾರಣಗಳಿಂದ ಈಗ ರಾಜ್ಯದ ಉಸ್ತುವಾರಿ ಹೊಣೆ ಹೊತ್ತಿರುವ ಆಜಾದ್ ಅಂಗಳದಲ್ಲಿ ಬಂ ಭವಿಷ್ಯ ನಿಂತಿದೆ.

ವಿಧಾನಸಭಾ ಚುನಾವಣೆಯ ಹೀನ ಸೋಲು ಅವರನ್ನು ಮತ್ತೆ ಕಾಂಗ್ರೆಸ್ ಪಕ್ಷದ ಬಾಗಿಲು ತಟ್ಟುವಂತೆ ಮಾಡಿತ್ತು. ಆದರೆ ಕಾಂಗ್ರೆಸ್ ಪಕ್ಷದ ಉನ್ನತ ಮಟ್ಟದ ನಾಯಕರೊಂದಿಗೆ ಹೊಂದಿದ್ದ ಸಂಬಂಧಗಳನ್ನೆಲ್ಲಾ ಹಾಳು ಮಡಿಕೊಂಡಿದ್ದ ಬಂ'ಗೆ ಕೆಳಬಾಗಿಲಿನಿಂದಲೇ ಒಳಪ್ರವೇಶಿಸುವುದು ಅನಿವಾರ್ಯವಾಗಿತ್ತು. ಹೀಗಾಗಿ ಶಿವಮೊಗ್ಗದ ಮುಖವಿಲ್ಲದ ಕಾಂಗ್ರೆಸ್ ನಾಯಕರ ಮನವೊಲಿಸಿ, ಅವರನ್ನೇ ಪಕ್ಷದ ವೇದಿಕೆಗೆ ಹತ್ತಲು ಏಣಿಯಾಗಿಸಿಕೊಂಡರು. ಆದರೆ ವೇದಿಕೆ ಮೇಲಿದ್ದವರು ಒಳಬಿಡುತ್ತಿಲ್ಲ. ಸಮಾಜವಾದಿ ಪಕ್ಷಕ್ಕೆ ಮತ್ತು ಸಂಸತ್ ಸದಸ್ಯತ್ವಕ್ಕೆ ರಾಜೀನಾಮೆ ಬಿಸಾಕಿ ಬಂದಿರುವ ಅವರೀಗ ಕಾಂಗ್ರೆಸ್ ಬಾಗಿಲಲ್ಲೇ ಕಾಲಕಳೆಯುವಂತಾಗಿದೆ.

ದಿಲ್ಲಿಯಲ್ಲಿ ಸೋನಿಯಾ ಗಾಂಧಿ ಭೇಟಿ ಮಾಡುತ್ತೇನೆ, ಅಂದು ಪಕ್ಷ ಸೇರುತ್ತೇನೆ, ಇಂದು ಸೇರುತ್ತೇನೆ, ಶಿವಮೊಗ್ಗದಲ್ಲಿ ದೊಡ್ಡ ಸಮಾವೇಶ ಮಾಡಿ ಶಕ್ತಿ ಪ್ರದರ್ಶಿಸುತ್ತೇನೆ ಎಂದೆಲ್ಲಾ ಸಾರ್ವಜನಿಕವಾಗಿ ಬೊಗಳೆ ಬಿಟ್ಟು, ಪಕ್ಷದ ಬಾಗಿಲಿನಲ್ಲಿ ಬಂದು ಕುಳಿತಿರುವ ಬಂಗೆ ಪಕ್ಷದ ಹೈಕಮಾಂಡ್ ಹೇಳಿ ಕಾಯುವಂತೆ ಮಾಡಿದೆ.

ಆಜಾದ್‌ಗೆ ಇಷ್ಟವಿಲ್ಲವೆ?


ಒಂದು ಕಾಲದಲ್ಲಿ ಗುಲಾಂ ನಬಿ ಆಜಾದ್ ಮತ್ತು ಬಂಗಾರಪ್ಪ ಆಗ್ದಿ ದೋಸ್ತರಾಗಿದ್ದರು. ಆದರೆ ಬಂಗಾರಪ್ಪ ಈ ಸಂಬಂಧವನ್ನೂ ಉಳಿಸಿಕೊಂಡಿಲ್ಲ. ಅವರ ಮಾತಿಗೆ ಬೆಲೆ ನೀಡದೆ ಪಕ್ಷ ಬಿಟ್ಟಿದ್ದರು. ಮುಂದೆ ಬಿಜೆಪಿಯನ್ನೂ ಸೇರಿದ್ದರು. ಹೀಗೆ ಅರ್ಥವಿಲ್ಲದ, ಸಿದ್ಧಾಂತವಿಲ್ಲದ ರಾಜಕೀಯ ಮಾಡುವ ಬಂ ಬರೀ ಅವಕಾಶವಾದಿ ಎಂಬುದು ಆಜಾದ್ ಅನಿಸಿಕೆಯಾಗಿದೆ. ಹೀಗಾಗಿ 'ಬಂರನ್ನು ಪಕ್ಷಕ್ಕೆ ಸೇರಿಸಿಕೊಂಡು ವೇದಿಕೆಯ ಭಾರವನ್ನು ಇನ್ನಷ್ಟು ಹೆಚ್ಚಿಸುವ ಅವಶ್ಯಕತೆ ಇದೆಯೇ ಎಂದು ಅವರು ಚಿಂತಿಸುತ್ತಿದ್ದಾರಂತೆ.



ಕೇಳಿಬಂದಿದೆ ಕು.ಬಂ ಹೆಸರು

ಈ ನಡುವೆ ಬೆಂಗಳೂರಿಗೆ ಬಂದಿದ್ದ ಆಜಾದ್ ಶಿವಮೊಗ್ಗ ಕಾಂಗ್ರೆಸ್ ನಾಯಕರನ್ನು ಕರೆದು ಮಾತನಾಡಿಸಿದ್ದಾರೆ. ಕಾಗೋಡು ತಿಮ್ಮಪ್ಪ ಬಣ ಬಂರನ್ನು ಬೇಗ ಸೇರಿಸಿಕೊಂಡು ಅಭ್ಯರ್ಥಿಯನ್ನಾಗಿ ಮಾಡಿ ಎಂದಿದೆ. ಆದರೆ ಯುವ ಕಾಂಗ್ರೆಸ್ ಅಧ್ಯಕ್ಷ ಸುಂದರೇಶ್ ಮತ್ತಿತರರು ಬಂರ ಪುತ್ರ ಕುಮಾರ್ ಬಂಗಾರಪ್ಪರನ್ನು ನಿಲ್ಲಿಸಿದರೆ ಗೆಲುವು ಖಚಿತ ಎಂದು ಆಜಾದ್‌ಗೆ ಹೇಳಿದ್ದಾರೆ.

ಹಿಂದಿನಂತೆ ಓಡಾಡಿ ಪ್ರಚಾರ ಮಾಡಲು ಬಂಗಾರಪ್ಪನವರಿಗೆ ಈಗ ದೈಹಿಕ ಶಕ್ತಿ ಕೂಡಾ ಇಲ್ಲ. ಹೀಗಾಗಿ ಅವರ ಮಗ ಕುಮಾರ್ ಬಂಗಾರಪ್ಪರನ್ನು ಕಣಕ್ಕಿಳಿಸುವುದೇ ಒಳ್ಳೆಯದು. ಮುಖ್ಯಮಂತ್ರಿ ಯಡ್ಡಿ ಪುತ್ರ ರಾಘವೇಂದ್ರ ಬಿಜೆಪಿಯಿಂದ ಸ್ಪರ್ಧಿಸುವುದು ಖಚಿತವಾಗಿರುವುದರಿಂದ ಪಕ್ಷ ಈಡಿಗ ಸಮುದಾಯ ಅಭ್ಯರ್ಥಿಯನ್ನೇ ಕಣಕ್ಕಿಳಿಸಬೇಕು. ಯುವಕ ರಾಘವೇಂದ್ರನಿಗೆ ಸವಾಲೊಡ್ಡಲು ಯುವ ನಾಯಕ ಕು.ಬಂ ಸಮರ್ಥರು. ನಿಜವಾಗಿಯೂ ಕಾಂಗ್ರೆಸ್ ಪಕ್ಷದ ಬಗ್ಗೆ ಬಂಗಾರಪ್ಪನವರಿಗೆ ಅಭಿಮಾನವಿದ್ದರೆ, ಅವರು ತಮ್ಮ ಮಗ ಕು.ಬಂಗಾರಪ್ಪನನ್ನು ಗೆಲ್ಲಿಸಲಿ ಎಂದು ಅವರೆಲ್ಲ ಆಜಾದ್ ಮುಂದೆ ವಾದಿಸಿದ್ದಾರೆ.




ಈ ನಡುವೆ ಲಿಂಗಾಯತರೂ ತಮ್ಮ ಲಾಬಿ ಆರಂಭಿಸಿ ಅಡಿಕೆ ವರ್ತಕ ವಡ್ನಾಳ್ ರಾಜಣ್ಣಗೆ ಟಿಕೆಟ್ ನೀಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಒಟ್ಟಾರೆಯಾಗಿ ಬಂ ಪಕ್ಷ ಸೇರ್ಪಡೆ ಮತ್ತು ಅಭ್ಯರ್ಥಿಯಾಗಿ ಆಯ್ಕೆಯಾಗುವುದು ಎಲ್ಲವೂ ಸುಗಮವಾಗಿ ನಡೆಯುವಂತೆ ಕಾಣುತ್ತಿಲ್ಲ.

ರಾಜಕೀಯ ನಿವೃತ್ತಿ ತೆಗೆದುಕೊಳ್ಳಬೇಕಾದ ವಯಸ್ಸಿನಲ್ಲಿ ಬಂಗಾರಪ್ಪ ಮಗ ಕುಮಾರ್ ಬಂಗಾರಪ್ಪ ಜೊತೆ ನಿಂತರೆ ಈ ಬಾರಿ ಶಿವಮೊಗ್ಗದಲ್ಲಿ ಭಾರಿ ಫೈಟ್ ಖಚಿತ

■ ವರದಿಗಾರ ■

ಬಾಂಗ್ಲಾ ಸೈನಿಕ ದಂಗೆ

ಪಕ್ಕದ ಬಾಂಗ್ಲಾದೇಶ ಮೊನ್ನೆ ಫೆಬ್ರವರಿ 25ರಿಂದ ಮೊದಲ್ಗೊಂಡು ತಿಂಗಳಾಂತ್ಯದವರೆಗೆ ನಡೆದ ಸೈನಿಕ ದಂಗೆಯಿಂದ ಅಕ್ಷರಶಃ ತತ್ತರಿಸಿಹೋಗಿದೆ. ದೇಶದ ಅರೆಸೈನಿಕ ಪಡೆಯಾದ ಬಾಂಗ್ಲಾದೇಶ್ ರೈಫಲ್ಸ್‌ನ ಒಂದು ಸಾವಿರಕ್ಕೂ ಹೆಚ್ಚು ಯೋಧರ ಕ್ರೋಧಕ್ಕೆ ಸುಮಾರು ಇನ್ನೂರರಷ್ಟು ಸೈನ್ಯಾಧಿಕಾರಿಗಳು ಬಲಿಯಾಗಿದ್ದಾರೆ. ಪ್ರಧಾನಿ ಶೇಖ್ ಹಸೀನಾ ಅವರು ಯೋಧರಿಗೆ ಹೆದರಿ ಸೈನಿಕ ಪಾಳೆಯದಲ್ಲಿ ತಂಗುವ ಪರಿಸ್ಥಿತಿ



ಎದುರಾಗಿತ್ತು ಎಂದರೆ ದಂಗೆಯ ಭೀಕರತೆ ಎಷ್ಟರಮಟ್ಟಿಗಿದ್ದಿರಬಹುದು?

ಈ ಯೋಧರ ದಂಗೆಗೆ ಕೆಲವು ತಾರ್ಕಿಕ ಮತ್ತು ನ್ಯಾಯಸಮ್ಮತ ಕಾರಣಗಳಿವೆ. ಬಾಂಗ್ಲಾದೇಶ್ ರೈಫಲ್ಸ್ ಒಂದು ಪೂರ್ಣಪ್ರಮಾಣದ ಸೈನ್ಯವಲ್ಲ, ದೇಶದ ಗಡಿ ಕಾಯುವ ಜವಾಬ್ದಾರಿ ಹೊತ್ತಿರುವ ಅರೆಸೇನಾಪಡೆ. ರೆಗ್ಯೂಲರ್ ಸೇನೆಯ ಅಧಿಕಾರಿಗಳೇ ಈ ಪಡೆಯ ಅಧಿಕಾರಿಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಬಾಂಗ್ಲಾದೇಶ್ ರೈಫಲ್ಸ್‌ನಿಂದ ಈ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಏರ್ಪಡಿಸಿ ನೇಮಕಾತಿ ನೇರ ಮಾಡಿಕೊಳ್ಳಬೇಕು ಎಂಬುದು ಅವರ ಬಹುದಿನದ ಬೇಡಿಕೆಯಾಗಿತ್ತು. ತಮ್ಮ ಬೇಡಿಕೆಯ ವಿರುದ್ಧ ಬಾಂಗ್ಲಾದೇಶ್ ರೈಫಲ್ಸ್‌ನ ಡೈರೆಕ್ಟರ್ ಜನರಲ್ ಮತ್ತು ಡೆಪ್ಯೂಟಿ ಡೈರೆಕ್ಟರ್ ಜನರಲ್‌ಗಳಂಥ ಅತ್ಯುನ್ನತ ಅಧಿಕಾರಿಗಳೂ 'ಸಂಚು' ನಡೆಸುತ್ತಿದ್ದಾರೆಂಬುದು ಸಾಮಾನ್ಯ ಯೋಧರ ಆರೋಪವಾಗಿತ್ತು. ಅದೂ ಅಲ್ಲದೇ, ಬೇರೆ ರೆಗ್ಯೂಲರ್ ಸೈನ್ಯದ ಅಧಿಕಾರಿಗಳು ತಮ್ಮ ಬಾಂಗ್ಲಾದೇಶ್ ರೈಫಲ್ಸ್ ಪಡೆಯ ಅಧಿಕಾರಿಗಳಾಗಿ ಸಾಮಾನ್ಯ ಯೋಧರ ಮೇಲೆ ದೌರ್ಜನ್ಯ ನಡೆಸುವುದು, ಅವರನ್ನು ಕೀಳಾಗಿ ಕಾಣುವುದು ನಡೆದೇ ಇತ್ತು, ಅದೂ ಅಲ್ಲದೇ ಈ ಪಡೆಯಲ್ಲಿ ಕರ್ತವ್ಯನಿರ್ವಹಿಸುತ್ತಿದ್ದ ಯೋಧರಿಗೆ ಪ್ರತಿ ತಿಂಗಳು ಕೇವಲ ಮೂರು ಸಾವಿರ ರೂಪಾಯಿಯಷ್ಟು ಸಣ್ಣ ಮೊತ್ತದ ಹಣವನ್ನು ಸಂಬಳವಾಗಿ ನೀಡಲಾಗುತ್ತಿತ್ತು. ಹೀಗೆ ಹತ್ತಾರು ಸಮಸ್ಯೆಗಳಿಂದ ಬಳಲುತ್ತಿದ್ದ ಯೋಧರಲ್ಲಿ ಮೇಲಧಿಕಾರಿಗಳ ವಿರುದ್ಧದ ಸಿಟ್ಟು ಬಹಳ ದಿನಗಳಿಂದ ಹೆಪ್ಪುಗಟ್ಟುತ್ತಿತ್ತು, ಅದು ಮೊನ್ನೆ ಫೆಬ್ರವರಿ 25ರಂದು ಸ್ಫೋಟಗೊಂಡು ಪೂರ್ಣಪ್ರಮಾಣದ ದಂಗೆಯಾಗಿ ಮಾರ್ಪಟ್ಟಿತು.

ಪ್ರತೀ ವರ್ಷದಂತೆ ಈ ವರ್ಷವೂ ಬಾಂಗ್ಲಾದೇಶ್ ರೈಫಲ್ಸ್‌ನ ಸಪ್ತಾಹದ ಆಚರಣೆ ಭರದಿಂದ ಸಾಗಿತ್ತು, ಫೆಬ್ರವರಿ 24ರಂದು ಪ್ರಧಾನಿ ಶೇಖ್ ಹಸೀನಾರವರೇ ಇದರ ಉದ್ಘಾಟನೆ ನಡೆಸಿದ್ದರು. ಅದರ ಮರುದಿನ ಬಾಂಗ್ಲಾದೇಶ್ ರೈಫಲ್ಸ್‌ನ ಮುಖ್ಯಸ್ಥ ಡೈರೆಕ್ಟರ್ ಜನರಲ್ ಶಕೀಲ್ ಅಹ್ಮದ್ ಭಾಷಣ ಮಾಡಲು ಪ್ರಾರಂಭಿಸುತ್ತಿದ್ದಂತೆಯೇ ರೈಫಲ್ಸ್‌ನ ಸಾಮಾನ್ಯ ಯೋಧರು ಶಸ್ತ್ರಸಜ್ಜಿತವಾಗಿ ದಾಳಿ ನಡೆಸಿ ಶಕೀಲ್ ಅಹ್ಮದ್‌ರನ್ನೂ ಒಳಗೊಂಡಂತೆ ಹಿರಿಯ ಅಧಿಕಾರಿಗಳನ್ನೆಲ್ಲಾ ಬಂಧಿಸಿ ಸಭಾಂಗಣದಲ್ಲೇ ಒತ್ತೆಯಾಳುಗಳನ್ನಾಗಿ ಇರಿಸಿಕೊಂಡರು. ಕೆಲವೇ ಕ್ಷಣಗಳಲ್ಲಿ ಇಡೀ ರೈಫಲ್ಸ್ ಪಡೆಯ ಕೇಂದ್ರ ಕಚೇರಿಯೂ ಕ್ರೋಧಗೊಂಡ ಯೋಧರ ವಶಕ್ಕೆ ಬಂದಿತು. ಆವತ್ತು ಏನಿಲ್ಲವೆಂದರೂ ಕನಿಷ್ಠ ಐವತ್ತು ಅಧಿಕಾರಿಗಳು ಸಾಮಾನ್ಯ ಯೋಧರ ಕೋಪಕ್ಕೆ ಬಲಿಯಾದರು.

ಬಾಂಗ್ಲಾದೇಶದ ರಾಜಧಾನಿ ಢಾಕಾದಲ್ಲಿ ಈ ದಂಗೆ ಪ್ರಾರಂಭವಾಗುತ್ತಿದ್ದಂತೆಯೇ ಅದು ಮಿಂಚಿನ ವೇಗದಲ್ಲಿ ಇಡೀ ದೇಶದಾದ್ಯಂತ ಹಬ್ಬಿತು. ಮರುದಿನ, ಅಂದರೆ, ಫೆಬ್ರವರಿ 26ರಂದು ದೇಶದ 12 ನಗರಗಳಲ್ಲಿದ್ದ ಬಾಂಗ್ಲಾದೇಶ್ ರೈಫಲ್ಸ್‌ನ ತುಕಡಿಗಳಲ್ಲೂ ಸಾಮಾನ್ಯ ಯೋಧರು ಅಲ್ಲಿನ ಅಧಿಕಾರಿಗಳ ವಿರುದ್ಧ ದಂಗೆಯೆದ್ದರು. ಮೂರು ಮತ್ತು ನಾಲ್ಕನೇ ದಿನವೂ ದಂಗೆ ಮುಂದುವರೆದಿತ್ತು. ಶೇಖ್ ಹಸೀನಾ ದಂಗೆಯಲ್ಲಿ ಪಾಲ್ಗೊಂಡಿದ್ದ ಯೋಧರ ಬೇಡಿಕೆಗಳನ್ನು ಈಡೇರಿಸುವ ಭರವಸೆ ಕೊಟ್ಟ ಮೇಲೆ ದಂಗೆಯ ತೀವ್ರತೆ ಒಂದಿಷ್ಟು ಕಡಿಮೆಯಾಯಿತು. ಆದರೆ, ಅಷ್ಟು ಹೊತ್ತಿಗಾಗಲೇ ಆಗಬಾರದಷ್ಟು ಹಾನಿ ಆಗಿಹೋಗಿತ್ತು. ಸತತವಾಗಿ ನಾಲ್ಕು ದಿನಗಳ ಕಾಲ ನಡೆದ ಈ ದಂಗೆಯಲ್ಲಿ ಬಾಂಗ್ಲಾದೇಶ್ ರೈಫಲ್ಸ್‌ನ ಮುಖ್ಯಸ್ಥ ಶಕೀಲ್ ಅಹಮದ್‌ರನ್ನೂ ಒಳಗೊಂಡಂತೆ ಸುಮಾರು 170ಕ್ಕೂ ಹೆಚ್ಚು ಸೇನಾಧಿಕಾರಿಗಳನ್ನು ಯೋಧರು ಕೊಂದು ಹಾಕಿದ್ದರು. ಹತ್ತಾರು ಸಾಮೂಹಿಕ ಗೋರಿಗಳಲ್ಲಿ ಅವರನ್ನು ಹೂತಿಡಲಾಗಿತ್ತು, ಇನ್ನೂ ಹತ್ತಾರು ಅಧಿಕಾರಿಗಳು ಕಾಣೆಯಾಗಿದ್ದಾರೆ. ಸಾಮೂಹಿಕ ಗೋರಿಗಳನ್ನು ಹುಡುಕುವ ಕೆಲಸ ಮುಂದುವರೆಯುತ್ತಿದೆ.

ಬಾಂಗ್ಲಾದೇಶ್ ರೈಫಲ್ಸ್‌ನ ಯೋಧರ ಈ ದಂಗೆ ಹಲವಾರು ಪ್ರಶ್ನೆಗಳನ್ನು ಮುಂದೆ ತಂದಿದೆ. ರಕ್ಷಣಾಪಡೆಗಳು ಯಾವುದೇ ದೇಶದ್ದಾಗಿರಲಿ, ಅವುಗಳಲ್ಲಿ ಅಧಿಕಾರಿಗಳು ಮತ್ತು ಸಾಮಾನ್ಯ ಯೋಧರ ನಡುವೆ ಊಹಿಸಲು ಅಸಾಧ್ಯವಾದ ಶತ್ರುತ್ವದ ಸಂಬಂಧಗಳು ಬೆಳೆದಿರುತ್ತವೆ.

ಸುತ್ತ ಮುತ್ತ

ಕುಮಾರ್ ಬುರಡಿಕಟ್ಟಿ





ಅಧಿಕಾರಿಗಳು ಸಾಮಾನ್ಯ ಯೋಧರನ್ನು ಅತ್ಯಂತ ಕೀಳಾಗಿ ಕಾಣುವುದು, ಹೇಳಲಸಾಧ್ಯವಾದ ರೀತಿಯಲ್ಲಿ ಅವಹೇಳನ ಮಾಡುವುದು ನಡೆದೇ ಇರುತ್ತದೆ. ಸಹಜವಾಗಿ ಇದು ಸಾಮಾನ್ಯ ಯೋಧರಲ್ಲಿ ಅಧಿಕಾರಿಗಳ ವಿರುದ್ಧ ಕೋಪ, ಅಸಹನೆ ಬೆಳೆಯಲು ಕಾರಣವಾಗುತ್ತದೆ. ಅದು ಮಿತಿಮೀರಿ ಕಟ್ಟೆಯೊಡೆದಾಗ ಅಧಿಕಾರಿಗಳ ವಿರುದ್ಧ ಹಿಂಸಾತ್ಮಕ ಪ್ರತಿಭಟನೆಗೆ ದಾರಿ ಮಾಡಿಕೊಡುತ್ತದೆ.

ನಮ್ಮ ದೇಶದ ಮಿಲಿಟರಿಯಲ್ಲೂ ಸಹ ಯೋಧರು ಅಧಿಕಾರಿಗಳನ್ನು ಗುಂಡಿಕ್ಕಿ ಕೊಂದ ಅದೆಷ್ಟೋ ಉದಾಹರಣೆಗಳಿವೆ. ಕೆಲವಂತೂ ಬೆಳಕಿಗೆ ಬರುವುದೇ ಇಲ್ಲ. ಇತ್ತೀಚೆಗೆ ಮೈಸೂರಿನಲ್ಲಿ ಪೇದೆಯೊಬ್ಬ ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬನನ್ನು ಗುಂಡಿಕ್ಕಿ ಕೊಂದದ್ದು ಇದಕ್ಕೆ ಒಂದು ತಾಜಾ ಉದಾಹರಣೆಯಷ್ಟೆ. ಎಲ್ಲಿಯತನಕ ರಕ್ಷಣಾ ಪಡೆಗಳೂ ಕೂಡ ಪ್ರಜಾತಾಂತ್ರಿಕರಣಗೊಳ್ಳುವುದಿಲ್ಲವೋ, ಎಲ್ಲಿಯ ತನಕ ಅವುಗಳಲ್ಲಿ ಸಾಮಾನ್ಯ ಯೋಧ/ಪೇದೆಗಳನ್ನು ಮಾನವೀಯತೆಯಿಂದ ನೋಡಿಕೊಳ್ಳುವ ಪರಿಪಾಠ ಬೆಳೆಯುವುದಿಲ್ಲವೋ ಅಲ್ಲಿಯತನಕ ಇಂತಹ ದಂಗೆಗಳು ಸಿಡಿಯುತ್ತಲೇ ಇರುತ್ತವೆ. ■

ಖಾಸಗಿ ಬಸ್‌ಸ್ಟ್ಯಾಂಡ್ ಕರ್ಮಕಾಂಡ

ಸೊಗಡು ಶಿವಣ್ಣನ ರಗಳೆ





ತುಮಕೂರಿಗೆ ಬೆಂಕಿ ಬಿದ್ದಷ್ಟೂ ಎಮ್ಮೆಲ್ಲೇ ಸೊಗಡು ಶಿವಣ್ಣನಿಗೆ ಪರಮಾನಂದ. ಬಡಬಗ್ಗರು ಕೊರಕೊರಗಿ ಸತ್ತರೆ ಇನ್ನೂ ಮಹದಾನಂದ!

ಒಬ್ಬ ಶಾಸಕ ಹೇಗೆ ತನ್ನ ಊರನ್ನೇ ಕುಲಗೆಡಿಸಿ ಅದರಲ್ಲೇ ದುಡ್ಡು ಬಾಚುತ್ತಾನೆಂಬುದಕ್ಕೆ ಸದ್ಯ ಪಾಳುಬಿದ್ದ ತುಮಕೂರಿನ ಖಾಸಗಿ ಬಸ್ ನಿಲ್ದಾಣ ಮತ್ತು ಅದನ್ನೇ ಅವಲಂಬಿಸಿದ್ದ ನೂರಾರು ಬಡಬಗ್ಗರ ನಿಟ್ಟುಸಿರೊಂದೇ ಸಾಕ್ಷಿಯಂತಿದೆ. ರಸ್ತೆ ಕಾಮಗಾರಿ ಕಮಿಷನ್, ರಸ್ತೆ ಅಗಲೀಕರಣದ ಗೋಲ್‌ಮಾಲ್, ಸರ್ಕಾರಿ ಭೂಮಿ ಕಬಳಿಸಿ ಸೊಗಡು ಲೇಔಟ್ ದಂಧೆ, ಫ್ಯಾಕ್ಟರಿ ಮಾಡುತ್ತೇನೆಂದು ಇಂಡಸ್ಟ್ರೀಯಲ್ ಸೈಟು ವಂಚನೆ; ಹೀಗೆ ರೊಕ್ಕ ಹುಟ್ಟುತ್ತದೆಯೆಂದರೆ ಯಾವ ಕೊಚ್ಚೆಗಾದರೂ ನಾಲಿಗೆ ಹೆಟ್ಟುವ ಎಮ್ಮೆಲ್ಲೇ ಶಿವಣ್ಣನ ದುರಾಚಾರದ ಫಲವಾಗಿ ತುಮಕೂರಿನ ಖಾಸಗಿ ಬಸ್ ನಿಲ್ದಾಣವನ್ನೇ ನಂಬಿಕೊಂಡಿದ್ದ ನೂರಾರು ಬಡ ಕುಟುಂಬಗಳು ಅವಸಾನದ ಅಂಚಿನಲ್ಲಿವೆ.

ತುಮಕೂರಿನ ಸರ್ಕಾರಿ ಬಸ್ ನಿಲ್ದಾಣದ ಎದುರಿಗೇ ಖಾಸಗಿ ಬಸ್ ನಿಲ್ದಾಣವಿತ್ತು. ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆಯ (IDSMT) ಅಡಿಯಲ್ಲಿ ಹಳೇ ಖಾಸಗಿ ಬಸ್ ನಿಲ್ದಾಣವನ್ನು ಕೆಡವಿ ಅಲ್ಲೊಂದು ಸುಸಜ್ಜಿತ ಕಾಂಪ್ಲೆಕ್ಸ್ ಕಟ್ಟುವ ಯೋಜನೆ ಶುರುವಾಗಿದ್ದು 2006 ರಲ್ಲಿ. ಅದು ನೂರಾರು ಸಣ್ಣಪುಟ್ಟ ಅಂಗಡಿಗಳು, ಕ್ಯಾಂಟೀನ್, ಹಣ್ಣಿನ ವ್ಯಾಪಾರಿಗಳು, ಪುಸ್ತಕ ಮಳಿಗೆಗಳೆಲ್ಲಕ್ಕೂ ಆಸರೆಯತ್ತ ಬಸ್ ನಿಲ್ದಾಣ. ಇಂಥ ನೂರಕ್ಕೂ ಹೆಚ್ಚು ಅಂಗಡಿ ಮಳಿಗೆಗಳನ್ನು ತೆರವುಗೊಳಿಸಿ ಹಳೇಕಟ್ಟಡವನ್ನು ನೆಲಸಮಗೊಳಿಸಲು ಆಗಿನ ಜಿಲ್ಲಾಧಿಕಾರಿ ಎಸ್.ಆರ್. ಉಮಾಶಂಕರ್ ಅತೀವ ಮುತುವರ್ಜಿ ವಹಿಸಿದ್ದರು. ಕೇವಲ ಕಮಿಷನ್ ಆಸೆಯಿಂದಷ್ಟೇ ಅಲ್ಲ, ಅಲ್ಲಿದ್ದ ವರ್ತಕರಿಂದಲೂ ಒಂದು ಸುತ್ತಿನ ವಸೂಲಿ ಮಾಡಿಕೊಂಡಿದ್ದ. ಹೀಗೆ ತಲೆ ಎತ್ತಲಿರುವ ಹೊಸ ಬಸ್ ನಿಲ್ದಾಣದಲ್ಲಿ ಹಿಂದಿದ್ದ ಅಂಗಡಿಯವರಿಗೇ ಮತ್ತೆ ಸ್ಥಳಾವಕಾಶ ಕಲ್ಪಿಸುವ ಸರ್ಕಾರಿ ಭರವಸೆಯಂತೆ ಆರು ತಿಂಗಳೊಳಗೆ ಹೊಸ ಬಸ್‌ಸ್ಟ್ಯಾಂಡ್ ಕಟ್ಟಬೇಕು. ಅದಕ್ಕೆ ಹಳೇ ಬಸ್‌ಸ್ಟ್ಯಾಂಡ್‌ನಲ್ಲಿ ಯಾರೆಲ್ಲ ಅಂಗಡಿಯಿಟ್ಟಿದ್ದರೋ ಪ್ರತಿ ಅಂಗಡಿಯವರೂ ತಲಾ ಮೂರು ಲಕ್ಷದಂತೆ ಗುಡ್‌ವಿಲ್ ಹಣ ಕಟ್ಟಬೇಕು. ಯಾರೆಲ್ಲ ಮುಂಗಡವಾಗಿ ಗುಡ್‌ವಿಲ್ ಮೊತ್ತ ಕಟ್ಟುತ್ತಾರೋ ಅಂಥವರಿಗೆ

ಒಬ್ಬ ಶಾಸಕನಾಗಿ ತನ್ನೂರಿಗೊಂದು ಬಸ್‌ಸ್ಟ್ಯಾಂಡ್ ಬೇಕೆಂಬುದು ಶಿವಣ್ಣನಿಗೆ ಮುಖ್ಯವಾಗಬೇಕಿತ್ತೇ ಹೊರತು ಮುಸ್ಲಿಮರ ಮೇಲಿನ ದ್ವೇಷವಲ್ಲ. ಮುಸ್ಲಿಂ ವೈಷಮ್ಯಕ್ಕೆ ಬಿದ್ದು ಮಾಡಿದ ಯಡವಟ್ಟಿಗೆ ಮುಸ್ಲಿಮರಷ್ಟೇ ಸರಿಸಮಾನವಾಗಿ ಹಿಂದೂಗಳೂ ಬಲಿಯಾದರಲ್ಲ; ಇದಕ್ಕೆ ಎಮ್ಮೆಲ್ಲೇ ಶಿವಣ್ಣ ಯಾವ ಪರಿಹಾರ ಮಾಡಬಲ್ಲ?



'ಸ್ಲಂ ಡಾಗ್...' ...ಾಶಗೊಳಿಸಿದ ಪ್ರೇಮ!






...'ಡಾಗ್ ಮಿಲೇನಿಯರ್' ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ ಪಡೆಯುವುದರೊಂದಿಗೆ ...ಾಲಿವುಡ್ ಸಿನಿಮಾ ಲೋಕದಲ್ಲಿ ಸಂಚಲನ ಸೃಷ್ಟಿಸಿದ್ದರೆ ಮುಂಬೈನ ... ಹುಡುಗ ರೋಹನ್ ಅಂಟಾವೋನ ಜೀವನದಲ್ಲಿ ಮಾತ್ರ ...ಮೆಬ್ಬಿಸಿತ್ತು. ಇಡೀ ಸಿನಿಮಾ ಜಗತ್ತು ಆಸ್ಕರ್ ಪ್ರಶಸ್ತಿ ಪ್ರದಾನ ...ರವನ್ನು ನೋಡುವುದಕ್ಕಾಗಿ ಟಿ.ವಿ. ಮುಂದೆ ಕುಳಿತಿದ್ದರೆ ಅಂಟಾವೋ ...ಕುತ್ತಾ 'ಆಸ್ಕರ್ ಪ್ರಶಸ್ತಿ ಪ್ರಧಾನ ಸಮಾರಂಭವನ್ನೂ ನೋಡುವುದಿಲ್ಲ ...ಗ್... ಚಿತ್ರವನ್ನಂತೂ ನನ್ನ ಜೀವನದಲ್ಲಿ ಎಂದೂ ನೋಡುವುದಿಲ್ಲ'

... ಕಾರಣವೂ ಇದೆ. 'ಸ್ಲಮ್ ಡಾಗ್ ಮಿಲೇನಿಯರ್'ನಲ್ಲಿ ನಾಯಕಿರುವ ... ಪಿಂಟೋ ಮತ್ತು ರೋಹನ್ ಅಂಟಾವೋ ಇಬ್ಬರೂ ಪ್ರೇಮಿಗಳು. ...ು ವರ್ಷಗಳಿಂದ ಈ ಜೋಡಿಯ ನಡುವಿದ್ದ ಸ್ನೇಹ, ಸಲುಗೆಗಳು ...ದು ವರ್ಷಗಳ ಹಿಂದೆ ಪ್ರೇಮವಾಗಿ ಮಾರ್ಪಟ್ಟಿತ್ತು. ತಮ್ಮ ಬಿಡುವಿರದ ... ನಡುವೆಯೂ ಬಿಡುವು ಮಾಡಿಕೊಂಡು ಮುಂಬೈನ ಬೀಚ್‌ಗಳಲ್ಲಿ ...ುವುದು ಹರಟುವುದು ಅವರ ದಿನಚರಿಯ ಭಾಗವಾಗಿಹೋಗಿತ್ತು. ... ಮದುವೆಯಾಗುವ ಮೂಲಕ ತಮ್ಮ ಪ್ರೇಮಕ್ಕೊಂದು ಹೊಸ ... ಕೊಡಬೇಕೆಂದೂ ನಿರ್ಧರಿಸಿದ್ದರು.

... 'ಸ್ಲಮ್‌ಡಾಗ್...' ಈ ಕನಸುಗಳನ್ನೆಲ್ಲಾ ಧೂಳೀಪಟ ಮಾಡಿಬಿಟ್ಟಿತು. ...ಿತ್ರದಲ್ಲಿ ನಾಯಕಿಯಾಗುತ್ತಿದ್ದಂತೆಯೇ, ಆ ಚಿತ್ರ ಆಸ್ಕರ್ ಪ್ರಶಸ್ತಿಯತ್ತ ಒಂದೊಂದೇ ಹೆಜ್ಜೆಯಿಡುತ್ತಿದ್ದಂತೆಯೇ, ...ಲ್ಲೆಡೆಯಿಂದ ಅವಕಾಶಗಳು ಹರಿದುಬರಲಾರಂಭಿಸಿದಂತೆ ಆಕೆ ತಮ್ಮ ಪ್ರೇಮಸೌಧದ ಬುನಾದಿಗಲ್ಲುಗಳನ್ನು ...ವಾಗಿ ಕಿತ್ತೆಸೆಯಲಾರಂಭಿಸಿದಳು. ರೋಹನ್‌ನಿಂದ ನಿಧಾನವಾಗಿ ದೂರವಾಗುತ್ತಾ 'ಸ್ಲಮ್‌ಡಾಗ್...' ನಾಯಕ ...ಟೇಲ್‌ನೊಂದಿಗೆ ಹತ್ತಿರವಾದಳು. ರೋಹನ್ ನೇರವಾಗಿ ದೇವ್‌ಗೆ ಫೋನ್ ಮಾಡಿ 'Do you know ...ngaged?' ಎಂದು ಕೇಳಿದರೆ ಆತನಿಂದ ಉತ್ತರವೇ ಬರುತ್ತಿರಲಿಲ್ಲ. ಕೊನೆಗೆ ಆಕೆಯೇ, ರೋಹನ್‌ಗೆ ...ಮಾಡಿ "Don't call me anymore" ಎಂದು ಕಡ್ಡಿ ತುಂಡು ಮಾಡಿದ ಹಾಗೆ ಹೇಳಿದಳು. ಅಲ್ಲಿಗೆ ... ಚಿತ್ರ ಆಸ್ಕರ್ ಪ್ರಶಸ್ತಿ ಗೆದ್ದು ಬರುವಷ್ಟರಲ್ಲಿ ರೋಹನ್ ಮತ್ತು ಫ್ರೀಡಾ ಪಿಂಟೋ ನಡುವಿನ ಪ್ರೇಮ ಸಂಪೂರ್ಣವಾಗಿ ನಾಶವಾಗಿತ್ತು. ದೇವ್ ಮತ್ತು ಆಕೆಯ ಸಂಬಂಧ ಗಟ್ಟಿಗೊಂಡಿತ್ತು.




ಈಗ ಫ್ರೀಡಾ ಎಲ್ಲೆಲ್ಲೂ ಮಿಂಚುತ್ತಿದ್ದಾಳೆ. ರಾಷ್ಟ್ರ ರಾಷ್ಟ್ರೀಯ ನಿಯತಕಾಲಿಕೆಗಳ ಮೇಲೆ ಅವರ ಫೋಟೋಗಳು ರಾರಾಜಿಸುತ್ತಿವೆ. ಸದ್ಯದಲ್ಲೇ ಹಾಲಿವುಡ್ಡಿನ ಪ್ರಖ್ಯಾತ ನಿರ್ದೇಶಕ ಕಂ ನಟ ವುಡಿ ಅಲೆನ್‌ನ ಚಿತ್ರದಲ್ಲಿ ನಟಿಸಲಿದ್ದಾಳೆ. ಅದರೇನಂತೆ, ಆಕೆಯನ್ನು ಹಲವಾರು ವರ್ಷಗಳ ಕಾಲ ಸಂಬದ್ಧ ಆಪಾರವಾಗಿ ಪ್ರೀತಿಸಿದ್ದ ರೋಹನ್‌ಗೆ ಕೈಕೊಟ್ಟು ಆತನ ಹೃದಯಕ್ಕೆ ದೊಡ್ಡ ಘಾಸಿ ಉಂಟು ಮಾಡಿದ್ದಾಳೆ.

ಓ ಹೆಣ್ಣೆ ನೀನೆಂತ ಚಂಚಲೆ?! ■

ರಾಘವೇಂದ್ರನಿಗೆ ಟಿಕೆಟ್

ಶಿವಮೊಗ್ಗ ಜಿಲ್ಲಾ ಬಿಜೆಪಿ ಇಬ್ಭಾಗಕ್ಕೆ ದಾರಿ!

ಮುಖ್ಯಮಂತ್ರಿ ಯಡ್ಡಿ ಸೋತು ಗೆದ್ದಿದ್ದಾರೆ. 'ಲಂಕೇಶ್' ಈ ಹಿಂದೆ ಬರೆದಂತೆಯೇ ಮಗ ರಾಘವೇಂದ್ರನಿಗೆ ಶಿವಮೊಗ್ಗದ ಟಿಕೇಟ್ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಯಡ್ಡಿಯ ಈ ಚಿಲ್ಲರೆ ರಾಜಕೀಯ ತಂತ್ರದ ಪರಿ ಕಂಡು ಶಿವಮೊಗ್ಗ ಬಿಜೆಪಿ ನಾಯಕರು ಬೆಚ್ಚಿ ಬಿದ್ದಿದ್ದಾರೆ.



ಶಿವಮೊಗ್ಗ ಕ್ಷೇತ್ರಕ್ಕೆ ರಾಘವೇಂದ್ರನ ಹೆಸರೊಂದನ್ನೇ ಸೂಚಿಸಿ ರಾಜ್ಯ ಬಿಜೆಪಿ ಘಟಕ ಶಿಫಾರಸು ಮಾಡಿದೆ. ಮುಂದೆಂದಾದರೂ ತಮ್ಮ ಮಗಳನ್ನು ರಾಜಕೀಯಕ್ಕೆ ಪರಿಚಯಿಸಬೇಕೆಂದು ಕಾದು ಕುಳಿತಿರುವ ಎಲ್.ಕೆ.ಅಡ್ವಾಣಿ ಈ ಬೆಳವಣಿಗೆಯಿಂದ ಒಳಗೊಳಗೇ ಖುಷಿಪಟ್ಟು ರಾಘವೇಂದ್ರಗೆ ಗ್ರೀನ್‌ಸಿಗ್ನಲ್ ನೀಡಿದ್ದಾರೆ. ಇನ್ನೇನು ಅಧಿಕೃತವಾಗಿ ಹೆಸರು ಪ್ರಕಟವಾಗುವುದಷ್ಟೇ ಬಾಕಿ ಇದೆ.

ಕಳೆದ ವಾರ ಅಭ್ಯರ್ಥಿ ಆಯ್ಕೆ ಕುರಿತು ಶಿವಮೊಗ್ಗದಲ್ಲಿ ನೆಪ ಮಾತ್ರಕ್ಕೆ ಸಭೆಯೊಂದನ್ನು ನಡೆಸಿ, ಮತ್ತೆ ಚರ್ಚಿಸೋಣ ಎಂದು ಹೇಳಿ ಬಂದಿದ್ದ ಯಡ್ಡಿ, ತಮ್ಮ ಈ ಮಾತು ಉಳಿಸಿಕೊಳ್ಳದೇ ರಾಜ್ಯಮಟ್ಟದ ಸಭೆಯಲ್ಲಿ ಮತ್ತೆ ತಮ್ಮ ಮಗನ ಹೆಸರನ್ನೇ ಪ್ರಸ್ತಾಪಿಸಿದ್ದಾರೆ. ಸಭೆಯಲ್ಲಿ ಅನಂತು ಬಣ ನೆಪಮಾತ್ರಕ್ಕೆ ವಿರೋಧ ವ್ಯಕ್ತಪಡಿಸಿತಾದರೂ 'ಬಲಿಗೆ ಕುರಿ ಸಿದ್ಧವಾಗಿರುವಾಗ ಬೇಡವೆನ್ನುವುದೇಕೆ' ಎಂದು ಸುಮ್ಮನಾಗಿದ್ದಾರೆ.

ಪುತ್ರವ್ಯಾಮೋಹದಿಂದ ಕುರುಡಾಗಿರುವ ಯಡ್ಡಿ ತಮ್ಮ ಮಗನನ್ನು ಅಭ್ಯರ್ಥಿಯಾಗಿಸಲು ಆಡಿದ ನಾಟಕಗಳು ಒಂದೆರಡಲ್ಲ. "ನನ್ನ ಮಗ ಅಭ್ಯರ್ಥಿಯಲ್ಲ ಅಲ್ಲ, ಅಲ್ಲ" ಎಂದು ಹೇಳುತ್ತಲೇ ಜನರನ್ನು ಮೂರ್ಖರನ್ನಾಗಿಸಲು ಯತ್ನಿಸಿದ ಯಡ್ಡಿ ಸಾಲದ್ದಕ್ಕೆ ದೇವರನ್ನೂ ಎಳೆತಂದು ಅವರ ಮೇಲೆ ಪ್ರಮಾಣ ಮಾಡಿದ್ದರು. ಯಡ್ಡಿಯ ಈ ಕುತಂತ್ರ ರಾಜಕೀಯದಿಂದ ಬೇಸತ್ತಿರುವ ಶಿವಮೊಗ್ಗ ಬಿಜೆಪಿ ಘಟಕ ಅವರ ವಿರುದ್ಧವೇ ತಿರುಗಿಬಿದ್ದಿದೆ. ಬಹಿರಂಗವಾಗಿ ಯಾವ ನಾಯಕರೂ ಅಸಮಾಧಾನ ವ್ಯಕ್ತಪಡಿಸದೇ ಇದ್ದರೂ, ಪ್ರತಿಯೊಬ್ಬರ ವರ್ತನೆಯೂ ಇದನ್ನು ಎತ್ತಿ ತೋರಿಸುತ್ತಿದೆ. ಚುನಾವಣೆ ಸಂದರ್ಭದಲ್ಲಿ ಯಡ್ಡಿಗೆ ತಕ್ಕ ಪಾಠ ಕಲಿಸಲು ಅವರೆಲ್ಲ ಕಾತುರರಾಗಿ ಕುಳಿತಿದ್ದಾರೆ.

ಪಕ್ಷಾಂತರಿ ಎಂಬ ಕಾರಣ ನೀಡಿ ತಮ್ಮನ್ನು ಕಣಕ್ಕಿಳಿಸದೇ ಇರುವುದು ಆಯನೂರಿಗೆ ಸಿಟ್ಟು ತರಿಸಿದ್ದರೆ, ಕಳೆದ ಚುನಾವಣೆಯಲ್ಲಿ ಸೋತ ಕಾರಣ ನೀಡಿ ತಮಗೆ ಟಿಕೆಟ್ ವಂಚಿಸಿರುವುದು ಭಾನುಪ್ರಕಾಶರ ಪಿತ್ತ ಕೆರಳಿಸಿದೆ. ಇನ್ನು ಈಡಿಗ ಸಮುದಾಯ ಈ ಬೆಳವಣಿಗೆಯಿಂದ ಗೊಂದಲಕ್ಕೆ ಬಿದ್ದಿದ್ದು, ಯಡ್ಡಿ ಏನೇ ಮಾಡಿದರೂ, ರಾಜಕೀಯ ಸ್ಥಾನಮಾನ ನೀಡುವಾಗ ತಮ್ಮನ್ನು ನಿರ್ಲಕ್ಷಿಸುತ್ತಾರೆ ಎಂಬ ಅನುಮಾನ ಅವರನ್ನು ಕಾಡಲಾರಂಭಿಸಿದೆ.

ಆರ್‌ಎಸ್‌ಎಸ್ ಕೂಡ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಬ್ರಾಹ್ಮಣ ಭಾನುಪ್ರಕಾಶ್ ಅಭ್ಯರ್ಥಿಯಾಗಲಿ; ಬಿಜೆಪಿಯನ್ನು ಮೊದಲಿನಿಂದಲೂ ಬ್ರಾಹ್ಮಣರೇ ಬೆಂಬಲಿಸುತ್ತಾ ಬಂದಿರುವುದರಿಂದ ಅವರಿಗೊಂದು ಸ್ಥಾನ ನೀಡಬೇಕು ಎಂಬುದು ಅದರ ವಾದವಾಗಿತ್ತು. ಆದರೆ ಅವರ ಮಾತಿಗೆ ಬೆಲೆ ಸಿಕ್ಕಿಲ್ಲ. ಹೀಗಾಗಿ ಆರ್‌ಎಸ್‌ಎಸ್‌ನಲ್ಲಿರುವ ಬ್ರಾಹ್ಮಣರು, ಬ್ರಾಹ್ಮಣ ಸಮಾಜ ಯಡ್ಡಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಿದೆ. ಇದು ಚುನಾವಣೆ ಮೇಲೆ ಪರಿಣಾಮ ಬೀರಬಹುದು.

ಇನ್ನೊಂದೆಡೆ ಜಿಲ್ಲಾ ಬಿಜೆಪಿ ಘಟಕವನ್ನೇ ಒಡೆದು ತಮ್ಮದೇ ಒಂದು ಬಣ ರಚಿಸಿಕೊಂಡಿರುವ ಯಡ್ಡಿ ಅದರ ಮೂಲಕ ಜಿಲ್ಲೆಯ ರಾಜಕೀಯ ನಿಯಂತ್ರಿಸುತ್ತಿದ್ದಾರೆ. ಅವರ ಬಣದ ಉಸ್ತುವಾರಿ ವಹಿಸಿಕೊಂಡಿರುವವರು ಕಾನೂನು ಸಲಹೆಗಾರ ದಿವಾಕರ್, ಸಚಿವ ಹರತಾಳು ಹಾಲಪ್ಪ ಮತ್ತು ಯಡ್ಡಿ ಮಗ ರಾಘವೇಂದ್ರ. ಇದು ಹೀಗೆ ಮುಂದುವರೆದರೆ ನಾಳೆ ನಾವು ಲೆಕ್ಕಕ್ಕಿಲ್ಲದಂತಾಗುತ್ತೇವೆ ಎಂದು ಹೆದರಿರುವ ಜಿಲ್ಲಾ ಘಟಕದ ಪದಾಧಿಕಾರಿಗಳು ಬರುವ ಚುನಾವಣೆಯಲ್ಲಿ ಯಡ್ಡಿ ಓಟಕ್ಕೆ ಬ್ರೇಕ್ ಹಾಕುವ ಸಂಚು ನಡೆಸಿದ್ದಾರೆ. ತಮ್ಮ ಮಗನಿಗೆ ಟಿಕೆಟ್ ಕೊಡಿಸುವ ನಿಟ್ಟಿನಲ್ಲಿ ಗೆದ್ದಿರುವ ಯಡ್ಡಿ ಚುನಾವಣೆಗಳಲ್ಲೂ ಗೆಲ್ಲುತ್ತಾರೋ, ಕಾದು ನೋಡಬೇಕಿದೆ.

■ ವರದಿಗಾರ

...ರಿಯೇ ನಿಂತು 'ಹಕ್ಕುಪತ್ರ' ಕೊಟ್ಟಿದ್ದಾರೆ. ...ರ ಹಳೇ ಬಸ್ ನಿಲ್ದಾಣದಲ್ಲಿದ್ದ ...ಳವರೆಲ್ಲ ಸಾಲ ಮಾಡಿ ತಂದು ...ಾರು 97 ಲಕ್ಷ ರೂಪಾಯಿಗಳಷ್ಟನ್ನು ... ಕಟ್ಟಿದ್ದಾರೆ. ಹೀಗೆ ಅಂಗಡಿಗಳಿಗೆಂದು ...ದುಡ್ಡಿನ ಬಾಬತ್ತಿನಲ್ಲೇ 55 ಲಕ್ಷ ...ುಗಳ ಸರ್ಕಾರ ಹೊಸ ಬಸ್‌ಸ್ಟ್ಯಾಂಡ್‌ನ ...ರಿಗೆ ಬಳಸಿಕೊಂಡಿದೆ.

...ಂತವೆಂದರೆ ಆರು ತಿಂಗಳಲ್ಲಿ ...ಬೇಕಿದ್ದ ಹೊಸ ಬಸ್ ... ಕಾಮಗಾರಿ ಮೂರು ...ದರೂ ಮುಗಿದಿಲ್ಲ. ...ರಿಯ ಗುಣಮಟ್ಟ ಕೂಡ ...ೀ. ಹೊಸ ಬಸ್ ನಿಲ್ದಾಣದ ...ನ್ನು ಎತ್ತಿಂದೆತ್ತ ನೋಡಿದರೂ ...ಪ್ಲಾನ್ ಪ್ರಕಾರವಾಗಲಿ, ನಾಗರಿಕ ...ಗಲಿ ಯೋಗ್ಯವಾಗಿಲ್ಲ. ...ರಿಯಲ್ಲಿ ಶಾಸಕ ಸೊಗಡು ...ದ ಹಿಡಿದು ಹಿಂದಿದ್ದ ಜಿಲ್ಲಾಧಿಕಾರಿ ...ಂಕರ್ ತನಕ ಸಿಕ್ಕಷ್ಟು ಬಾಚಿಕೊಂಡಿದ್ದೇ ...ತುಮಕೂರಿಗೊಂದು ಸುಸಜ್ಜಿತ, ಶಿಸ್ತುಬದ್ಧ ...ಬಸ್ ನಿಲ್ದಾಣ ರೂಪಿಸುವ ಬಗ್ಗೆ ... ಆಸಕ್ತಿಯಿರಲಿಲ್ಲ. ಆರು ತಿಂಗಳಲ್ಲಿ ...ಅಂಗಡಿಯಿಟ್ಟು ಬದುಕು ರೂಪಿಸಿಕೊಳ್ಳಬಹುದೆಂದು ಕನಸು ಕಂಡಿದ್ದ ನೂರಕ್ಕೂ ಹೆಚ್ಚು ಮಂದಿ ವ್ಯಾಪಾರಸ್ಥರಿಗೆಲ್ಲ ಕ್ರಮೇಣ ಒಂದು ಸತ್ಯ ಗೊತ್ತಾಗಿತ್ತು.

ಅದು ಸೊಗಡು ಶಿವಣ್ಣನ ಚಡ್ಡಿ ಬುದ್ಧಿ. ತುಮಕೂರು ನಗರ ಖಾಸಗಿ ಬಸ್ ನಿಲ್ದಾಣದ ಅಂಗಡಿಗಳ ಮಾಲೀಕರ ಸಂಘಕ್ಕೆ ಅಧ್ಯಕ್ಷನಾಗಿದ್ದ ಫಯಾಜ್ ಉಲ್ಲಾಖಾನ್ ಹೇಳಿಕೇಳಿ ಮುಸ್ಲಿಂ. ಅಂಗಡಿಯಿಟ್ಟವರ ಪೈಕಿ ಶೇ. 30 ರಷ್ಟು ಮುಸ್ಲಿಮರೇ ಇದ್ದರು.




ಪದ್ಮಾವತಮ್ಮ

ಇಂಥ ಮುಸ್ಲಿಮರನ್ನೆಲ್ಲ ಹೊರಗಟ್ಟಿ ಆ ಜಾಗಕ್ಕೆ ತನ್ನ ಚೇಲಾಗಳು, ಬಿಜೆಪಿಯ ನಗರಸಭಾ ಸದಸ್ಯರು ಮತ್ತು ತನಗೆ ಯಾರ್‍ಯಾರು ಲಂಚ ತಿನ್ನಿಸುತ್ತಾರೋ ಅಂಥವರಿಗೆಲ್ಲ ಒಂದೊಂದು ಅಂಗಡಿ ಕೊಡಿಸುವುದು ಎಮ್ಮೆಲ್ಲೇ ಶಿವಣ್ಣನ ಹುನ್ನಾರವಾಗಿತ್ತು.

ತನ್ನ ಭಟ್ಟಂಗಿಗಳಿಗೆಲ್ಲ ಅಂಗಡಿಗಳನ್ನು ಆಕ್ರಮಿಸಿಕೊಳ್ಳಲು ಅನುಕೂಲ ಕಲ್ಪಿಸಲೆಂದೇ ನಗರಾಭಿವೃದ್ಧಿ ಸಚಿವಾಲಯದ ಅನುಮೋದನೆ ಬೇಕೆಂಬ ಕುಂಟು ನೆಪವೊಡ್ಡಿದ ಬಸ್‌ಸ್ಟ್ಯಾಂಡ್ ಕಟ್ಟಡ ಇನ್ನೇನು ಮುಗಿಯುತ್ತ ಬರುತ್ತಿದೆಯೆನ್ನುವ ಹೊತ್ತಿಗೆ ಹಳೇ ಅಂಗಡಿಗಳವರಿಗೆಲ್ಲ 'ಕರಾರು ಪತ್ರ' ಮಾಡಿಕೊಡಬೇಕಿತ್ತು. ಕೇಳಿದರೆ ಪೌರಾಡಳಿತ ಮತ್ತು ನಗರಾಭಿವೃದ್ಧಿ ಸಚಿವಾಲಯಕ್ಕೆಂದು ಕಳಿಸಿದ ಫೈಲು ಬಂದೇ ಇಲ್ಲವೆನ್ನುತ್ತಾರೆ ಅಧಿಕಾರಿಗಳು. ಯಕಶ್ಚಿತ್ ಫೈಲೊಂದರ ವಿಲೇವಾರಿಗೆ ಇಪ್ಪತ್ತೊಂದು ತಿಂಗಳು ಬೇಕೆ?

ತನ್ನ ಭೇಟಿ ಮಾಡಿದ ಅಂಗಡಿ ಮಾಲೀಕರಿಗೆಲ್ಲ ಡಿಸಿ ಸೋಮಶೇಖರ್ ಹೇಳಿದ್ದೇನೆಂದರೆ, ಮುಸ್ಲಿಂ ಮಾಲೀಕರನ್ನು ಬಿಟ್ಟು ಬಂದರೆ ನಾಳೆಯೇ ಈ ಸಮಸ್ಯೆ ಬಗೆಹರಿಯುತ್ತೆ ಗೊತ್ತಾ?



ಗಂಗಮ್ಮ

ಸೊಗಡು ಶಿವಣ್ಣ ಹೇಳಿದ್ದು 'ಅಲ್ರೀ ತುರ್ಕರಿಗೆಲ್ಲ ಸರ್ಕಾರಿ ಅಂಗಡಿ ಕೊಡೋಕಾಗುತ್ತೆ ಏನ್ರೀ? ಅವರಿಗೆ ಅಂಗಡಿ ಕೊಡೋ ಬದಲು ಯಾರಿಗೂ ಕೊಡೋದೇ ಬೇಡ.' ಒಮ್ಮೆ ಅಂಗಡಿ ಮಾಲೀಕರ ಮಧ್ಯೆ ಹಿಂದೂ-ಮುಸ್ಲಿಂ ಬಿರುಕು ಹುಟ್ಟಿತೆಂದರೆ ಕ್ರಮೇಣ ಮುಸ್ಲಿಮರ ಪಾಲಿನ ಅಂಗಡಿಗಳನ್ನೆಲ್ಲ ತನ್ನ ಛೇಲಾಗಳ ಬಾಯಿಗೆ ಹಾಕುವುದು ಸಲೀಸು ಎಂಬುದು ಸೊಗಡು ಶಿವಣ್ಣನ ಹುನ್ನಾರ. ಹಾಗಂತ ಅಂಗಡಿ ಮಾಲೀಕರ್‍ಯಾರೂ ಕೇಸರಿ ಹುನ್ನಾರಕ್ಕೆ ಬಲಿಯಾಗಿಲ್ಲ. ಫಯಾಜುಲ್ಲಾ ಖಾನ್ ಮತ್ತು ಪಂಡಿತ್ ಜವಾಹರ್ ನೇತೃತ್ವದಲ್ಲಿ ಇವತ್ತಿಗೂ ಹೋರಾಡುತ್ತಲೇ ಇದ್ದಾರೆ.

ಮತ್ತೊಂದೆಡೆ ಕಳೆದ ಮೂರು ವರ್ಷಗಳಿಂದ ಹೊಟ್ಟೆ ಪಾಡೇ ಇಲ್ಲದೆ, ಅಂಗಡಿಗಳ ಗುಡ್‌ವಿಲ್‌ಗೆಂದು ಕೊಟ್ಟ ದುಡ್ಡಿಗೆ ಬಡ್ಡಿಯನ್ನೂ ಕಟ್ಟಲಾಗದೇ ಅಂತರಪಿಶಾಚಿಗಳಂತಾಗಿರುವ ವ್ಯಾಪಾರಸ್ಥರ ಹತಾಶೆ ಯಾವ ಮಟ್ಟಕ್ಕಿದೆಯೆಂದರೆ, ಕೊರಕೊರಗಿಯೇ ಮೂವರು ವ್ಯಾಪಾರಸ್ಥರು ಕೊನೆಯುಸಿರೆಳೆದಿದ್ದಾರೆ. ಈ ಪೈಕಿ ಮೊದಲು ಆತ್ಮಹತ್ಯೆ ಮಾಡಿಕೊಂಡವನು ಇದೇ ಬಸ್‌ಸ್ಟ್ಯಾಂಡ್ ಆವರಣದಲ್ಲಿ ಟೀ ಅಂಗಡಿಯಿಟ್ಟುಕೊಂಡಿದ್ದ ರಹೀಮ್. ಯಾವತ್ತು ಆರು ತಿಂಗಳಲ್ಲಿ ಬಸ್‌ಸ್ಟ್ಯಾಂಡ್ ಪೂರ್ತಿಗೊಳ್ಳಲಿಲ್ಲವೋ ನೇರವಾಗಿ ತನ್ನ ಹುಟ್ಟೂರು ಕೇರಳಕ್ಕೆ ಹೋಗಿ ಆತ್ಮಹತ್ಯೆ ಮಾಡಿಕೊಂಡ ರಹೀಮ್ ಬಗ್ಗೆಯಾಗಲಿ, ಆತನ ಮನೆಯವರ ಬಗ್ಗೆಯಾಗಲಿ ಯಾರೂ ತಲೆ ಕೆಡಿಸಿಕೊಳ್ಳಲಿಲ್ಲ.

ಇದಾದನಂತರ ಎರಡನೇ ಬಲಿ ನಡೆದದ್ದು ಇಲ್ಲಿಗೆ ಮೂರು ತಿಂಗಳ ಹಿಂದೆ. ಹಳೇ ಬಸ್‌ಸ್ಟ್ಯಾಂಡ್ ಆವರಣದಲ್ಲಿ ಕಾಂಡಿಮೆಂಡ್ಸ್ ಇಟ್ಟುಕೊಂಡಿದ್ದ ಮಲ್ಲಿಕಾರ್ಜುನ ಎಂಬಾತನ ತಾಯಿ ಪದ್ಮಾವತಮ್ಮ ಕೊರಗಿಗೆ ಬಿದ್ದೇ ಇಲ್ಲಿಗೆ ಮೂರು ತಿಂಗಳ ಹಿಂದೆ ಸತ್ತುಹೋದಳು. ಇದಾಗಿ ಎರಡು ತಿಂಗಳಿಗೆ, ಅಂದರೆ ಇಲ್ಲಿಗೆ ತಿಂಗಳ ಹಿಂದೆ ಲಾಟರಿ ಅಂಗಡಿಯಿಟ್ಟುಕೊಂಡಿದ್ದ ಪ್ರಕಾಶನ ತಾಯಿ ಗಂಗಮ್ಮ ಮತ್ತು ಬಳೇ ಅಂಗಡಿ ನಡೆಸುತ್ತಿದ್ದ ಮೊಯಿದ್ದೀನ್‌ನ ಪತ್ನಿ ಅಬೀದಾ ಖಾನಮ್ ಕೂಡ ಕೊರಗಿಗೆ ಬಿದ್ದು ಕೊನೆಯುಸಿರೆಳೆದದ್ದು ಬಸ್‌ಸ್ಟ್ಯಾಂಡ್ ಬಲಿಪಶುಗಳ ದುರಂತಕ್ಕೆ ಹಿಡಿದ ಕನ್ನಡಿಯಷ್ಟೆ.



ಅಬೀದಾ

ಒಬ್ಬ ಶಾಸಕನಾಗಿ ತನ್ನೂರಿಗೊಂದು ಬಸ್‌ಸ್ಟ್ಯಾಂಡ್ ಬೇಕೆಂಬುದು ಶಿವಣ್ಣನಿಗೆ ಮುಖ್ಯವಾಗಬೇಕಿತ್ತೇ ಹೊರತು ಮುಸ್ಲಿಮರ ಮೇಲಿನ ದ್ವೇಷವಲ್ಲ. ಮುಸ್ಲಿಂ ದ್ವೇಷಕ್ಕೆ ಬಿದ್ದು ಮಾಡಿದ ಯಡವಟ್ಟಿಗೆ ಮುಸ್ಲಿಮರಷ್ಟೇ ಸರಿಸಮಾನವಾಗಿ ಹಿಂದೂಗಳೂ ಬಲಿಯಾದರಲ್ಲ ಇದಕ್ಕೆ ಎಮ್ಮೆಲ್ಲೇ ಶಿವಣ್ಣ ಯಾವ ಪರಿಹಾರ ಮಾಡಬಲ್ಲ?

ಲಂಚ ತಿನ್ನುವ ಶಾಸಕರಿಲ್ಲವೆಂದಲ್ಲ, ಲೂಟಿ ಮಾಡಿಲ್ಲ ಅಂತಲೂ ಇಲ್ಲ, ಆದರೆ ಯಾರೂ ಸೊಗಡು ಶಿವಣ್ಣನಂತೆ ನಾಲ್ಕು ಬಡಜೀವಗಳನ್ನು ಬಲಿತೆಗೆದುಕೊಂಡಿಲ್ಲ.




■ ರಾ. ಸೋಮನಾಥ್


3 ◀◀◀


ಪ್ರಸಾದ್


ನಾಗಪ್ರಸಾದ್: ನಮ್ಮ ಪ್ರಸಾದ್ ಅವರನ್ನು 'Man for all seasons' ಎಂದು ಕರೆಯಬಹುದು. ಇತ್ತ ತುರ್ತು ಬಿದ್ದಾಗ ಕಂಪ್ಯೂಟರ್ ಮುಂದೆ ಕೂತು ಕಂಪೋಸ್ ಮಾಡಬಲ್ಲ ಪ್ರಸಾದ್, ಅತ್ತ ದೂರದೂರುಗಳಿಗೆ ಹೋಗಿ ನಮ್ಮ ಪ್ರಕಾಶನದ ಪುಸ್ತಕ ಮಳಿಗೆಯನ್ನು ನಿಭಾಯಿಸಬಲ್ಲ ಯುವಕ. ಮಿತಭಾಷಿಯಾದ ಪ್ರಸಾದ್ ನಮ್ಮ ಆಫೀಸಿನ ದಿನನಿತ್ಯದ ಜವಾಬ್ದಾರಿಯನ್ನು ಹೊತ್ತಿದ್ದು ಅದನ್ನು ಪ್ರಾಮಾಣಿಕವಾಗಿ ಮತ್ತು ಅತ್ಯಂತ ಕಾಳಜಿಯಿಂದ ನಿರ್ವಹಿಸುತ್ತಾರೆ. ಎಷ್ಟರಮಟ್ಟಿಗೆ ಎಂದರೆ ಅವರು ರಜೆ ತೆಗೆದುಕೊಂಡ ದಿನ ನಮ್ಮೆಲ್ಲರ ಕೈಕಾಲುಗಳೇ ಕಟ್ಟಿ ಹಾಕಿದಂತಾಗಿ ಯಾವ ಕೆಲಸವೂ ನಡೆಯುತ್ತಿಲ್ಲ ಎಂದು ಭಾಸ ವಾಗುತ್ತದೆ.


ಕುಮಾರ್

ಕುಮಾರ್ ಬುರಡಿಕಟ್ಟಿ: ನಮ್ಮ ಕುಮಾರ್ 'ಸಕಲ ಕಲಾವಲ್ಲಭ'. ಜನಪರ ಮತ್ತು ಮಾನವಹಕ್ಕುಗಳ ಹೋರಾಟದ ಹಿನ್ನೆಲೆಯನ್ನು ಕುಮಾರ್ ಹೊಂದಿದ್ದರೂ 'ಲಂಕೇಶ್'ಗೆ ಅಗತ್ಯವಾದ 'ಚುರುಕು' ಶೈಲಿಯಲ್ಲೂ ಹಾಗೆಯೇ 'ಗ್ರೈಡ್'ಗೆ ಸೂಕ್ತವಾದ ಸರಳ ಶೈಲಿ ಯಲ್ಲೂ ಬರೆಯಬಲ್ಲರು. ಯಾವುದೇ ವಿಷಯ ಕೊಟ್ಟರೂ ಅದರ ಎಲ್ಲ ಮಗ್ಗಲುಗಳನ್ನು ಜಾಲಾಡಿ, ಅದನ್ನು ಚೆನ್ನಾಗಿ present ಮಾಡಬಲ್ಲರು ಕುಮಾರ್.


ಪಾರ್ವತೀಶ್

ಕುಮಾರ್ ಅವರ ಇನ್ನೊಂದು ಶಕ್ತಿ ಎಂದರೆ ಅವರ ತಾಂತ್ರಿಕ ಜ್ಞಾನ. ಸ್ವಂತ ಆಸಕ್ತಿಯಿಂದಾಗಿ ತಾವೇ ಕಂಪ್ಯೂಟರ್‌ಗಳ ಬಗ್ಗೆ ಕಲಿತುಕೊಂಡಿರುವ ಕುಮಾರ್ ಅದರಲ್ಲಿ ಈಗ ಎಂತಹ expert ಆಗಿದ್ದಾರೆಂದರೆ ಅಂತರ್ಜಾಲದ ಬಗ್ಗೆ ಅವರು ಪ್ರತೀವಾರ ವಾರ್ತಾ ಭಾರತಿಗೆ ಬರೆಯುವ ಅಂಕಣ ತುಂಬಾ ಜನಪ್ರಿಯವಾಗಿದೆ. ನನ್ನ ತಂಗಿ ಹೊಸ ಮೊಬೈಲ್ ಕೊಂಡುಕೊಳ್ಳುವುದರಿಂದ ಹಿಡಿದು ನಮ್ಮ ಆಫೀಸಿಗೆ ಎಂತಹ ಕಂಪ್ಯೂಟರ್ ಅಗತ್ಯವಿದೆ ಎಂದು ನಿರ್ಧರಿಸುವುದೇ ಕುಮಾರ್.




ಹಸನ್ಮುಖಿ ಕುಮಾರ್ ಎಂತಹ ಆರೋಗ್ಯವಂತ ಯುವಕ ಎಂದರೆ, ಆತನನ್ನು ನೋಡಿದರೇ ಸಂತೋಷವಾಗುತ್ತದೆ. ಈತ ನಮ್ಮ ತಂಡದ ಅತಿಮುಖ್ಯ ಸದಸ್ಯ.

ಸದಾಶಿವ ಶೆಣೈ: ಅದೆಷ್ಟೋ ಜನ ತಾವು ಲಂಕೇಶ್‌ರಿಂದ ಕಲಿತಿದ್ದೇವೆ, ಅವರ ಶಿಷ್ಯ ನಾನು ಎಂದು ಹೇಳಿಕೊಳ್ಳುತ್ತಾರೆ. ಆದರೆ ಅಪ್ಪನ ನಿಜವಾದ ಶಿಷ್ಯ ಈ ನಮ್ಮ ಶೆಣೈ. ಆದರೆ ಅಪ್ಪನ ಜಗಳಗಂಟತನ ಶೆಣೈಯಲ್ಲಿಲ್ಲ; ಬದಲಾಗಿ ಅಪ್ಪನ ಉದಾರ ಮನೋಭಾವ ಅವರದ್ದು. ಯಾರನ್ನೂ ನೋಯಿಸದ, ಯಾರಿಗೂ ಅಡಚಣೆ ಉಂಟುಮಾಡದ, ತಮಗೆ ನೀಡಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ಮಾಡಿಕೊಂಡು ಹೋಗುವ ಶೈಲಿ ಶೆಣೈರದ್ದು.


ಸೋಮನಾಥ್

ರಾ. ಸೋಮನಾಥ್: ನಮ್ಮ ತಂಡದ ಅದೃಶ್ಯ ಸದಸ್ಯ ಸೋಮನಾಥ್! ಯಾವತ್ತೋ ಒಮ್ಮೆ ಆಫೀಸಿಗೆ ಹಾಜರಾಗುವ ಸೋಮನಾಥ್‌ನೊಂದಿಗಿನ ನಮ್ಮೆಲ್ಲರ ಸಂಪರ್ಕ ಕೇವಲ ಮೊಬೈಲ್ ಮತ್ತು ಫ್ಯಾಕ್ಸ್ ಮೂಲಕ.

ಯಾವುದೇ ವಿಷಯ ಸಿಕ್ಕರೂ ಓರ್ವ ದಕ್ಷ ಪೊಲೀಸ್ ಅಧಿಕಾರಿಯಂತೆ ಅದರ ಬೆನ್ನ ಹತ್ತುವ ಸೋಮನಾಥ್ ಅವರ ತನಿಖಾ ವರದಿಗಳು ಜನಪ್ರಿಯ. ಒಂದಿಷ್ಟು ಹಾಸ್ಯ ಸ್ವಲ್ಪ ವ್ಯಂಗ್ಯ ಬಹಳಷ್ಟು ಮಾಹಿತಿ, ಎಲ್ಲವನ್ನೂ ಹದವಾಗಿ ಬೆರೆಸುವ ಸೋಮನಾಥರ ಬರಹ ಶೈಲಿಗೆ ಬಹಳಷ್ಟು ಅಭಿಮಾನಿಗಳಿದ್ದಾರೆ.


ಮಂಜುನಾಥ್

ಆದರೆ ಬೀದಿನಾಯಿಗಳ ಬಗೆಗಿನ ಅವರ ಕಾಳಜಿ ನಮಗೆ ಹಲವಾರು ಬಾರಿ ತೊಂದರೆ ಉಂಟುಮಾಡಿದೆ. ನಾವಿಲ್ಲಿ ಅವರ ಲೇಖನಕ್ಕಾಗಿ ಕಾಯುತ್ತಿದ್ದರೆ, ಅವರು ಬೆಂಗಳೂರಿನ ಅದ್ಯಾವುದೋ ಮೂಲೆಯಲ್ಲಿ ಯಾವುದೋ ಬೀದಿನಾಯಿಯ ಶುಶ್ರೂಷೆಯಲ್ಲಿ ತಲ್ಲೀನರಾಗಿರುತ್ತಾರೆ. ಪ್ರತಿ ವಾರ "ಇನ್ನು ಮುಂದೆ ಹೀಗಾಗುವುದಿಲ್ಲ, ಮುಂದಿನ ವಾರದಿಂದ ಒಂದು ದಿನ ಮುನ್ನವೇ ವರದಿ ಕೊಟ್ಟುಬಿಡುತ್ತೇನೆ" ಎಂದು ತಪ್ಪದೇ ಎಸ್‌ಎಂಎಸ್ ಮಾಡು ತ್ತಾರೆ. ಹಾಗೆಯೇ ಪ್ರತಿವಾರ ತಮ್ಮ ವರದಿ ಯನ್ನು ಕೊಡುವುದರಲ್ಲಿ ತಡಮಾಡಿ ನಮ್ಮೆಲ್ಲರನ್ನು ತಪ್ಪದೇ ಸತಾಯಿಸುತ್ತಾರೆ.


ರಫೀಕ್

ಆದರೂ ಸೋಮನಾಥ್ ನಮ್ಮ ತಂಡದ ಬಹುಮುಖ್ಯ ಸದಸ್ಯರಾಗಿರುವುದಕ್ಕೆ ಕಾರಣ, ಅವರ ಬರಹಗಳಲ್ಲಿರುವ ತೀಕ್ಷ್ಣತೆ ಮತ್ತು ಜನಪರವಾದ ಅವರ ಕಾಳಜಿ.

ಪಾರ್ವತೀಶ್: ನಮ್ಮ ತಂಡದ ಕನಸುಗಾರ ಮತ್ತು ಅಪಾರ ಶ್ರಮಜೀವಿ ಈ ಪಾರ್ವತೀಶ್. ನಾಲ್ಕು ವರ್ಷಗಳ ಹಿಂದೆ ನಾನೊಬ್ಬಳೇ ಆಫೀಸಿನಲ್ಲಿ ಕೂತು ಮುಂದೇನು ಮಾಡುವುದೆಂದು ಚಿಂತಿಸುತ್ತಿದ್ದಾಗ ನನ್ನ ಮುಂದೆ ಪ್ರತ್ಯಕ್ಷವಾಗಿ, ನನ್ನ ಕೈಗೆ ಹತ್ತು ಸಾವಿರ ರೂಪಾಯಿಗಳನ್ನಿಟ್ಟು "ಹೊಸ ಪತ್ರಿಕೆ ಮಾಡೋಣ" ಎಂದು ಹೇಳುವ ಮೂಲಕ ಈ ಪತ್ರಿಕೆಯ ಬೀಜ ನೆಟ್ಟವರೇ ಪಾರ್ವತೀಶ್.

ಅಷ್ಟೇ ಅಲ್ಲ, ಅದಾದ ಕೆಲ ತಿಂಗಳಲ್ಲೇ ಒಂದೇ ವಾರಪತ್ರಿಕೆ ಇದ್ದರೆ ಮಾರುಕಟ್ಟೆಯಲ್ಲಿ ಪತ್ರಿಕೆ ಉಳಿಯುವುದು ಕಷ್ಟ ಎಂದು ಗೊತ್ತಾದಾಗ 'ಗ್ರೈಡ್' ಪತ್ರಿಕೆಯ ಬೀಜ ಬಿತ್ತಿದ್ದೂ ಮತ್ತು ಅದರ ಜವಾಬ್ದಾರಿಯನ್ನು ವಹಿಸಿಕೊಂಡು ದಕ್ಷವಾಗಿ ತಂದು ಸಂಸ್ಥೆಯನ್ನು ಆರ್ಥಿಕವಾಗಿ ಭದ್ರ ಮಾಡಿದ್ದೂ ನಮ್ಮ ಪಾರ್ವತೀಶ್. ಇವತ್ತು ನಮ್ಮ ಸಂಸ್ಥೆಗೆ ಆರ್ಥಿಕ ನೆಮ್ಮದಿ ನೀಡುತ್ತಿರುವ ಗ್ರೈಡ್ ಪ್ರಕಾಶನದ ಉಸ್ತುವಾರಿ ಹೊತ್ತಿರುವವರೂ ಮತ್ತದೇ ಪಾರ್ವತೀಶ್.

ಹೊಸ ಹೊಸದನ್ನು ಮಾಡುತ್ತಿರಬೇಕು, ನಮ್ಮ ಆರ್ಥಿಕ ಮತ್ತು ಮಾನವಸಂಪನ್ಮೂಲಗಳನ್ನು ಆದಷ್ಟು ಬಳಸಿ ನಮ್ಮದು ಒಂದು ದೊಡ್ಡ ಸಂಸ್ಥೆಯಾಗಬೇಕೆಂದು ಸದಾ ಆಶಿಸುವ, ಅದನ್ನು ಸಾಧ್ಯವಾಗಿಸುವುದು ಹೇಗೆ ಎಂದು ಹೊಸ ಯೋಜನೆಗಳ ಬಗ್ಗೆ ಸದಾ ಕನಸು ಕಾಣುವ ಪಾರ್ವತೀಶ್ ಇಲ್ಲದಿದ್ದರೆ ಈ ಪತ್ರಿಕೆ ಇವತ್ತು ಅಸ್ತಿತ್ವದಲ್ಲೇ ಇರುತ್ತಿರಲಿಲ್ಲ ಎಂದರೆ ಅದು ಖಂಡಿತವಾಗಿಯೂ ಅತಿಶಯೋಕ್ತಿಯಲ್ಲ.

ಮೂಡ್ ಬಂದಾಗ ಯಾರನ್ನು ಬೇಕಾದರೂ ತಮ್ಮ ಚೇಷ್ಟೆ ಬುದ್ಧಿಗೆ ಗುರಿಪಡಿಸಿ ತಮಾಷೆ ಮಾಡುವ, 500 ಪುಟಗಳ ಪುಸ್ತಕವನ್ನು ಅಪಾರ ಶ್ರಮ ವಹಿಸಿ ಕೆಲದಿನಗಳಲ್ಲೇ ಸಿದ್ಧಪಡಿಸುವ, ಇತ್ತ ಲಂಕೇಶ್‌ಗೆ ಬರೆಯುತ್ತಲೇ ಗ್ರೈಡ್ ಬಗ್ಗೆಯೂ ಚಿಂತಿಸುವ ಪಾರ್ವತೀಶ್ ಎಂಬ ಕನಸುಗಾರನಿಗೆ ಇದೊಂದು ಪತ್ರಿಕೆ ಮಾತ್ರವಲ್ಲ, ಇದು ಒಂದು ಹೋರಾಟವೂ ಹೌದು, ಕರ್ತವ್ಯವೂ ಹೌದು, ಬದುಕೂ ಹೌದು. ಅಷ್ಟೇ ಅಲ್ಲ, ಇದು ನಮ್ಮ ಇಡೀ ತಂಡಕ್ಕೆ ನೆಮ್ಮದಿಯ ಭವಿಷ್ಯವನ್ನೂ ನೀಡುವಂತಾಗಬೇಕೆಂಬ ಕಾಳಜಿ ಪಾರ್ವತೀಶ್ ಅವರದ್ದು.

ಇವರಷ್ಟೇ ಅಲ್ಲದೆ, ನಮ್ಮ ಕಲಾವಿದ ಮಂಜುನಾಥ್ ನಿಲಸೋಗೆ, ಚಂದ್ರಶೇಖರ ತೋರಣಘಟ್ಟ, ಕಿರುಗುಂದ ರಫೀಕ್, ಮೇಘರಾಜ್, ವಿನಯ್ ಹುರಳಿಕೊಪ್ಪಿ, ಜಗಾಪುರ್, ವಿಶ್ವರಾಧ್ಯ ಸತ್ಯಂಪೇಟೆ, ಕೊಳ್ಳೇಗಾಲದ ಚಿಕ್ಕಮಾಳಿಗೆ, ಕಿರುಗುಂದ ಅಜೀಜ್ ಸೇರಿದಂತೆ ಇನ್ನೂ ಹಲವರು ನಮ್ಮ ತಂಡದಲ್ಲಿ ಕ್ರಿಯಾಶೀಲವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.



ಇದು ನಮ್ಮ ತಂಡ. ಕಷ್ಟನಷ್ಟ, ನೋವು, ನಲಿವುಗಳ ನಡುವೆಯೂ ಒಂದಾಗಿ ಕೆಲಸ ಮಾಡುತ್ತಾ, ಹಲವೊಮ್ಮೆ ಜಗಳವಾಡುತ್ತಾ, ಬಹಳಷ್ಟು ಕಾಲ ನಕ್ಕು ನಲಿದಾಡುತ್ತಾ, ಅದೆಂತಹದ್ದೇ ಡೆಡ್‌ಲೈನ್ ಇದ್ದರೂ ಹಲ್ಲು ಕಚ್ಚಿ ದುಡಿಯುತ್ತಾ, ಅಪರೂಪಕ್ಕೆ ಕೆಲಸ ಇಲ್ಲದಿದ್ದಾಗ ಹೊಸ ಕೆಲಸ ಹುಡುಕುತ್ತಾ, ಜೊತೆಗೆ ಅಲ್ಲಿ ಇಲ್ಲಿ ಸುತ್ತಾಟ ಮಾಡುತ್ತಾ ಈ ನಾಲ್ಕು ವರ್ಷಗಳಲ್ಲಿ ಒಂದು ಪತ್ರಿಕೆ ಮಾತ್ರವಲ್ಲ ಒಂದು ಸಂಸ್ಥೆಯನ್ನೇ ನಿರ್ಮಿಸಿರುವ ತಂಡ ನಮ್ಮದು.

ಚಿಕ್ಕದಾದ ಆದರೆ ಚೊಕ್ಕದಾದ ಈ ತಂಡದ ಪ್ರತಿಯೊಂದು ಕೊಂಡಿಯೂ ಅತಿಮುಖ್ಯ. ಈ ತಂಡವೇ ಪ್ರತಿವಾರ ಮತ್ತು ಪ್ರತಿ ತಿಂಗಳು ನಿಮ್ಮ ಕೈಗಳಿಗೆ ಪತ್ರಿಕೆಗಳನ್ನು ಪುಸ್ತಕಗಳನ್ನು ಇಡುತ್ತಿರುವುದು. ಜನಪರ ಹೋರಾಟಗಳೊಂದಿಗೆ ಗುರುತಿಸಿಕೊಂಡು ಹೊಸ ಕರ್ನಾಟಕದ, ನೆಮ್ಮದಿ ರಾಜ್ಯದ ಕನಸುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳು ತ್ತಿರುವುದು. ಈ ತಂಡದ ಆಶಯಗಳೊಂದಿಗೆ ನಿಂತಿರುವವರು ನಮ್ಮ ಶಿವಸುಂದರ್.

ಇವರೆಲ್ಲ ಇರದಿದ್ದರೆ ಈ ಪಯಣ ಸಾಧ್ಯವಾಗುತ್ತಿರಲಿಲ್ಲ.

ಇವರೆಲ್ಲರಿಗೂ ನನ್ನ ಪ್ರೀತಿಯ ಧನ್ಯವಾದಗಳು.

-ಗೌರಿ ಲಂಕೇಶ್



ಬಿಜೆಪಿ ಟಿಕೆಟ್: ಗೋರಿ ತೋಡಿಕೊಳ್ಳುತ್ತಿರುವ ನಾ|ಯ|ಕ|ರು

ರಾಜ್ಯದ 20 ಲೋಕಸಭಾ ಕ್ಷೇತ್ರದಲ್ಲಿ ಗೆಲ್ಲುವ ಕನಸು ಕಾಣುತ್ತಿರುವ ಬಿಜೆಪಿಯಲ್ಲಿ ಟಿಕೆಟ್‌ಗಾಗಿ ತೀವ್ರ ಪೈಪೋಟಿ ನಡೆಯುತ್ತಿದೆ. ಕಾಂಗ್ರೆಸ್‌ಗಿಂತ ಹೆಚ್ಚು ಸ್ವಜನಪಕ್ಷಪಾತ, ವಂಶಪಾರಂಪರ್ಯ ರಾಜಕಾರಣ ಬಿಜೆಪಿಯಲ್ಲಿ ಮಹತ್ವ ಪಡೆಯುತ್ತಿದ್ದು, ಪಕ್ಷದ ಕಾರ್ಯಕರ್ತರಿಗೆ ವಾಕರಿಕೆ ಬರಿಸಿದೆ. 'ಗೆಲ್ಲುವ ಕುದುರೆ' ಎಂದು ಸಿಕ್ಕಸಿಕ್ಕವರನ್ನೆಲ್ಲಾ ಕರೆತಂದು, ಪಕ್ಷ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುತ್ತಿದೆ ಎಂದು ಅವರು ಆರೋಪಿಸುತ್ತಿದ್ದಾರೆ.

ಈಗಾಗಲೇ ಒಂಬತ್ತು ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಿರುವ ಬಿಜೆಪಿಗೆ ಉಳಿದ ಕ್ಷೇತ್ರಗಳಲ್ಲಿ ಅರ್ಹ ಅಭ್ಯರ್ಥಿಗಳಿಗೇ ಪರದಾಡುವ ಸ್ಥಿತಿ ಎದುರಾಗಿದೆ. ಆದ್ದರಿಂದ ಬೇರೆ ಪಕ್ಷದಲ್ಲಿನ ಮುಖಮಾಸಿದವರನ್ನು, ಅಧಿಕಾರವಿಲ್ಲದಿದ್ದರೆ ಜೈಲಿಗೆ ಹೋಗುತ್ತೇವೆ ಎಂಬ ಭೀತಿಯಲ್ಲಿರುವವರನ್ನು ಪಕ್ಷ ಹಿಡಿಹಿಡಿದು ತಂದು ಟಿಕೇಟ್ ನೀಡುತ್ತಿದೆ.

ಸಚಿವ ಸ್ಥಾನ ಕಳೆದುಕೊಂಡ ನಂತರ ತನ್ನ ಮಕ್ಕಳ ಅನಾಚಾರಗಳಿಂದಲೇ ಸುದ್ದಿಯಲ್ಲಿರುತ್ತಿದ್ದ ಮಾಜಿ ಕಾಂಗ್ರೆಸ್ಸಿಗ ಗುರುಪಾದಪ್ಪ ನಾಗಮಾರಪಲ್ಲಿಯನ್ನು ಬಿಜೆಪಿ ಬೀದರ್‌ನಿಂದ ಕಣಕ್ಕಿಳಿಸಲಿದೆ. ಚಿತ್ರದುರ್ಗಕ್ಕೆ ಫಾರಿನ್ ರಿಟರ್ನ್ ಸಮಾಜ ಸೇವಕ ಜನಾರ್ಧನ ಸ್ವಾಮಿ ವಕ್ಕರಿಸಿದ್ದಾರೆ. ಹೇಗಿದ್ದರೂ ಈಗ ಐಟಿ ಕಂಪನಿಗಳು ಗೋತಾ ಹೊಡೆಯುತ್ತಿರುವುದರಿಂದ ಭಾರತದಲ್ಲಿ ರಾಜಕಾರಣಿಯಾಗಿ 'ಸಮಾಜ ಸೇವೆ' ಮಾಡುವುದೇ ಲಾಭದಾಯಕ ಎಂದು ಸ್ವಾಮಿಗೆ ಅನ್ನಿಸಿರಬೇಕು. ಈ ಮಹಾತ್ಮನ ಕೈಯಲ್ಲಿ ಕಮಲವನ್ನು ನೋಡಿದ ಚಿತ್ರದುರ್ಗದ ಬಿಜೆಪಿ ಮಂದಿ ಭದ್ರಾಮೇಲ್ದಂಡೆಯ ನೀರು ಬಂದರೆ ಅದಕ್ಕೆ ಹಾರಿ ಪ್ರಾಣ ಬಿಡೋಣ ಎಂದು ಕಾದು ಕುಳಿತಿದ್ದಾರೆಂಬ ಸುದ್ದಿ ಇದೆ.

ಕಳೆದ ಬಾರಿ ಮಂಗಳೂರು ಕ್ಷೇತ್ರದಿಂದ ಗೆದ್ದಿದ್ದ ಹಲ್ಲುಮುಖಿ ಸದಾನಂದ ಗೌಡರು ಈಗ ಉರಿಮಜಲು ರಾಮಭಟ್ಟರಿಗೆ ಹೆದರಿ ಉಡುಪಿಗೆ ಪರಾರಿಯಾಗಿರುವುದರಿಂದ ಮಾಜಿ ಸಂಸದ ಧನಂಜಯ್ ಕುಮಾರ್‌ಗೆ ಟಿಕೆಟ್ ಖಚಿತ ಎಂದು ಹೇಳಲಾಗುತ್ತಿತ್ತು. ಆದರೆ ಈಗ ಈ ಕ್ಷೇತ್ರದಿಂದ ರಾಮಭಟ್ಟರ ಶಿಷ್ಯ ನಳಿನ್‌ಕುಮಾರ್ ಕಟೀಲ್ ಎಂಬ ಹೊಸ ಚಿಡ್ಡಿಯನ್ನು ಕಣಕ್ಕಿಳಿಸಿದ್ದಾರೆ. ಅಷ್ಟೇ ಅಲ್ಲ, ಈ ಕ್ಷೇತ್ರದ ಟಿಕೆಟ್‌ಗಾಗಿ ಬಾಯಿ ಬಿಟ್ಟುಕೊಂಡು ಕೂತಿದ್ದ ಧನಂಜಯನಿಗೆ ಮತ್ತೆ 'ಆಸೆಯೇ ದುಃಖಕ್ಕೆ ಮೂಲ' ಎಂಬ ಹಿತವಚನ ಹೇಳಿ ಸಮಾಧಾನಪಡಿಸುವ ಕೆಲಸ ನಡೆಯುತ್ತಿದೆ.

ಗಣಿ ದೊರೆಗಳ ಬಳ್ಳಾರಿಯಲ್ಲಿ ಯಾರನ್ನು ಅಭ್ಯರ್ಥಿ ಮಾಡಬಹುದು ಎಂಬ ಚಿಂತೆ ನಡೆಯುತ್ತಿದೆ. ಒಂದು ಮೂಲದ ಪ್ರಕಾರ, ಕಾಂಗ್ರೆಸ್‌ನ ಹನುಮಂತಯ್ಯ ಆದಿಯಾಗಿ ಅನೇಕರನ್ನು ಮಾತನಾಡಿಸಿದ ಗಣಿಧಣಿಗಳ 'ಆಪರೇಷನ್ ಕಮಲ' ವರ್ಕ್‌ಔಟ್ ಆಗಲಿಲ್ಲವಾದ್ದರಿಂದ ಈಗ ಸಚಿವ ಶ್ರೀರಾಮುಲು ಅವರ ಸಹೋದರಿಯನ್ನೇ ಕಣಕ್ಕಿಳಿಸುವ ತೀರ್ಮಾನಕ್ಕೆ ರೆಡ್ಡಿ ಬ್ರದರ್ಸ್ ಬಂದಿದ್ದಾರಂತೆ.

ಇನ್ನು ಹಾವೇರಿಯಿಂದ ಸಚಿವ ಉದಾಸಿ ಪುತ್ರ ಶಿವಕುಮಾರ ಉದಾಸಿ ಕಣಕ್ಕಿಳಿಯಲಿದ್ದಾರೆ. ಮಗನಿಗೆ ಲೋಕಸಭಾ ಟಿಕೆಟ್ ನೀಡಿದ್ದರಿಂದ ಸಚಿವ ಖಾತೆ ಬಿಟ್ಟುಕೊಡಿ, ವಿಧಾನಸಭಾಧ್ಯಕ್ಷ ಸ್ಥಾನ ವಹಿಸಿಕೊಳ್ಳಿ ಎಂದು ಪಕ್ಷ ಉದಾಸಿಗೆ ಸೂಚನೆ ನೀಡಿದೆಯಂತೆ. ಇದಕ್ಕೇನಾದರೂ ಉದಾಸಿ ಒಪ್ಪಿಕೊಂಡಲ್ಲಿ, ಸಭಾಧ್ಯಕ್ಷರಾಗಿರುವ ಜಗದೀಶ್ ಶೆಟ್ಟರ್ ಅವರನ್ನು ಸಚಿವರನ್ನಾಗಿ ಮಾಡಿ, ಚುನಾವಣೆಯ ಸಂದರ್ಭದಲ್ಲಿ ಪ್ರಚಾರಕ್ಕೆ ಬಳಸಿಕೊಳ್ಳಬಹುದು ಎಂಬುದು ಪಕ್ಷದ ಕೆಲ ನಾಯಕರ ಪ್ಲಾನ್. ಆದರೆ ಇದನ್ನು ಒಪ್ಪದ ಉದಾಸಿ ಪಕ್ಷದ ನಾಯಕರಿಗೆ ಉಗಿದು, ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರಂತೆ.

ಚಾಮರಾಜನಗರದಿಂದ ಮಾಜಿ ರಾಜ್ಯಪಾಲ ರಾಚಯ್ಯ ಅವರ ಪುತ್ರ ವಿ.ಆರ್. ಕೃಷ್ಣಮೂರ್ತಿ ಪಕ್ಷದ ಅಭ್ಯರ್ಥಿಯಾಗಲಿದ್ದಾರೆ. ಇದಕ್ಕೆ ಸ್ಥಳೀಯ ಬಿಜೆಪಿ ಘಟಕ ವಿರೋಧ ವ್ಯಕ್ತಪಡಿಸುತ್ತಿದೆ. ಪಕ್ಷಕ್ಕಾಗಿ ಕೆಲಸ ಮಾಡುತ್ತಿರುವವರಿಗೆ ಟಿಕೇಟ್ ಕೊಡಿ ಎಂದು ಪಟ್ಟು ಹಿಡಿದು ಕುಳಿತಿದೆ.

ಮೊನ್ನೆ ಮೊನ್ನೆ ಪಕ್ಷ ಸೇರಿ ಸಚಿವರಾಗಿರುವ ಉಮೇಶ್ ಕತ್ತಿಯವರ ಸಹೋದರ ರಮೇಶ ಕತ್ತಿಗೆ ಚಿಕ್ಕೋಡಿ ಕ್ಷೇತ್ರದ ಟಿಕೆಟ್ ನೀಡಲಾಗಿದೆ. ತಮ್ಮ ಮಾತಿಗೆ ಬೆಲೆ ಇಲ್ಲದಂತಾಗಿರುವುದರಿಂದ ಪಕ್ಷಕ್ಕಾಗಿ ದುಡಿದವರು ಮನೆ ಸೇರಿದ್ದಾರೆ.


ಇನ್ನು ಬೆಂಗಳೂರು ಕೇಂದ್ರ ಕ್ಷೇತ್ರದ ಟಿಕೆಟ್ ಸಿಗುತ್ತದೆಯೆಂದು ಕೈಯಲ್ಲಿ ಕಮಲ ಹಿಡಿದು ಮೊನ್ನೆ ಬಿಜೆಪಿ ಸೇರಿದ್ದ ಮಾಜಿ ಲೋಕಾಯುಕ್ತ ಎನ್. ವೆಂಕಟಾಚಲರಿಗೆ ಪಕ್ಷ ಒಂದಿಷ್ಟೂ ಬೆಲೆ ನೀಡುವ ಸಾಧ್ಯತೆಗಳಿಲ್ಲ. ಏಕೆಂದರೆ ಈ ಕ್ಷೇತ್ರದಿಂದ ಪಿ.ಸಿ. ಮೋಹನ್‌ರನ್ನು ಕಣಕ್ಕಿಳಿಸಲು ಪಕ್ಷ ನಿರ್ಧರಿಸಿದೆ. ಇನ್ನು ಚೆಕ್ ಬೌನ್ಸ್ ಖ್ಯಾತಿಯ ಚನ್ನಪಟ್ಟಣದ ಶಾಸಕ ಯೋಗೀಶ್ವರ್‌ನನ್ನು ಪಕ್ಷಕ್ಕೆ ಸೇರಿಸಿಕೊಂಡು ಟಿಕೆಟ್ ನೀಡುವ ತೀರ್ಮಾನಕ್ಕೆ ಪಕ್ಷ ಬಂದಿದೆ.

ತುಮಕೂರಿನಿಂದ ಕಣಕ್ಕಿಳಿಯುವ ನಟ ಜಗ್ಗೇಶ್ ಕನಸು ನನಸಾ[illegible] ಕಾಣುತ್ತಿಲ್ಲ, ಮಂಡ್ಯದಲ್ಲಿ ಪಕ್ಷಕ್ಕೆ ಡಿ.ಸಿ.ತಮ್ಮಣ್ಣರೇ ಗತಿ ಎಂಬಂತಾಗಿದೆ. ಗುಲ್ಬರ್ಗದಿಂದ [illegible]ನಾಯಕ್, ಕೊಪ್ಪಳದಿಂದ ಬಸವರಾಜ್ ಪಾಟೀಲ್, ರಾಯಚೂರಿನಿಂದ ರಾಜಾ ಅಮರೇ[illegible]ಯಕ್, ಕೋಲಾರದಿಂದ ಯಡ್ಡಿಯ ಹೊಗಳುಭಟ ಡಿ.ಎಸ್. ವೀರಯ್ಯ ಕಣಕ್ಕೆ ಧುಮುಕಿ, [illegible]ಕ್ಕೊಂದು ಗತಿ ಕಾಣಿಸಲು ಸಿದ್ಧರಾಗಿದ್ದಾರೆ.

■ ವರದಿಗಾರ


ಜನಾರ್ದನ ಸ್ವಾಮಿ



ತಿಪ್ಪೇಸ್ವಾಮಿ




ಚಿತ್ರದುರ್ಗ: ಬಿಜೆಪಿಗೆ ಜೆ.ಜೆ.ಸ್ವಾಮಿ ಕಾಂಗ್ರೆಸ್-ಜೆಡಿಎಸ್‌ಗೆ ಯಾರು?

ಚಿತ್ರದುರ್ಗ ಲೋಕಸಭಾ ಚುನಾವಣೆಲ್ಲಿಬಿಜೆಪಿಗಳ ಅಬ್ಬರ ಏನೇ ಇದ್ದರೂ ಇಡೀ ಲೋಕಸಭಾ ಕ್ಷೇತ್ರದುದ್ದಕ್ಕೂ ತಳಹಂತದ ಕಾರ್ಯಕರ್ತರಿರುವುದು ಕಾಂಗ್ರೆಸ್- ಜೆಡಿಎಸ್‌ಗೆ ಮಾತ್ರ. ಇನ್ನು ಕೆಲವು ದಿನಗಳಲ್ಲಿ ಇದು ಮತ್ತಷ್ಟು ನಿಚ್ಚಳವಾಗಲಿದೆ.


ಆಂಜನೇಯ




ರತ್ನಾಕರ

ಮೀಸಲು ಕ್ಷೇತ್ರವಾಗಿರುವ ಚಿತ್ರದುರ್ಗ ಲೋಕಸಭಾ ಚುನಾವಣೆಗೆ ಆಕಾಂಕ್ಷಿಗಳ ಪಟ್ಟಿ ಉದ್ದುದ್ದ ಬೆಳೆಯುತ್ತಲೇ ಇದೆ. ಮೀಸಲು ಕ್ಷೇತ್ರವಾಗಿರುವ ಕಾರಣಕ್ಕೆ ಈ ಬಾರಿಯ ಚುನಾವಣೆ ಹಿಂದೆಂದಿಗಿಂತಲೂ ಹೆಚ್ಚಿನ ಮಹತ್ವ ಪಡೆದುಕೊಂಡಿದೆ.

ಕಾಂಗ್ರೆಸ್, ಜನತಾದಳ ತನ್ನ ಅಭ್ಯರ್ಥಿಯಾಗಿ ಯಾರನ್ನು ಅಂತಿಮಗೊಳಿಸಬೇಕೆಂಬ ಲೆಕ್ಕಾಚಾರದಲ್ಲಿರುವಾಗಲೇ ಬಿಜೆಪಿಯ ಜೆ. ಜನಾರ್ದನಸ್ವಾಮಿ ಎಂಬ ಹೈಟೆಕ್ ಸ್ವಾಮಿಯವನ್ನು ತನ್ನ ಅಭ್ಯರ್ಥಿಯೆಂದು ಘೋಷಿಸಿಬಿಟ್ಟಿದೆ.

ಲೋಕಸಭೆಯ ಚುನಾವಣೆಯ ಸಿದ್ಧತೆಗಳು ಆರಂಭವಾದಾಗಿನಿಂದಲೂ ಬಿಜೆಪಿಯಲ್ಲಿ ಅತ್ಯಂತ ಆತ್ಮವಿಶ್ವಾಸ, ಭರವಸೆಯಿಂದ ಇದ್ದದ್ದು ಬೋವಿ ಸಮುದಾಯದವರು. ಇದಕ್ಕೆ ಕಾರಣ ಚಿತ್ರದುರ್ಗ ಲೋಕಸಭಾ ವ್ಯಾಪ್ತಿಯಲ್ಲಿ ಬರುವ ಮೂವರು ಶಾಸಕರು ಬೋವಿಸಮುದಾಯಕ್ಕೆ ಸೇರಿದವರು ಮತ್ತು ಆಡಳಿತಾರೂಢ ಬಿಜೆಪಿ ಸರ್ಕಾರದಲ್ಲಿ ಇಬ್ಬರು ಕ್ಯಾಬಿನೆಟ್ ಸಚಿವರಾಗಿದ್ದಾರೆ. ಯಾವ ರೀತಿಯ ಲೆಕ್ಕಾಚಾರ ಹಾಕಿದರೂ ಬೋವಿ ಸಮುದಾಯಕ್ಕೆ ಬಿಜೆಪಿ ಟಿಕೆಟ್ ಖಚಿತ ಎಂಬ ಭರವಸೆಯಲ್ಲೇ ಇದ್ದರು. ಮೊದಲಿಗೆ ಜನಾರ್ದನಸ್ವಾಮಿ, ನಂತರ ಬೆಂಗಳೂರಿನಲ್ಲಿ ಡಿಸಿಪಿಯಾಗಿರುವ ವಿ. ತಿಮ್ಮಪ್ಪನವರ ಹೆಸರು ಕೇಳಿಬರುತ್ತಿತ್ತು.

ಬಿಜೆಪಿಯಿಂದ ಈಗ ಅಂತಿಮಗೊಂಡಿರುವುದು ಜನಾರ್ದನಸ್ವಾಮಿ ಹೆಸರು. ಈತನ ಶೈಕ್ಷಣಿಕ ಹಿನ್ನೆಲೆ, ಈತನಿಗಿರುವ ತಾಂತ್ರಿಕಜ್ಞಾನ, ಹೈಟೆಕ್ ಸಂಪರ್ಕಗಳು, ಅಮೆರಿಕಾದ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಆತ ಪಡೆಯುತ್ತಿದ್ದ ವೇತನ....., ಹೀಗೆ ಪ್ರತಿಯೊಂದರ ಸುತ್ತಲೂ ರೋಚಕತೆಗಳೇ ಸೃಷ್ಟಿಯಾಗಿಬಿಟ್ಟಿವೆ. ಇವುಗಳಲ್ಲಿ ಸತ್ಯಾಂಶ ಇದ್ದರೂ ಈತನನ್ನು ಇಲ್ಲಿನ ಜನ ಸ್ವೀಕರಿಸುವ ಬಗ್ಗೆ ಅನುಮಾನಗಳಿದ್ದೇ ಇವೆ. ಈತ ಬೋವಿ ಸಮಾಜಕ್ಕೆ ಸೇರಿದವನಾದರೂ ಇಲ್ಲಿನ ಬೋವಿ ಸಮುದಾಯವೇ ಜನಾರ್ದನಸ್ವಾಮಿಯನ್ನು ನಮ್ಮವನೆಂದು ಸ್ವೀಕರಿಸಲು ತಯಾರಿಲ್ಲ, ಜನಾರ್ದನಸ್ವಾಮಿಗಿಂತ ಡಿಸಿಪಿ ತಿಮ್ಮಪ್ಪನನ್ನೇ ಇಲ್ಲಿನ ಬೋವಿ ಸಮುದಾಯದವರು ಒಮ್ಮನಸ್ಸಿನಿಂದ ಸ್ವೀಕರಿಸುತ್ತಿದ್ದಾರೆ. ಕಾರಣವಿಷ್ಟೆ, ಜನಾರ್ದನಸ್ವಾಮಿ ನವಬ್ರಾಹ್ಮಣನಂತೆ ಬೋವಿ ಸಮಾಜದಿಂದ ಅಂತರ ಕಾಯ್ದುಕೊಂಡರೆ, ತಿಮ್ಮಪ್ಪ ತಾನು ಬೋವಿ ಸಮಾಜದವ ಎಂತ ಹೇಳಿಕೊಂಡೇ ಜನರಿಗೆ ಹತ್ತಿರವಾಗುತ್ತಿರುವುದು.

ಮೊನ್ನೆ ಚಿತ್ರದುರ್ಗದಲ್ಲಿ ನಡೆದ ಬೋವಿ ಗುರುಪೀಠದ ಸಭೆಗಳಲ್ಲಿ ಸಮಾರಂಭಕ್ಕೂ ತನಗೂ ಸಂಬಂಧವೇ ಇಲ್ಲವೆಂಬಂತೆ ಜನಾರ್ದನಸ್ವಾಮಿ ವರ್ತಿಸಿದರೆ, ತಿಮ್ಮಪ್ಪ ಆ ಸಮಾವೇಶದಲ್ಲಿ ನಿರ್ಣಾಯಕ ಜವಾಬ್ದಾರಿಗಳನ್ನು ವಹಿಸಿಕೊಂಡು ಸಮುದಾಯದವರ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಬಹಳ ಮುಖ್ಯವಾಗಿ ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ, ಜವಳಿ ಖಾತೆ ಸಚಿವ ಗೂಳಿಹಟ್ಟಿ ಡಿ. ಶೇಖರ್ ಬೆಂಬಲ ತಿಮ್ಮಪ್ಪನವರಿಗಿದೆ.

ಮೊನ್ನೆ ಜನಾರ್ದನಸ್ವಾಮಿಯ ಹೆಸರು ಬಿಜೆಪಿ ಅಭ್ಯರ್ಥಿಯೆಂದು ಮಾಧ್ಯಮಗಳಲ್ಲಿ ಬಿತ್ತರಗೊಳ್ಳುತ್ತಿದ್ದಂತೆ ಜಾಣವೇ ಎಂ. ಚಂದ್ರಪ್ಪ-ಗೂಳಿಹಟ್ಟಿ ಡಿ. ಶೇಖರ್ ಇಬ್ಬರೂ ವಿರೋಧ ವ್ಯಕ್ತಪಡಿಸಿದ್ದಾರೆ. ಜೊತೆಗೆ ಈಗಲೂ ತಿಮ್ಮಪ್ಪನವರನ್ನೇ ಅಧಿಕೃತ ಅಭ್ಯರ್ಥಿಯಾಗಿಸಬೇಕೆಂಬ ಪ್ರಯತ್ನಗಳನ್ನು ಮುಂದುವರಿಸಿದ್ದಾರೆ. ಪ್ರಸ್ತುತ ಚಿತ್ರದುರ್ಗ ಜಿಲ್ಲೆಯ ಬಿಜೆಪಿ ಮಟ್ಟಿಗೆ ಸಿರಿಗೆರೆ ಬೃಹನ್ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳೇ ಪರೋಕ್ಷವಾಗಿ ಹೈಕಮಾಂಡ್.

ಡಾ. ಶಿವಮೂರ್ತಿ ಶಿವಾಚಾರ್ಯರ ಆಶೀರ್ವಾದ ಜನಾರ್ದನಸ್ವಾಮಿಗಿದೆ ಎಂದು ಹೇಳಲಾಗುತ್ತಿದೆ. ಇಷ್ಟೆಲ್ಲಾ ಇದ್ದರೂ ಜನಾರ್ದನಸ್ವಾಮಿಗೆ ಡಿಸಿಪಿ ತಿಮ್ಮಪ್ಪ ನಿವಾರಿಸಿಕೊಳ್ಳಲೇಬೇಕಾದ ತಡೆಯಾಗಿದ್ದಾರೆ. ಕೊನೆಗಳಿಗೆಯಲ್ಲಿ ತನ್ನ ಸ್ಪರ್ಧೆಗೆ ಅಡ್ಡಗಾಲು ಹಾಕಿರುವ ಜನಾರ್ಧನ ಸ್ವಾಮಿಯನ್ನೆ ಬದಿಗೆ ಸರಿಸಿ ಡಿಸಿಪಿ ತಿಮ್ಮಪ್ಪನವರು ಕಣಕ್ಕಿಳಿದರೂ ಆಶ್ಚರ್ಯಪಡಬೇಕಿಲ್ಲ.

ಕಾಂಗ್ರೆಸ್‌ನಲ್ಲಿ ಮಾಜಿ ಶಾಸಕ ಎಚ್. ಆಂಜನೇಯ, ಜಿಲ್ಲಾ ಯುವ ಕಾಂಗ್ರೆ ಅಧ್ಯಕ್ಷ ಜೆ.ಜೆ. ಹಟ್ಟಿ ಡಾ. ತಿಪ್ಪೇಸ್ವಾಮಿ, ಮಾಜಿ ಸಚಿವ ಡಾ. ಜಿ. ಪರಮೇಶ್ವರ್, ಕೇಂದ್ರ ಸಚಿವ ಕೆ.ಹೆಚ್. ಮುನಿಯಪ್ಪ, ರಾಜ್ಯ ಸಭೆಯ ಮಾಜಿ ಸದಸ್ಯ ಹೆಚ್. ಹನುಮಂತಪ್ಪ, ಮಾಜಿ ಸಚಿವ ಶಿವಮೂರ್ತಿನಾಯ್ಕ್, ಕಾಂಗ್ರೆಸ್‌ನ ರಾಜ್ಯ ತಂತ್ರಜ್ಞಾನ ಘಟಕದ ಜಿ.ಇ. ಮಂಜುನಾಥ್‌ರವರ ಹೆಸರುಗಳು ಕೇಳಿಬರುತ್ತಿವೆ.

ಸ್ಥಳೀಯವಾಗಿ ಮಾಜಿ ಶಾಸಕ ಆಂಜನೇಯ ಬೆಂಬಲಿಗರು ಹಾಗೂ ಡಾ. ಜೆ.ಜೆ.ಹಟ್ಟಿ ತಿಪ್ಪೇಸ್ವಾಮಿ ಬೆಂಬಲಿಗರ ನಡುವೆ ಹೊಯ್-ಕೈಗಳು ನಡೆದಿವೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ತನಗೆ ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದಿಂದ ಘೋಷಣೆಯಾಗಿದ್ದ ಟಿಕೆಟ್ ತಪ್ಪಿಸಿದ ಆಂಜನೇಯ ನಂತರ ಚುನಾವಣೆಯಲ್ಲೂ ಸೋತರು. ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷಕಟ್ಟಲು ಯುವ ಕಾಂಗ್ರೆ ಕೆಲಸ ಮಾಡಿದೆ. ಆದ್ದರಿಂದ ನನಗೇ ಟಿಕೆಟ್ ಕೊಡಬೇಕೆಂಬುದು ಜೆ.ಜೆ.ಹಟ್ಟಿ ತಿಪ್ಪೇಸ್ವಾಮಿ ವಾದ. ಈತನ ಬಗ್ಗೆ ಯಾರೇನೇ ಹೇಳಿದರೂ ಈತನ ದೊಂಬಿ-ಬಾಯಿಬಡುಕ ಪ್ರವೃತ್ತಿಯಿಂದಲೇ ಕಾಂಗ್ರೆಸ್‌ನಲ್ಲಿ ನೆಲೆಗೊಂಡವ. ಈತ ಡಾಕ್ಟರೇಟ್ ಪದವಿ ಪಡೆದುದರ ಸುತ್ತ ಪುಂಖಾನುಪುಂಖ ಕತೆಗಳಿವೆ. ಈತನಿಗೆ ಹೋದಲ್ಲೆಲ್ಲಾ ಚೋರಗುರುಗಳು ಜೊತೆಯಾಗಿ ನಿಲ್ಲುವುದೇ ಇದಕ್ಕೆ ಕಾರಣ. ಇಷ್ಟರ ನಡುವೆಯೂ ಯೂತ್ ಖೋಟಾದಲ್ಲಿ ಈತನಿಗೆ ಟಿಕೆಟ್ ಸಿಕ್ಕರೂ ಆಶ್ಚರ್ಯ ಪಡಬೇಕಿಲ್ಲ.

ಹೆಚ್. ಹನುಮಂತಪ್ಪ ಹೈಕಮಾಂಡಿನಲ್ಲಿ ಚಿರಪರಿಚಿತರು. ಹಿರಿಯ ನಾಯಕರಾಗಿದ್ದರೂ ನೇರ ಚುನಾವಣೆಗೂ ಅವರಿಗೂ ಆಗಿ ಬಂದಂತಿಲ್ಲ. ಡಾ. ಜಿ. ಪರಮೇಶ್ವರ್‌ಗೆ ವೈಯಕ್ತಿಕವಾಗಿ ಸ್ಪರ್ಧಿಸಲು ಒಲವು ಇದ್ದಂತಿಲ್ಲ. ಆದರೆ ಹೈಕಮಾಂಡ್ ಸೂಚಿಸಿದರೆ ಸ್ಪರ್ಧೆ ಅನಿವಾರ್ಯ. ಕೋಲಾರ ಲೋಕಸಭೆಯಿಂದ ಲಾಗಾಯ್ತಿನಿಂದ ಆಯ್ಕೆಯಾಗುತ್ತಿರುವ ಕೆ.ಹೆಚ್. ಮುನಿಯಪ್ಪ ಈ ಬಾರಿ ಅಲ್ಲಿ ಪ್ರತಿಕೂಲ ಪರಿಸ್ಥಿತಿ ಎದುರಿಸುತ್ತಿದ್ದು ಗೆಲುವಿಗೆ ತುಂಬಾ ಪ್ರಯಾಸ ಪಡಬೇಕಾದ ಸನ್ನಿವೇಶ ನಿರ್ಮಾಣವಾಗಿವುದರಿಂದ ಚಿತ್ರದುರ್ಗ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಇರಾದೆ ವ್ಯಕ್ತಪಡಿಸಿದ್ದಾರೆನ್ನಲಾಗಿದೆ.

ಜೆಡಿಎಸ್‌ನಿಂದ ಡಿ. ಮಂಜುನಾಥ್‌ರ ಮಗ ರತ್ನಾಕರ ಬಾಬು ಅಭ್ಯರ್ಥಿಯಾಗುವುದು ಬಹುತೇಕ ಖಚಿತವಾಗಿದೆ. ಜಿ.ಪಂ. ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಎಚ್. ಸೋಮಶೇಖರ್, ಡಿಡಿಪಿಐ ರಂಗಪ್ಪ, ಪಾವಗಡದ ಮಾಜಿ ಶಾಸಕ ತಿಮ್ಮರಾಯಪ್ಪ ಡಿ. ಮಂಜುನಾಥ್‌ರ ಹೆಸರುಗಳು ಜೆಡಿಎಸ್‌ನ ಆಕಾಂಕ್ಷಿಗಳ ಪಟ್ಟಿಯಲ್ಲಿದ್ದವು. ಈಗ ರತ್ನಾಕರಬಾಬು ಹೆಸರೇ ಅಂತಿಮಗೊಳ್ಳಲಿದೆ.

ಇದಿಷ್ಟು ಆಕಾಂಕ್ಷಿಗಳ ಕತೆಯಾದರೆ ಲೋಕಸಭಾ ಕ್ಷೇತ್ರ ಯಾರ ಕೈವಶವಾಗಬಹುದೆಂಬುದರ ಸುತ್ತ ತರಹೇವಾರಿ ಚರ್ಚೆಗಳು- ಅಂದಾಜುಗಳು ನಡೆಯುತ್ತಿವೆ. ಹಾಗೆ ನೋಡಿದರೆ ಎಸ್.ಸಿ. ಮೀಸಲು ಕ್ಯಾಟಗರಿಯ ಜಾತಿಗಳಲ್ಲಿ ಇಡೀ ಲೋಕಸಭಾ ಕ್ಷೇತ್ರದುದ್ದಕ್ಕೂ ಮಾದಿಗರು (ಎಡಗೈ) ನಿರ್ಣಾಯಕ ಸಂಖ್ಯೆಯಲ್ಲಿದ್ದಾರೆ. ಉಳಿದಂತೆ ಬೋವಿಗಳು, ಲಂಬಾಣಿಗಳು, ಛಲವಾದಿಗಳು, ಉಳಿದ ಸಣ್ಣಪುಟ್ಟ ಸಮುದಾಯಗಳಿದ್ದರೂ ಚುನಾವಣೆಯ ಗೆಲುವಿನ ದೃಷ್ಟಿಯಿಂದ ನಿರ್ಣಾಯಕರೇನಲ್ಲ.

ಇಲ್ಲಿರುವ ಜಾತಿರಾಜಕೀಯದ ಹಿನ್ನೆಲೆಯಲ್ಲಿ ಮಾದಿಗೇತರರಿಗೆ ಟಿಕೆಟ್ ನೀಡಿದರೆ ಎಲ್ಲಾ ಮೇಲ್ಜಾತಿ ಸಮುದಾಯಗಳು ಬೆಂಬಲಿಸುತ್ತವೆ ಎಂಬುದು ಬಿಜೆಪಿ ಲೆಕ್ಕಾಚಾರ. ಇಡೀ ಕ್ಷೇತ್ರದಲ್ಲಿ ಆಡಳಿತಾರೂಢ ಬಿಜೆಪಿಯ ಐದು ಜನ ಶಾಸಕರಿದ್ದಾರೆ. ಅದರಲ್ಲಿ ಕ್ಯಾಬಿನೆಟ್ ಸಚಿವರುಗಳಾಗಿರುವ ರೇಷ್ಮೆ ಖಾತೆ ಸಚಿವ ವೆಂಕಟರಮಣಪ್ಪ, ಜವಳಿ ಖಾತೆ ಸಚಿವ ಗೂಳಿಹಟ್ಟಿ ಡಿ. ಶೇಖರ್, ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ ಬೋವಿ ಸಮುದಾಯಕ್ಕೆ ಸೇರಿದವರು. ಸಮಾಜ ಕಲ್ಯಾಣ ಸಚಿವ ಡಿ. ಸುಧಾಕರ್, ವೆಂಕಟರಮಣಪ್ಪ, ಗೂಳಿಹಟ್ಟಿ ಶೇಖರ್ ಸ್ವತಂತ್ರ ಅಭ್ಯರ್ಥಿಗಳಾಗಿ ಬಿಜೆಪಿಯ ಸರ್ಕಾರದ ಭಾಗವಾಗಿದ್ದಾರೆ. ಆಪರೇಷನ್ ಕಮಲದ ನಂತರ ನಡೆದ ಚುನಾವಣೆಯಲ್ಲಿ ಬಿಜೆಪಿ ತನ್ನ ಸ್ವಂತ ಬಲ ಹೆಚ್ಚಿಸಿಕೊಂಡಿರುವ ಹಿನ್ನೆಲೆಯಲ್ಲಿ ಆತಂತ್ರರಾಗಿದ್ದಾರೆ.

ಯಡಿಯೂರಪ್ಪ ಪಕ್ಷೇತರರನ್ನು ಕೈಬಿಡುವ ಪ್ರಶ್ನೆಯೇ ಇಲ್ಲ ಎಂದು ಹೇಳುತ್ತಿದ್ದರೂ ಅಂತಹವರನ್ನು ಉಳಿಸಿಕೊಳ್ಳಲು ಲೋಕಸಭಾ ಚುನಾವಣೆಯಲ್ಲಿ ಆಯಾ ಶಾಸಕರ ಪ್ರಭಾವ/ ಪ್ರಯತ್ನಗಳೆರಡನ್ನು ಒಂದು ಮಾನದಂಡವಾಗಿಟ್ಟುಕೊಂಡು ನಿರ್ಧಾರ ಬದಲಿಸುವ ಸಾಧ್ಯತೆ ಇದ್ದೇ ಇದೆ. ಆದ್ದರಿಂದ ಎಲ್ಲರೂ ಬಿಜೆಪಿಯ ಅಭ್ಯರ್ಥಿಯ ಗೆಲುವಿಗಾಗಿ ಕೆಲಸ ಮಾಡಲೇ ಬೇಕಾದ ಒತ್ತಡ-ನಿರ್ಬಂಧದ ವಾತಾವರಣ ನಿರ್ಮಿಸಲಾಗಿದೆ.

ಕಾಂಗ್ರೆಸ್ ವಿಷಯಕ್ಕೆ ಬಂದರೆ ಇದು ಕಾಂಗ್ರೆಸ್ ಭದ್ರಕೋಟೆ. ತನ್ನದೇ ಆದ ಮತದಾರರ ನೆಲೆ ಇದೆ. ಅದರಲ್ಲೂ ಎಸ್.ಸಿ. ಕ್ಯಟಗರಿಯಲ್ಲಿ ನಿರ್ಣಾಯಕವಾಗಿರುವ ಮಾದಿಗ ಸಮುದಾಯದವರಿಗೆ ಟಿಕೆಟ್ ನೀಡಿದರೆ ಗೆಲುವಿನ ಸಾಧ್ಯತೆಗಳು ಹೆಚ್ಚಾಗಿರುತ್ತವೆ ಎಂಬುದು ಕಾಂಗ್ರೆಸ್ ಲೆಕ್ಕಾಚಾರ. ಹಾಗಾಗಿಯೇ ಮಾಜಿ ಶಾಸಕ ಎಚ್. ಆಂಜನೇಯ, ಜೆಜೆ ಹಟ್ಟಿ ತಿಪ್ಪೇಸ್ವಾಮಿ ಟಿಕೆಟ್ ಗಿಟ್ಟಿಸಲು ಹೊಯ್ - ಕೈ ಹಂತ ತಲುಪಿದ್ದಾರೆ. ಈ ನಡುವೆ ಜೆಡಿಎಸ್‌ನಿಂದ ರತ್ನಾಕರ್‌ಬಾಬು, ಬಿಎಸ್‌ಪಿಯಿಂದ ಎಂ. ಜಯಣ್ಣ ಸ್ಪರ್ಧಿಸಿದರೆ ಮಾದಿಗ ಸಮುದಾಯದವರ ಮತಗಳು ಹಂಚಿಹೋಗಿ ಬಿಜೆಪಿ ಗೆಲುವಿಗೆ ದಾರಿ ಮಾಡಿದಂತಾಗುತ್ತದೆ ಎಂಬ ವಿಶ್ಲೇಷಣೆಗಳೂ ನಡೆಯುತ್ತಿವೆ. ಹಾಗಾಗಿ ಬಲಗೈ ಸಮುದಾಯದ ಡಾ. ಜಿ. ಪರಮೇಶ್ವರ್, ಎಚ್. ಹನುಮಂತಪ್ಪ ಜಿ.ಇ. ಮಂಜುನಾಥ್‌ರ ಹೆಸರುಗಳು ಚಾಲ್ತಿಯಲ್ಲಿವೆ.

ಜೆಡಿಎಸ್‌ನಿಂದ ಎಡಗೈ ಸಮುದಾಯದವರಿಗೆ ಟಿಕೆಟ್ ಖಚಿತ ಎಂಬ ಅಭಿಪ್ರಾಯ ಮೊದಲಿನಿಂದಲೂ ಇತ್ತು. ಈಗ ಯಾವ ಅನುಮಾನಕ್ಕೂ ಆಸ್ಪದವಿದ್ದಂತಿಲ್ಲ. ಬೋವಿ-ಸಮುದಾಯದ ರಾಜಕೀಯ ಜಾಗೃತಿ, ಒಗ್ಗಟ್ಟಿನ ಭಾವನೆ ಮಾದಿಗ ಸಮುದಾಯದಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಜಾಗೃತಿಗೆ ಕಾರಣವಾಗಿದೆ. ಎಷ್ಟೇ ಎಡಗೈ ಅಭ್ಯರ್ಥಿಗಳು ಕಣದಲ್ಲಿದ್ದರೂ ಗೆಲ್ಲಬಹುದಾದ ಸಾಧ್ಯತೆ ಇರುವವರನ್ನು ಆಯ್ಕೆ ಮಾಡಿಕೊಳ್ಳುವಷ್ಟು ಚಾಣಾಕ್ಷತನ ಈ ಬಾರಿ ಪ್ರದರ್ಶನವಾಗಲಿದೆ.

ಇದು ಜೆಡಿಎಸ್‌ಗೆ ಪೂರಕವಾಗುವ ಸಾಧ್ಯತೆಗಳು ಹೆಚ್ಚಾಗಿವೆ. ಏಕೆಂದರೆ ಹಿರಿಯೂರು, ಪಾವಗಡ, ಶಿರಾ ಕ್ಷೇತ್ರಗಳಲ್ಲಿ ನಿರ್ಣಾಯಕವಾಗಿರುವ ಒಕ್ಕಲಿಗರು ದೇವೇಗೌಡರ ಪ್ರಭಾವದಿಂದ ದೂರವಾಗಿಲ್ಲ, ಜೆಡಿಎಸ್‌ನಿಂದ ಸ್ಪರ್ಧಿಸುವ ಅಭ್ಯರ್ಥಿಗೆ ಇದೊಂದು ಪ್ಲಸ್ ಪಾಯಿಂಟ್.


ಬಿಜೆಪಿಗಳ ಅಬ್ಬರ ಏನೇ ಇದ್ದರೂ ಇಡೀ ಲೋಕಸಭಾ ಕ್ಷೇತ್ರದುದ್ದಕ್ಕೂ ತಳಹಂತದ ಕಾರ್ಯಕರ್ತರಿರುವುದು ಕಾಂಗ್ರೆಸ್- ಜೆಡಿಎಸ್‌ಗೆ ಮಾತ್ರ. ಇನ್ನು ಕೆಲವು ದಿನಗಳಲ್ಲಿ ಇದು ಮತ್ತಷ್ಟು ನಿಚ್ಚಳವಾಗಲಿದೆ. ■

ಸಜ್ಜನ ಹೋರಾಟಗಾರರ ಎಂ. ಜಯಣ್ಣ

ಕಳೆದ ಮೂರು ದಶಕಗಳಿಂದ ಹೋರಾಟದ ಹಾದಿಯಲ್ಲೇ ಜೀವನ ಸವೆಸುತ್ತಿರುವ ಎಂ. ಜಯಣ್ಣ ಸಜ್ಜನ ಹೋರಾಟಗಾರ. ಜಯಣ್ಣನವರ ದಲಿತಪರ, ಜನಪರ ಕಾಳಜಿ ಪ್ರಶ್ನಾತೀತವಾದದ್ದು. ಬೇರೆ ಬೇರೆ ಸಂದರ್ಭಗಳಲ್ಲಿ ಜಯಣ್ಣನವರ ಪ್ರಭಾವವನ್ನು ತಮಗೆ ಹೇಗೆ ಬೇಕೋ ಹಾಗೆ ಬಳಸಿಕೊಂಡು ಉದ್ಧಾರ ವಾದವರು, ಪಕೀಲಿ ಬಾಜಿ ಮಾಡಿದವರು, ದಲಿತಪರ ಚಳವಳಿಯನ್ನೇ ಬಂಡವಾಳ ಮಾಡಿಕೊಂಡು ಯಾಮಾರಿಸಿದವರು, ಜಯಣ್ಣನಿಗೇ ಮುಳ್ಳಾಗಿ ಬೆಳೆದವರದೊಂದು ದೊಡ್ಡ ದಂಡೇ ಇಲ್ಲಿದೆ.

ಜಯಣ್ಣ ಇವರೆಲ್ಲರಿಗಿಂತ ವಿಭಿನ್ನ ವ್ಯಕ್ತಿತ್ವವನ್ನು ರೂಪಾಡಿಕೊಂಡಿದ್ದಾರೆ. ಈ ಕ್ಷಣಕ್ಕೂ ಜಿಲ್ಲೆಯಲ್ಲಿ ಪಕ್ಷಾತೀತವಾಗಿ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆ ಹೋರಾಟದಲ್ಲಿ ಸಕ್ರಿಯವಾದ ನಂತರ ಅವರ ನಾಯಕತ್ವಕ್ಕೊಂದು ವಿಶೇಷತೆ ಬಂದುಬಿಟ್ಟಿದೆ. ಯಾರೇ ಎದುರಾದರೂ ಸಾರ್.... ನೀವ್ ಈ ಸಾರಿ ನಿಂತ್ಕಳಿ. ನಾವೆಲ್ಲಾ ಸಪೋರ್ಟ್ ಮಾಡ್ತೀವಿ ಎಂದು ಹೇಳುತ್ತಾರೆ. ಭದ್ರಾ ಮೇಲ್ದಂಡೆ ಯೋಜನೆಗೆ ಅಡಿಗಲ್ಲು ಹಾಕಿದ ನಂತರ ಜಯಣ್ಣನವರ ಉತ್ಸಾಹ ಕೂಡಾ ಹೆಚ್ಚಾಗಿದೆ.

ಜಯಣ್ಣನಷ್ಟು ಹೋರಾಟದ ಹಿರಿತನವಿರುವ ಎಲ್ಲಾ ದಲಿತ ಮುಖಂಡರಿಗೆ ಹೋಲಿಸಿದರೆ ತತ್ವ-ಸಿದ್ಧಾಂತ-ಬದ್ಧತೆಗಳ ಪಾಲನೆಯ ವಿಚಾರದಲ್ಲಿ ಜಯಣ್ಣ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಜಯಣ್ಣನವರಿಗೆ ಈಗಲೂ ಒಂದು ಅಚ್ಚುಕಟ್ಟಾದ ಮನೆಯಿಲ್ಲ. ಪ್ರಮುಖ ಆದಾಯ ಮೂಲ ಎಲ್‌ಐಸಿ ಏಜೆನ್ಸಿಯ ಕಮೀಷನ್- ಹಾಗೂ ಚಿತ್ರದುರ್ಗ ಮುನಿಸಿಪಾಲಿಟಿಯಲ್ಲಿ ಡಿ ಗ್ರೂಪ್ ನೌಕರಿ ಮಾಡುತ್ತಿರುವ ಅವರ ಶ್ರೀಮತಿಯವರ ಸಂಬಳ ಮಾತ್ರ. ಅವರ ಬಳಿ ಇರುವ ಒಂದೇ ಐಷಾರಾಮಿ ವಸ್ತು ಎಂದರೆ ಜಯಣ್ಣನವರನ್ನು ಅಭಿಮಾನಿಸುವ ಯುವ ಉದ್ಯಮಿಯೊಬ್ಬರು ಕೊಡಿಸಿರುವ ಸ್ಕಾರ್ಪಿಯೋ ವಾಹನ ಮಾತ್ರ.



ನೀವು ಕಾಂಗ್ರೆಸ್ ಅಥವಾ ಜೆಡಿಎಸ್‌ನಿಂದ ಸ್ಪರ್ಧಿಸಿದರೆ ಮಾತ್ರ ಎಂಪಿಯಾಗ್ತಿರ. ಬಿಎಸ್‌ಪಿಯಲ್ಲಿದ್ರೆ ಕಷ್ಟ ಅಂತಾ ಎಷ್ಟೋ ಜನ ಹಿತೈಷಿಗಳು ಜಯಣ್ಣನವರಿಗೆ ಸಲಹೆ ಮಾಡುತ್ತಾರೆ. ಆದರೆ ಜಯಣ್ಣ ಮಾತ್ರ ಬಿಎಸ್‌ಪಿಯಿಂದ ಹೊರಬರುವ ಕುರಿತು ಆಲೋಚಿಸಿದಂತಿಲ್ಲ.

ಬಿ.ಎಸ್.ಪಿ.ಯ ರಾಜ್ಯ ನಾಯಕರು ಚಿತ್ರದುರ್ಗ ಲೋಕಸಭಾ ಚುನಾವಣೆಯನ್ನು ಆದ್ಯತೆಯಾಗಿಸಿಕೊಂಡರೆ ಒಂದಿಷ್ಟು ಬದಲಾವಣೆ ನಿರೀಕ್ಷಿಸಬಹುದು. ಒಟ್ಟಾರೆ ಜಯಣ್ಣನವರು ಬಿಎಸ್‌ಪಿಯಿಂದ ಸ್ಪರ್ಧಿಸುವುದು ಹಾಗೂ ಕಾಂಗ್ರೆಸ್ -ಜೆಡಿಎಸ್‌ನಿಂದ ಸ್ಪರ್ಧಿಸುವ ಅಭ್ಯರ್ಥಿಗಳ ನಿದ್ದೆಕೆಡಿಸುವುದು ಖಚಿತ.


ಶಕ್ತಿ ರಾಜಕಾರಣದ ವರಸೆಗಳು ಸಜ್ಜನರನ್ನು ಹೇಗೆ ಮೂಲೆಗುಂಪು ಮಾಡುತ್ತದೆ ಎಂಬುದಕ್ಕೆ ಜಯಣ್ಣ ಒಂದು ನಿದರ್ಶನವಾಗಿದ್ದಾರೆ. ಅದು ಮುಳ್ಳಾಗಲಿ ಎಂಬುದು ಮಾನವಂತರ ಬಯಕೆ. ■



ಮಂಪರು ಪರೀಕ್ಷೆಯ ಮೂಲಕ ಬೇರೆಯವರ ಸುಳ್ಳು ಪತ್ತೆ ಹಚ್ಚಿದ ಈ 'ಸುಳ್ಳು ಪತ್ತೆ ರಾಣಿ'ಯ ಸಾಲುಸಾಲು ಸುಳ್ಳುಗಳೇ ಈಗ ಬಟಾಬಯಲಾಗಿ ನಿಂತಿವೆ. ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಕಾಂಟ್ರಾಕ್ಟ್ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಮಾಲಿನಿ ಪರ್ಮನೆಂಟ್ ಉದ್ಯೋಗಕ್ಕಾಗಿ ಫೋರ್ಜರಿ ಸರ್ಟಿಫಿಕೇಟ್‌ಗಳನ್ನು ಸಲ್ಲಿಸಿದ್ದು ಈಗ ಹೊರಬಿದ್ದಿರುವುದರಿಂದ ಸದನದಲ್ಲೂ ಗಲಾಟೆಯಾಗಿ ಡಿಸ್‌ಮಿಸ್ ಆಗಿದ್ದಾಳೆ. ಪರ್ಮನೆಂಟಾಗಿ ಗೇಟ್‌ಪಾಸ್ ತೆಗೆದುಕೊಂಡು ಫುಟ್‌ಪಾತ್ ಪಾಲಾಗಿರುವ ಮಾಲಿನಿಯೀಗ ಗಿನ್ನಿಸ್ ದಾಖಲೆಯಿಂದ ವಂಚಿತಗೊಂಡು ಮೈಪರಚಿಕೊಳ್ಳುತ್ತಿದ್ದಾಳೆ.

■ ಕುಮಾರ್ ಬುರಡಿಕಟ್ಟಿ

ಮಾಲಿನಿಯ ಮಾಲಿನ್ಯಗಾಥೆ!


and is a serious security risk for the entire State of Karnataka as already reported in the above references. Dr.Malini may therefore please be discharged from service for general suitability with immediate effect in the interest of safety and security of the people of Karnataka, proper functioning of the police department and the FSL and in order to uphold the morale of honest and sincere employees of FSL. This may also please be treated as a preliminary enquiry report against Dr.B.M.Mohan and

ಡಿಜಿಪಿ ಶ್ರೀಕುಮಾರ್‌ರವರ ವರದಿ...

8. Qualification-indicate from the Bachelor's degree onwards

Year	Examination	University	Class & Aggregate
1980	B. Sc.	BANGALORE	Ist CLASS & 65.5% ENCL 2
1982	IInd yr. M.A	BANGALORE	Ist CLASS & 55.3% App. IInd Class ENCL-3
1996	P.G DIPLOMA PSYCHOLOGICAL COUNSELING	MADRAS	Ist CLASS & 85%. ENCL-4

1980ರಲ್ಲೇ ಬಿಎಸ್ಸಿ ಮುಗಿಸಿರುವುದಾಗಿ ಬರೆದ ಅರ್ಜಿ...

1. Application for the post of ASSISTANT DIRECTOR. FORENSIC PSYCHOLOGY (Designation of the post should be written clearly)
2. Full name of the candidate MALINI. S (as mentioned in SSLC certificate/marks card)
3. Date of birth 12-05-64 (A copy of SSLC marks card as proof should be enclosed)
4. Father's Name SUBRAMANYAM. K.S
5. Marital Status MARRIED
6. Postal Address NO. 14/3, Ist MAIN ROAD, 2nd CROSS, BRAHMAPURA, RAMACHANDRAPURAM, BANGALORE-560021
7. Category to which belong (indicate by ✓)

SC	ST	Group I	2A	2B	3A	3B	GM
							✓

ಮಾಲಿನಿ ಹಾಕಿದ ಅರ್ಜಿಯಲ್ಲಿ ಜನ್ಮದಿನಾಂಕ....

Karnataka Secondary Education Examination Board

CERTIFICATE

ಎಸ್ಸೆಸ್ಸೆಲ್ಸಿ ಅಂಕಪಟ್ಟಿಯಲ್ಲಿ ಜನ್ಮದಿನಾಂಕ....

RESULTS

DT. OF BIRTH DY MTH YR 12 05 60 FIRST LANGUAGE PAPER I 1K 66 PAPER II 2K 30 SECOND 31E


ಜನ್ಮದಿನಾಂಕ ದಾಖಲೆಗಳಲ್ಲಿ ಜನ್ಮದಿನಾಂಕ....

ಈಕೆಯ ಹೆಸರು ಡಾ.ಎಸ್.ಮಾಲಿನಿ. ಮೊನ್ನೆ ಮೊನ್ನೆಯ ತನಕ ಬೆಂಗಳೂರಿನಲ್ಲಿರುವ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಸಹಾಯಕ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಳು. 1000ಕ್ಕೂ ಹೆಚ್ಚು ಮಂಪರು ಪರೀಕ್ಷೆಗಳನ್ನು, 1500ಕ್ಕೂ ಬ್ರೇನ್ ಮ್ಯಾಪಿಂಗ್‌ಗಳನ್ನು, 3000ಕ್ಕೂ ಹೆಚ್ಚು ಸುಳ್ಳುಪತ್ತೆ ಪರೀಕ್ಷೆಗಳನ್ನು ನಡೆಸಿದ್ದಳು. ಈ ಸಂಖ್ಯೆಗಳನ್ನು ಇನ್ನೂ ಹೆಚ್ಚಿಸಿ ಗಿನ್ನಿಸ್ ದಾಖಲೆ ಮಾಡಲು ಹೊರಟಿದ್ದಳು; ಪೊಲೀಸರು ತನಿಖೆಯ ಮೂಲಕ ಬಿಡಿಸಲಾಗದ ಅಪರಾಧ ಪ್ರಕರಣಗಳ ಕಗ್ಗಂಟುಗಳನ್ನು ಯಾವುದೇ ಸಾಕ್ಷಾಧಾರಗಳಿಲ್ಲದಿದ್ದಾಗ್ಯೂ ತಾನು ಮಂಪರು ಪರೀಕ್ಷೆಯ ಮೂಲಕ ಬಿಡಿಸಿದ್ದೇನೆ ಎಂದು ಹೆಮ್ಮೆಯಿಂದ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತಿದ್ದಳು.


ಬಹುಕೋಟಿ ಛಾಪಾ ಕಾಗದ ಹಗರಣದ ಪ್ರಮುಖ ಆರೋಪಿ ಅಬ್ದುಲ್ ಕರೀಮ್ ಲಾಲ್ ತೆಲಗಿ, ಮುಂಬೈಯನ್ನು ತಲ್ಲಣಗೊಳಿಸಿದ ಭೂಗತ ದೊರೆ ಅಬು ಸಲೀಂ, ಬಾಲಿವುಡ್ ತಾರೆ ಪ್ರೀತಿ ಜೈನ್, ಮುಂಬೈ ರೈಲು ಸ್ಫೋಟ ಮತ್ತು ಮಾಲೇಗಾಂವ್ ಸ್ಫೋಟಗಳ ಆರೋಪ ಹೊತ್ತಿರುವ ಭಯೋತ್ಪಾದಕರು, ಮಹಾರಾಷ್ಟ್ರದ ನಕ್ಸಲ್ ನಾಯಕ ಅರುಣ್ ಫೆರೆರಾ - ಹೀಗೆ ಘಟಾನುಘಟಿಗಳ ಮೇಲೆ ಮಂಪರು ಪರೀಕ್ಷೆ ನಡೆಸಿ ರಾಷ್ಟ್ರ ಮಟ್ಟದಲ್ಲಿ 'ಭಾರತದ ಮಂಪರು ಪರೀಕ್ಷೆಯ ರಾಣಿ' ಎನ್ನಿಸಿಕೊಂಡಿದ್ದಳು.

ಮಂಪರು ಪರೀಕ್ಷೆಯ ಮೂಲಕ ಬೇರೆಯವರ ಸುಳ್ಳು ಪತ್ತೆ ಹಚ್ಚಿದ ಈ 'ಸುಳ್ಳು ಪತ್ತೆ ರಾಣಿ'ಯ ಸಾಲುಸಾಲು ಸುಳ್ಳುಗಳೇ ಈಗ ಬಟಾಬಯಲಾಗಿ ನಿಂತಿವೆ. ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಕಾಂಟ್ರಾಕ್ಟ್ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಮಾಲಿನಿ ಪರ್ಮನೆಂಟ್ ಉದ್ಯೋಗಕ್ಕಾಗಿ ಫೋರ್ಜರಿ ಸರ್ಟಿಫಿಕೇಟ್‌ಗಳನ್ನು ಸಲ್ಲಿಸಿದ್ದು ಈಗ ಹೊರಬಿದ್ದಿರುವುದರಿಂದ ಸದನದಲ್ಲೂ ಗಲಾಟೆಯಾಗಿ ಡಿಸ್‌ಮಿಸ್ ಆಗಿದ್ದಾಳೆ. ಪರ್ಮನೆಂಟಾಗಿ ಗೇಟ್‌ಪಾಸ್ ತೆಗೆದುಕೊಂಡು ಫುಟ್‌ಪಾತ್ ಪಾಲಾಗಿರುವ ಮಾಲಿನಿಯೀಗ ಗಿನ್ನಿಸ್ ದಾಖಲೆಯಿಂದ ವಂಚಿತಗೊಂಡು ಮೈಪರಚಿಕೊಳ್ಳುತ್ತಿದ್ದಾಳೆ.

ಎಷ್ಟೇ ಜಟಿಲ ಅಪರಾಧ ಪ್ರಕರಣವಿದ್ದರೂ ಡಾ.ಮಾಲಿನಿ ಅದನ್ನು ಬಗೆಹರಿಸುತ್ತಾಳೆಂದು ಭಾರತದ ಎಲ್ಲಾ ರಾಜ್ಯಗಳ ಪೊಲೀಸರು ನಂಬಿದ್ದರು. ಅಥವಾ ಜನರನ್ನು ನಂಬಿಸಿದ್ದರು. ಎಷ್ಟರಮಟ್ಟಿಗೆ ಎಂದರೆ ಯಾವುದಾದರೊಂದು ಅಪರಾಧ ನಡೆದರೆ ಕನಿಷ್ಠ ಪ್ರಾಥಮಿಕ ತನಿಖೆಯನ್ನೂ ಮಾಡದೇ ನೇರವಾಗಿ ಮಂಪರು ಪರೀಕ್ಷೆ ನಡೆಸುವುದಕ್ಕೆ ಕೋರ್ಟಿನಿಂದ ಅನುಮತಿ ಪಡೆದುಕೊಂಡು ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯದ ಬಾಗಿಲಲ್ಲಿ ಮಾಲಿನಿಯ ದರ್ಶನಕ್ಕಾಗಿ ಕುಳಿತುಬಿಡುತ್ತಿದ್ದರು; ಭಾರತದ ಬೇರೆ ಬೇರೆ ನಗರಗಳಲ್ಲಿ ವಿಧಿವಿಜ್ಞಾನ ಪ್ರಯೋಗಾಲಯಗಳಿವೆಯಾದರೂ ಅಲ್ಲಿನ ವರದಿಗಳು ತೃಪ್ತಿದಾಯಕವಾಗಿಲ್ಲದಿದ್ದರೆ ಮತ್ತೊಮ್ಮೆ ಕೋರ್ಟಿನ ಅನುಮತಿ ಪಡೆದು ನೇರವಾಗಿ ಬೆಂಗಳೂರಿಗೆ ಬರುತ್ತಿದ್ದರು.




ತೆಲಗಿ


ಅಬುಸಲೇಂ

ಮಾಲಿನಿ ಪೊಲೀಸರಿಗೆ ಇಷ್ಟೊಂದು ಇಷ್ಟವಾಗಿದ್ದಕ್ಕೆ ಕಾರಣವೂ ಇತ್ತು. ಭಾರತದ ಬೇರೆ ಬೇರೆ ರಾಜ್ಯಗಳಲ್ಲಿರುವ ವಿಧಿವಿಜ್ಞಾನ ಪ್ರಯೋಗಾಲಯಗಳಲ್ಲಿನ ವರದಿಗಳು ಸತ್ಯಕ್ಕೆ ಹತ್ತಿರವಾಗಿರುತ್ತಿದ್ದವು. ಆದರೆ, ಬೆಂಗಳೂರಿನ ಮಾಲಿನಿಯ ವರದಿಗಳು ಪೊಲೀಸರ ಅನುಕೂಲಕ್ಕೆ ಹತ್ತಿರವಾಗಿರುತ್ತಿದ್ದವು. ಅಂದರೆ, ಆರೋಪಿಗಳ ಬಾಯಿಂದ ಪೊಲೀಸರು ಏನೆಲ್ಲಾ ಹೇಳಿಸಬೇಕೋ ಅದನ್ನೆಲ್ಲಾ ಮಂಪರು ಪರೀಕ್ಷೆಯ ನೆಪದಲ್ಲಿ ಮಾಲಿನಿಯಿಂದ ಹೇಳಿಸುತ್ತಿದ್ದರು. ಇನ್ನೂ ನೇರವಾಗಿ ಹೇಳಬೇಕೆಂದರೆ, ಪೊಲೀಸರಿಗೆ ಬೇಕಾದಂತೆ ವರದಿ ಬರೆದುಕೊಡುವಲ್ಲಿ ಮಾಲಿನಿ ನಿಸ್ಸೀಮಳಾಗಿದ್ದಳು. ಮಂಪರು ಪರೀಕ್ಷೆಗಾಗಲೀ, ಬ್ರೇನ್ ಮ್ಯಾಪಿಂಗ್ ಆಗಲೀ ಅಥವಾ ಸುಳ್ಳು ಪತ್ತೆ ವಿಧಾನಕ್ಕಾಗಲೀ ಯಾವುದೇ ವೈಜ್ಞಾನಿಕ ತಳಹದಿ ಇಲ್ಲ ಎಂಬುದು ಚೆನ್ನಾಗಿ ಗೊತ್ತಿದ್ದರೂ ಮಾಲಿನಿ ಮಂಪರು ಬರುವ ಇಂಜೆಕ್ಷನ್‌ಗಳನ್ನು ಕೊಟ್ಟು ಆರೋಪಿಗಳನ್ನು ಹಿಂಸಿಸುತ್ತಿದ್ದಳು.

ಈಗ ಆಕೆಗೆ ಗೇಟ್‌ಪಾಸ್ ದೊರಕುತ್ತಿದ್ದಂತೆಯೇ ವಿಧಿವಿಜ್ಞಾನ ಪ್ರಯೋಗಾಲಯದ ಪ್ರಾಮಾಣಿಕ ಉದ್ಯೋಗಿಗಳು, ಆಕೆಯಿಂದ ಮಂಪರು ಪರೀಕ್ಷೆಯ ಟಾರ್ಚರ್‌ಗೆ ಒಳಪಟ್ಟ ಬಲಿಪಶುಗಳು ಒಂದಿಷ್ಟು ನೆಮ್ಮದಿಯ ನಿಟ್ಟುಸಿರು ಬಿಟ್ಟಿರುವುದಂತೂ ಸತ್ಯ.

ಪ್ರಯೋಗಾಲಯಕ್ಕೆ ಕಾಲಿಟ್ಟಿದ್ದು ಹೇಗೆ?

ಮಾಲಿನಿ ತನ್ನ ವೃತ್ತಿಯನ್ನು ಪ್ರಾರಂಭಿಸಿದ್ದು ನಿಮ್ಹಾನ್ಸ್‌ನಲ್ಲಿ ಡಾ.ಸಿ.ಆರ್.ಮುಕುಂದನ್‌ರವರ ಸಹಾಯಕಿಯಾಗಿ. 1997ರ ಈ ಅವಧಿಯಲ್ಲಿಯೇ ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯದ ಡೈರೆಕ್ಟರ್ ಡಾ.ಬಿ.ಮೋಹನ್ ಆಕೆಗೆ ಪರಿಚಯವಾದರು. ಪರಿಚಯ ಸ್ನೇಹಕ್ಕೂ ತಿರುಗಿತು. ಎಂಥ ಸ್ನೇಹ ಎಂದರೆ ಆಕೆಯನ್ನು ನಿಮ್ಹಾನ್ಸ್‌ನಿಂದ ಕರೆದುಕೊಂಡು ಬಂದು ತಮ್ಮ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಸಹಾಯಕ ನಿರ್ದೇಶಕಿಯಾಗಿ ನೇಮಕ ಮಾಡಿಕೊಳ್ಳುವುದಕ್ಕೆ ಮುಂದಾದರು. ಆದರೆ, ಆಕೆಗೆ ಸೂಕ್ತವಾಗುವ ಹುದ್ದೆ ಅಲ್ಲಿಲ್ಲದ್ದರಿಂದ ಹೊಸ ಹುದ್ದೆಯೊಂದನ್ನು ಸೃಷ್ಟಿಸಿಯಾದರೂ ಸರಿ ಮಾಲಿನಿಯನ್ನು ಪ್ರಯೋಗಾಲಯಕ್ಕೆ ತಂದುಕೊಳ್ಳುವುದಕ್ಕೆ ಪ್ರಯತ್ನ ನಡೆಸಿದರು.

ಇದರ ಭಾಗವಾಗಿ ಅಪರಾಧ ಪತ್ತೆಯಲ್ಲಿ, ಸುಳ್ಳು ಪತ್ತೆಯಲ್ಲಿ ಹೊಸ ಹೊಸ ತಂತ್ರಜ್ಞಾನ ಅಳವಡಿಸುವ ಅವಶ್ಯಕತೆಯಿದೆಯೆಂದೂ, ಪ್ರಯೋಗಾಲಯದಲ್ಲಿ ಇದಕ್ಕಾಗಿ ವಿಧಿವಿಜ್ಞಾನ ವಿಭಾಗವೊಂದನ್ನು ತೆರೆಯಬೇಕೆಂದೂ, ಡಾ.ಮಾಲಿನಿಗೆ ಈ ವಿಚಾರದಲ್ಲಿ ಅಪಾರ ಪರಿಣತಿಯಿದೆಯೆಂದೂ, ಆಕೆಯನ್ನು ಈ ವಿಭಾಗದ ಸಹಾಯಕ ನಿರ್ದೇಶಕಿಯಾಗಿ ನೇಮಿಸಬೇಕೆಂದೂ ಹಾಡಿ ಹೊಗಳಿ ಸರ್ಕಾರಕ್ಕೆ, ಪೊಲೀಸ್ ಇಲಾಖೆಯ ನಿರ್ದೇಶಕರಿಗೆ ಶಿಫಾರಸ್ಸು ಮಾಡಿದರು. ಅದನ್ನೆಲ್ಲಾ ನಂಬಿದ ಸರ್ಕಾರ 1999ರಲ್ಲಿ ವಿಧಿವಿಜ್ಞಾನ ವಿಭಾಗವನ್ನು ತೆರೆಯಿತಲ್ಲದೇ ಅದರ ಸಹಾಯಕ ನಿರ್ದೇಶಕಿಯಾಗಿ ಮಾಲಿನಿಯನ್ನು ಒಂದು ವರ್ಷದ ಗುತ್ತಿಗೆ ಆಧಾರದಲ್ಲಿ ನೇಮಿಸಿತು.

ಒಂದು ವರ್ಷದ ಗುತ್ತಿಗೆ ಮುಗಿದ ಮೇಲೆ ಮಾಲಿನಿಯನ್ನು ಪ್ರಯೋಗಾಲಯದಿಂದ ಹೊರ ಕಳಿಸುವುದಕ್ಕೆ ಡಾ.ಮೋಹನ್‌ಗೆ ಇಷ್ಟವಿರಲಿಲ್ಲ. ಆದ್ದರಿಂದ ಪ್ರತೀ ವರ್ಷ ಗುತ್ತಿಗೆಯ ಅವಧಿ ಮುಗಿಯುತ್ತಿದ್ದಂತೆಯೇ ಮಾಲಿನಿಯ ಗುತ್ತಿಗೆಯನ್ನು ಮತ್ತೊಂದು ವರ್ಷಕ್ಕೆ ವಿಸ್ತರಿಸಬೇಕೆಂದು ಅವರು ಶಿಫಾರಸ್ಸು ಮಾಡುತ್ತಲೇ ಬಂದರು. ಅವರ ಶಿಫಾರಸ್ಸುಗಳಿಗೆ ಮನ್ನಣೆ ನೀಡಿದ ಸರ್ಕಾರ ಎಂಟು ಬಾರಿ ಮಾಲಿನಿಯ ಗುತ್ತಿಗೆಯ ಅವಧಿಯನ್ನು ವಿಸ್ತರಿಸುತ್ತಲೇ ಬಂದಿತ್ತು. ಕೊನೆಗೆ ಅವಳ ಗುತ್ತಿಗೆಯನ್ನು ಹೀಗೆ ನಿರಂತರವಾಗಿ ವಿಸ್ತರಿಸಲು ನಿರಾಕರಿಸಿದ ಸರ್ಕಾರ ಗುತ್ತಿಗೆ ಆಧಾರದಲ್ಲಿ ನೇಮಕವಾಗಿರುವ ವ್ಯಕ್ತಿಯೊಬ್ಬರನ್ನು ಕಾಯಂಗೊಳಿಸುವುದು ಸುಪ್ರೀಮ್ ಕೋರ್ಟಿನ ನಿರ್ದೇಶನಕ್ಕೆ ವಿರುದ್ಧವಾಗಿರುವುದರಿಂದ ಆ ಹುದ್ದೆಗೆ ಸೂಕ್ತ

▶▶▶

ಮಂಪರು ಪರೀಕ್ಷೆ ಬೇಕೆ?

ಆರೋಪಿಗಳ ಮೇಲಿರುವ ಆರೋಪವನ್ನು ಪತ್ತೆ ಹಚ್ಚುವುದಕ್ಕಾಗಿ ಇತ್ತೀಚೆಗೆ ಪೊಲೀಸರು ಹಿಂದೆಂದಿಗಿಂತಲೂ ಹೆಚ್ಚಾಗಿ ಮಂಪರು ಪರೀಕ್ಷೆಯ ಮೊರೆ ಹೋಗುತ್ತಿದ್ದಾರೆ. ಅಪರಾಧವೊಂದರ ಮರ್ಮವನ್ನು ಭೇದಿಸುವುದಕ್ಕೆ ಹಲವಾರು ದಿಕ್ಕಿನಿಂದ ತನಿಖೆ ನಡೆಸುವ ಕಷ್ಟವನ್ನು ತೆಗೆದುಕೊಳ್ಳಲು ಸಿದ್ಧರಿಲ್ಲದ ಪೊಲೀಸರು ಮಂಪರು ಪರೀಕ್ಷೆಯನ್ನು ಒಂದು ಒಳದಾರಿಯನ್ನಾಗಿ ಕಂಡುಕೊಂಡಿದ್ದಾರೆ. ಮಂಪರು ಪರೀಕ್ಷೆಯ ವೇಳೆಯಲ್ಲಿ ಆರೋಪಿಯು ಹೇಳಿದ್ದನ್ನೇ ನ್ಯಾಯಾಲಯದಲ್ಲಿ ಸಾಕ್ಷಿಯಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂದು ಸ್ವತಃ ಕೋರ್ಟುಗಳೇ ಹೇಳಿದ್ದರೂ ಮಂಪರು ಪರೀಕ್ಷೆಯು ಪ್ರಕರಣವೊಂದರ ತನಿಖೆಯಲ್ಲಿ ಸಹಕಾರಿಯಾಗುತ್ತದೆ ಎಂಬ ಮೊಂಡು ವಾದವನ್ನಿಟ್ಟುಕೊಂಡು ಪೊಲೀಸರು ಈ ಪರೀಕ್ಷಾ ವಿಧಾನವನ್ನು ಅನುಸರಿಸುತ್ತಿದ್ದಾರೆ.

ಬಹುಕೋಟಿ ಛಾಪಾ ಕಾಗದ ಹಗರಣದ ಪ್ರಮುಖ ಆರೋಪಿ ಕರೀಮ್ ಲಾಲ್ ತೆಲಗಿಯನ್ನು ಮೊದಲ ಬಾರಿಗೆ ಮಂಪರು ಪರೀಕ್ಷೆಗೆ ಒಳಪಡಿಸುವ ಮೂಲಕ ಪ್ರಾರಂಭವಾದದ್ದು ಈವೊತ್ತು ಚಿಕ್ಕಪುಟ್ಟ ಅಪರಾಧಿಗಳನ್ನೂ ಈ ಪರೀಕ್ಷೆಗೆ ಒಳಪಡಿಸುವ ತನಕ ಹೋಗಿನಿಂತಿದೆ.

ಮಂಪರು ಪರೀಕ್ಷೆಗಾಗಲೀ, ಬ್ರೇನ್ ಮ್ಯಾಪಿಂಗ್‌ಗೆ ಆಗಲೀ ಅಥವಾ ಸುಳ್ಳು ಪತ್ತೆ ವಿಧಾನಕ್ಕಾಗಲೀ ಯಾವುದೇ ವೈಜ್ಞಾನಿಕ ತಳಹದಿ ಇಲ್ಲ. ಅನೇಕ ಪಾಶ್ಚಿಮಾತ್ಯ ದೇಶಗಳಲ್ಲಿ ಮೊದಮೊದಲು ಈ ಮಂಪರು ಪರೀಕ್ಷೆಯನ್ನು ಬಳಸಲಾಯಿತಾದರೂ ನಂತರದ ದಿನಗಳಲ್ಲಿ ಅದು ಟಾರ್ಚರ್‌ನ (ಚಿತ್ರಹಿಂಸೆಯ) ಆಧುನಿಕ ರೂಪ ಎಂಬುದನ್ನು, ಅದಕ್ಕೆ ಯಾವುದೇ ವೈಜ್ಞಾನಿಕ ತಳಹದಿ ಇಲ್ಲ ಎಂಬುದನ್ನು, ಈ ಪರೀಕ್ಷೆಯಿಂದ ಕಂಡುಕೊಳ್ಳುವ ಅಂಶಗಳು ನಂಬಲರ್ಹವಲ್ಲ ಎಂಬುದನ್ನು ಒಪ್ಪಿಕೊಂಡು ತಮ್ಮ ತಮ್ಮ ದೇಶಗಳಲ್ಲಿ ಇವುಗಳನ್ನು ನಿಷೇಧಿಸಿವೆ. ಆದರೆ ನಮ್ಮ ದೇಶದಲ್ಲಿ ಅದೆಷ್ಟೋ ಬಾರಿ ನ್ಯಾಯಾಲಯಗಳೇ ಮಂಪರು ಪರೀಕ್ಷೆ ನಡೆಸಬೇಕೆಂದು ಪೊಲೀಸರಿಗೆ ಸೂಚಿಸಿವೆ!

ಬಾಂಬೆ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಹೊಸ್ಪೆಟ್ಟು ಸುರೇಶ್ ಅವರೇ "ಮಂಪರು ಪರೀಕ್ಷೆ ಎಂಬುದೇ ಚಿತ್ರಹಿಂಸೆಯ ಒಂದು ವಿಧಾನ. ಸುದ್ದಿವಾಹಿನಿಯೊಂದು ಈ ಪರೀಕ್ಷೆಯ ವಿವರಗಳನ್ನು ಬಿತ್ತರಿಸಿದೆ. ಇದು ಚಿತ್ರಹಿಂಸೆಯ ಸಾರ್ವಜನಿಕ ಪ್ರದರ್ಶನ. ಇದಕ್ಕೆ ಕೋರ್ಟುಗಳು ಅನುಮತಿ ನೀಡುತ್ತಿರುವುದು ಸರಿಯಲ್ಲ" ಎಂದು ಪ್ರತಿಭಟಿಸಿದ್ದಾರೆ. ಆರೋಪಿಯೊಬ್ಬನು ಸುಳ್ಳು ಹೇಳಲೇಬೇಕೆಂದು ತೀರ್ಮಾನಿಸಿಬಿಟ್ಟರೆ ಮಂಪರು ಪರೀಕ್ಷೆಯ ವೇಳೆಯಲ್ಲೂ ಆತ ಸುಳ್ಳು ಹೇಳುವುದಕ್ಕೆ ಸಾಧ್ಯವಿದೆ ಎಂದು ಪ್ರಖ್ಯಾತ ಮನೋವೈದ್ಯ ಡಾ. ಅನಿರುದ್ ಕಾಲಾ ಕೂಡ ಅಭಿಪ್ರಾಯಪಟ್ಟಿದ್ದಾರೆ.

"ಮಂಪರು ಪರೀಕ್ಷೆ ಎಂಬುದು ದೇಶಕ್ಕೆ ಮಾಡುತ್ತಿರುವ ಮೋಸ. ಅದನ್ನು ವೈಜ್ಞಾನಿಕವಾಗಲೀ, ನೈತಿಕವಾಗಲೀ ಸಮರ್ಥಿಸಲಾಗುವುದಿಲ್ಲ" ಎಂದು ರಾಜೀವ್ ಗಾಂಧಿ ಹತ್ಯಾ ಪ್ರಕರಣವನ್ನು ಬಿಡಿಸುವುದರಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದ ಮಾಜಿ ವಿಧಿವಿಜ್ಞಾನ ವಿಜ್ಞಾನಿ ಡಾ. ಚಂದ್ರಶೇಖರನ್ ಅಭಿಪ್ರಾಯಪಡುತ್ತಾರೆ. "ನಾರ್ಕೋ ಅನಾಲಿಸಿಸ್ ಅನ್ನು ಮನೋರೋಗಿಗಳಿಗೆ ಚಿಕಿತ್ಸೆ ನೀಡುವುದಕ್ಕಾಗಿ ಬಳಸಿದರೆ ಅದರಿಂದ ರೋಗಿಯ ರೋಗವನ್ನು ಗುಣಪಡಿಸುವುದಕ್ಕೆ ಅನುಕೂಲವಾಗುತ್ತದೆ. ಆದರೆ, ಅದನ್ನು ಪ್ರಕರಣದ ತನಿಖೆಯ ಹೆಸರಿನಲ್ಲಿ ಆರೋಗ್ಯವಂತ ವ್ಯಕ್ತಿಯ ಮೇಲೆ ಪ್ರಯೋಗಿಸಿದರೆ ಒಳ್ಳೆಯದಕ್ಕಿಂತ ಕೆಟ್ಟದ್ದೇ ಜಾಸ್ತಿಯಾಗುತ್ತದೆ" ಎಂದು ಹೆಸರಾಂತ ವೈದ್ಯಕೀಯ ಪತ್ರಿಕೆಯ ಸಂಪಾದಕ ಡಾ. ಅಮರ್ ಜೇಸಾನಿಯವರು ಹೇಳುತ್ತಾರೆ.

ಆದರೂ, ನಮ್ಮ ದೇಶದಲ್ಲಿ ಮಾತ್ರ ಅವುಗಳನ್ನು ಯಾವ ಅಡೆತಡೆಯೂ ಇಲ್ಲದೇ ಮಾಡಲಾಗುತ್ತಿದೆ. ವಾಸ್ತವದಲ್ಲಿ ಇದು ನೈತಿಕ ಪ್ರಶ್ನೆ ಮಾತ್ರವಾಗಿರದೇ ಸಂವಿಧಾನಾತ್ಮಕ ಪ್ರಶ್ನೆ ಕೂಡ ಹೌದು. ಏಕೆಂದರೆ, ತನ್ನ ವಿರುದ್ಧವೇ ತಾನು ಸಾಕ್ಷಿ ಹೇಳುವಂತೆ ಒತ್ತಾಯಿಸುವುದು ಸಂವಿಧಾನ ವಿರೋಧಿಯಾಗುತ್ತದೆ. ಭಾರತೀಯ ದಂಡ ಸಂಹಿತೆ ಮತ್ತು ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಆರೋಪಿಯೊಬ್ಬನಿಗೆ ತನ್ನನ್ನು ಸಮರ್ಥಿಸಿಕೊಳ್ಳುವ ಹಕ್ಕು ಇರುತ್ತದೆ. ಆದರೆ, ಮಂಪರು ಪರೀಕ್ಷೆ ಈ ಹಕ್ಕನ್ನು ಕಿತ್ತುಕೊಳ್ಳುತ್ತದೆ.

ಹೋಗಲಿ, ಈ ಪರೀಕ್ಷೆಯಿಂದ ತನಿಖೆಗೆ ಏನಾದರೂ ಸಹಾಯವಾಗುತ್ತದೆಯೇ ಎಂದರೆ ಅದೂ ಇಲ್ಲ. ಅವತ್ತು ತೆಲಗಿಯನ್ನು ಮಂಪರು ಪರೀಕ್ಷೆಗೆ ಒಳಪಡಿಸುವುದಕ್ಕೆ ಮುತುವರ್ಜಿ ವಹಿಸಿದ ಪೊಲೀಸ್ ಅಧಿಕಾರಿ ಆರ್. ಶ್ರೀಕುಮಾರ್ ಅವರನ್ನು (ನಂತರ ಅವರು ಕರ್ನಾಟಕ ಪೊಲೀಸ್ ಮಹಾನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು) ಮಂಪರು ಪರೀಕ್ಷೆಯಿಂದ ನಿಮ್ಮ ತನಿಖೆಯಲ್ಲಿ ಎಷ್ಟು ಉಪಯೋಗವಾಯಿತು ಎಂದು ಕೇಳಿದರೆ ಅವರ ಬಾಯಿಂದ ಉತ್ತರವೇ ಹೊರಡಲಿಲ್ಲ.

ಈ ಪರೀಕ್ಷೆ ಎಳ್ಳಷ್ಟೂ ಉಪಯೋಗಕಾರಿಯಲ್ಲ ಎಂಬುದಕ್ಕೆ ಹಲವಾರು ಉದಾಹರಣೆಗಳನ್ನು ಕೊಡಬಹುದು. ರಾಜ್‌ಕುಮಾರ್ ಅವರನ್ನು ಬಿಡುಗಡೆ ಮಾಡುವುದಕ್ಕೆ ವೀರಪ್ಪನ್ ತೆಗೆದುಕೊಂಡ ಒತ್ತೆ ಹಣವನ್ನು ಎಲ್ಲಿ ಬಚ್ಚಿಟ್ಟಿದ್ದಾನೆ ಎಂಬುದನ್ನು ತಿಳಿದುಕೊಳ್ಳಲು ವೀರಪ್ಪನ್ ಸಹಚರರನ್ನು ಮಂಪರು ಪರೀಕ್ಷೆಗೆ ಒಳಪಡಿಸಲಾಯಿತು. ಆದರಿಂದ ಪೊಲೀಸರಿಗೆ ವಿಶೇಷ ಮಾಹಿತಿಗಳೇನೂ ಸಿಗಲಿಲ್ಲ. ಗೋಧ್ರಾ ಹತ್ಯಾಕಾಂಡದ ಆರೋಪಿಗಳನ್ನು, ಮುಂಬೈ ರೈಲು ಸ್ಫೋಟಗಳ ಆರೋಪಿಗಳನ್ನು, ಆರುಷಿ ಹತ್ಯಾ ಆರೋಪಿಗಳನ್ನು, ಅಬು ಸೇಲಂ ಎಂಬ ಭೂಗತ ಕ್ರಿಮಿಯನ್ನು ಮಂಪರು ಪರೀಕ್ಷೆಗೆ ಒಳಪಡಿಸಲಾಯಿತಾದರೂ ಅವರಿಂದಲೂ ಅಪರಾಧಕ್ಕೆ ಸಂಬಂಧಿಸಿದಂತೆ ವಿಶೇಷ ಮಾಹಿತಿಯೇನೂ ಸಿಗಲಿಲ್ಲ.

...ನನ್ನು ಪರ್ಮನೆಂಟಾಗಿ
...ಳಬೇಕೆಂದು ಪೊಲೀಸ್
ನಿರ್ದೇಶನ ಕೊಟ್ಟಿತು.
... ಸರ್ಕಾರಿ ಹುದ್ದೆಗಳಿಗಾಗಿ
... ನೇಮಕಾತಿಗಳಂತೆ ಇದನ್ನೂ
... ನಾಲಾಯಕ್ ಮಾಲಿನಿ
...ನ ಪ್ರಯೋಗಾಲಯದಿಂದ
...ಹೊರಬೀಳುತ್ತಿದ್ದಳು. ಆದರೆ,
... ಬಿಟ್ಟುಕೊಡಲು ಸಿದ್ಧನಿಲ್ಲದ
...ಸ್ನೇಹಿತ, ಪ್ರಯೋಗಾಲಯದ
... ಮೋಹನ್ ಅದಕ್ಕೆ ಅವಕಾಶ
... ಮಾಡಬಾರದ
...ನ್ನು ಮಾಡಿ ಈ ಹುದ್ದೆಯ
...ಗಾಗಿಯೇ ಹೊಸದೊಂದು
...ನೇಮಕಾತಿ ಸಮಿತಿ
...ಳ್ಳುವಂತೆ, ಅದರಲ್ಲಿ
...ಬ್ಬ ಸದಸ್ಯನಾಗಿರುವಂತೆ
...ಳ್ಳುವಲ್ಲಿ ಯಶಸ್ವಿಯಾದರು.
...ಕೆ, ಮಾಲಿನಿಯನ್ನು
...ಮಾಡಿಕೊಳ್ಳುವುದಕ್ಕೆ
...ವಾಗುವಂತೆ ನೇಮಕಾತಿ
...ಗಳನ್ನೇ ತಿದ್ದುಪಡಿ
...ಟ್ಟರು.
...ತುಕೊಂಡಂತೆ, ಈ
... ನೇಮಕಾತಿಗಾಗಿ
...ಪೊಲೀಸ್
...ರ್ದೇಶಕ
...ಶ್ರೀನಿವಾಸನ್, ಎಡಿಜಿಪಿ
... ಭರಣಿ,
...ಾಲಯದ ನಿರ್ದೇಶಕ
... ಮತ್ತು ಸಿಎಓ
...ರಯ್ಯ ಎಂಬ ನಾಲ್ಕು
...ಮಿತಿಯೊಂದು
...ಂಡಿತು. ಹುದ್ದೆಯ
...ತಿಗಾಗಿ ಜಾಹಿರಾತು
... ಶಾಸ್ತ್ರವನ್ನು
...ದರಿಂದ
...ತುದ್ದೂ
...ದಂತೆ ಎರಡು
... ಬಂದಿದ್ದವು.
...ದ ಬಗ್ಗೆಯಾಗಲೀ,
... ಪರೀಕ್ಷೆ, ಬ್ರೇನ್
...ಗ್, ಸುಳ್ಳುಪತ್ತೆಯಂಥ ವಿಧಾನಗಳ
...ಗಲೀ ಸರಿಯಾದ ಜ್ಞಾನವಿರದ
...ಸನ್ ಮತ್ತು ಭರಣಿಗಳು ಮೋಹನ್
... ಶಿಫಾರಸ್ಸುಗಳನ್ನು, ಮಾಲಿನಿಯ 'ಅಪಾರ
...ಬಗ್ಗೆ ಅವರು ಕೊಂಡಾಡಿದ ರೀತಿಯನ್ನು
...ಅವಳನ್ನೇ ಆಯ್ಕೆ ಮಾಡಿಬಿಟ್ಟರು. ನಂತರ
...ಂಟರ್‌ವ್ಯೂನಲ್ಲೂ ಈ ಸಮಿತಿ ಮಾಲಿನಿಗೆ
...ಹತ್ತೂ ಅಂಕಗಳನ್ನು ನೀಡಿತು! ಅಷ್ಟೇ ಏಕೆ,
...ಂಟು ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ
...ಾಡಿದ ಮಾಲಿನಿಗೆ ಆ ಎಂಟೂ
...ಗೆ ಅನ್ವಯವಾಗುವಂತೆ ಸಂಬಳವನ್ನೂ
...ಡಿತು! ಸರ್ಕಾರಿ
...ಗಳ ಪ್ರಕಾರ ಗುತ್ತಿಗೆ
...ಲ್ಲಿ ಕಾರ್ಯ
...ತ್ತಿರುವ ಉದ್ಯೋಗಿ
...ಈ ರೀತಿ ಕಾಯಂ
...ವಂತಿಲ್ಲ. ಆದರೆ,
...ರು ಮಹಿಮೆ,
...ನ ಲೀಲೆಗಳಲ್ಲಿ ಅವೆಲ್ಲಾ
...ಗಿ ಹೋಗಿದ್ದವು.

...ಯಸ್ಸು 47
...ಲ್ಲಿಪಂತೆ,
...43 ಅಂತೆ!

...ಜ್ಞಾನ ಪ್ರಯೋಗಾಲಯದ ಡೈರೆಕ್ಟರ್
... ಮಾಲಿನಿಯನ್ನು ನೇಮಿಸಿಕೊಳ್ಳುವುದಕ್ಕೆ
... ನೀತಿ-ನಿಯಮಾವಳಿಗಳನ್ನೇ
...ಳಿಸಿದ್ದರೂ ಒಂದು ವಿಚಾರದಲ್ಲಿ ಮಾತ್ರ
...ಸಿಕ್ಕಿಹಾಕಿಕೊಳ್ಳಬಹುದಾದ ಕೆಲಸ
.... ಅದೇನೆಂದರೆ, ಈ ಹುದ್ದೆಯ
...ತಿಯ ವಿಚಾರ. ಮಾಲಿನಿ ಈ
... ಅರ್ಜಿ ಹಾಕುವಾಗ ಆಕೆಗೆ ಆಗಲೇ
... ವಯಸ್ಸಾಗಿತ್ತು, ಆದರೆ, ಈ ಹುದ್ದೆಯ
... 40 ವರ್ಷಗಳು. ಮೋಹನ್



ಮಾಲಿನಿಗಾಗಿಯೇ ಬಹಳ ಕಸರತ್ತು ನಡೆಸಿ ಆ ವಯೋಮಿತಿಯನ್ನು 45 ವರ್ಷಗಳಿಗೆ ವಿಸ್ತರಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ, ಅದಕ್ಕಿಂತಲೂ ಮಾಲಿನಿ ಎರಡು ವರ್ಷ ದೊಡ್ಡವಳಾಗಿದ್ದರು. ಆಗ ಬೇರೆ ದಾರಿಯಿಲ್ಲದೇ 47ರ ಹರೆಯದ ಮಾಲಿನಿಯನ್ನು 43ರ ವಯಸ್ಸಿನವಳಾಗಿ ಬಿಂಬಿಸುವ ದಾಖಲೆಯನ್ನು ಸೃಷ್ಟಿಸುವುದೊಂದೇ ಅವರಿಗುಳಿದ ದಾರಿಯಾಗಿತ್ತು. ಅದನ್ನೇ ಮಾಡಿದರು.

ಮಾಲಿನಿ ಈ ಹುದ್ದೆಗಾಗಿ 01.06.2007ರಲ್ಲಿ ಸಲ್ಲಿಸಿರುವ ಅರ್ಜಿಯಲ್ಲಿ ತನ್ನ ಜನ್ಮ ದಿನಾಂಕ 12.05.1964 ಎಂದು ನಮೂದಿಸಿದ್ದಾಳೆ. ಜನ್ಮ ದಿನಾಂಕದ ದೃಢೀಕರಣಕ್ಕಾಗಿ ಆಕೆ ಅರ್ಜಿಯೊಂದಿಗೆ ಲಗತ್ತಿಸಿರುವ ಎಸ್‌ಎಸ್‌ಎಲ್‌ಸಿ ಮಾರ್ಕ್ಸ್‌ಕಾರ್ಡ್‌ನಲ್ಲೂ ಇದೇ ಜನ್ಮ ದಿನಾಂಕವಿದೆ. ಆದರೆ, ಆಕೆಯ ಪದವಿ ಮಾರ್ಕ್ಸ್‌ಕಾರ್ಡ್ ಪ್ರಕಾರ ಬೆಂಗಳೂರು ವಿಶ್ವವಿದ್ಯಾಲಯದಿಂದ ಆಕೆ ಡಿಗ್ರಿ ಪಾಸ್ ಮಾಡಿದ ವರ್ಷ 1980. ಅಂದರೆ, ಆಕೆಯ ದಾಖಲೆಗಳ ಪ್ರಕಾರವೇ ಹೋಗುವುದಾದರೆ 1964ರಲ್ಲಿ ಹುಟ್ಟಿದ ಮಾಲಿನಿ, 1980ರಲ್ಲಿ ಡಿಗ್ರಿ ಪಾಸು ಮಾಡಿದಳೆಂದರೆ ಆಗ ಅವಳ ವಯಸ್ಸು ಕೇವಲ 16 ವರ್ಷ! ಅಂದರೆ, ಆಕೆ ಪಿಯುಸಿಯನ್ನು 13ನೇ ವರ್ಷದಲ್ಲಿ ಪಾಸ್ ಮಾಡಿದ್ದಾಳೆ ಎಂದಾಯಿತು (ಡಿಗ್ರಿ ಕೋರ್ಸಿಗಾಗಿನ ಮೂರು ವರ್ಷಗಳನ್ನು ಕಳೆದರೆ). ಅಂತೆಯೇ, ಆಕೆ 11 ವರ್ಷದವಳಿದ್ದಾಗ ಎಸ್‌ಎಸ್‌ಎಲ್‌ಸಿ ಪಾಸ್ ಮಾಡಿರಬೇಕು! ಸಾಮಾನ್ಯರಾದರೆ 16 ವರ್ಷಕ್ಕೆ ಎಸ್‌ಎಸ್‌ಎಲ್‌ಸಿ, 18 ವರ್ಷಕ್ಕೆ ಪಿಯುಸಿ ಹಾಗೂ 21 ವರ್ಷಕ್ಕೆ ಡಿಗ್ರಿ ಮುಗಿಸುತ್ತಾರೆ. ಮಾಲಿನಿಯಂಥ ಅಸಾಮಾನ್ಯಳಾದರೆ 16 ವರ್ಷಕ್ಕನೇ ಎಲ್ಲವನ್ನೂ ಮುಗಿಸಿ ಸಿಕ್ಕಿಹಾಕಿಕೊಳ್ಳುತ್ತಾರೆ!

ಈ ಫೋರ್ಜರಿಯ ತನಿಖೆ ನಡೆಸಿದ ಈ ಹಿಂದಿನ ಪೊಲೀಸ್ ಮಹಾನಿರ್ದೇಶಕ ಶ್ರೀಕುಮಾರ್, ಆಕೆ ಹೇಗೆ ಸುಳ್ಳು ದಾಖಲಾತಿಗಳನ್ನು ಕೊಟ್ಟಿದ್ದಾಳೆ ಎಂಬುದನ್ನೇ ನೈಜ ದಾಖಲಾತಿಗಳ ಮೂಲಕ ವಿವರಿಸಿ ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ.




ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮಂಡಳಿಯ ದಾಖಲೆಗಳ ಪ್ರಕಾರ ಆಕೆಯ ಸರಿಯಾದ ಜನ್ಮ ದಿನಾಂಕ 12.05.1960. ಇದರ ಪ್ರಕಾರ ಹೋಗುವುದಾದರೆ 2007ರಲ್ಲಿ ಸಹಾಯಕ ನಿರ್ದೇಶಕಿಯ ಹುದ್ದೆಗೆ ಅರ್ಜಿಹಾಕುವ ಹೊತ್ತಿಗೆ ಆಕೆಯ ವಯಸ್ಸು 47 ಆಗುತ್ತದೆ. ಅದು ವಯೋಮಿತಿಗಿಂತ ಜಾಸ್ತಿಯಾಗಿದ್ದರಿಂದ ಆಕೆಯ ಅರ್ಜಿಯೇ ತಿರಸ್ಕೃತಗೊಳ್ಳುತ್ತಿತ್ತು. ಆದ್ದರಿಂದಲೇ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯನ್ನು ತಿದ್ದಿ ತನಗಿನ್ನೂ ನಲವತ್ತೆರಡು ಎಂದು ಸಾಬೀತುಪಡಿಸಲು ಹೊರಟಿದ್ದಳು., ಅರ್ಜಿ ಹಾಕುವಾಗ ಜೆರಾಕ್ಸ್ ಪ್ರತಿಗಳನ್ನು ಗೆಜೆಟೆಡ್ ಸ್ಥಾಯಿಯ ಅಧಿಕಾರಿಯಿಂದ ದೃಢೀಕರಿಸಬೇಕು. ಅವಳ ಈ ಫೋರ್ಜರಿ ಸರ್ಟಿಫಿಕೇಟ್‌ನ ಜೆರಾಕ್ಸ್ ಪ್ರತಿಗಳ ಮೇಲೆ ಸಹಿ ಹಾಕಿ ದೃಢೀಕರಿಸಿಕೊಟ್ಟ ಮಹಾಶಯನೆಂದರೆ ಬೆಂಗಳೂರು ವಿಶ್ವವಿದ್ಯಾನಿಲಯದ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಡಾ.ಬಿ.ಕೆ.ಮುರಳೀಧರ. ಈತ ಬೇರಾರೂ ಅಲ್ಲ, ಮಾಲಿನಿಯ ಸಾಕ್ಷಾತ್ ಗಂಡ! ಹತ್ತಿರದ ಸಂಬಂಧಿಗಳ ದಾಖಲಾತಿಗಳನ್ನು ದೃಢೀಕರಿಸುವುದು ನಿಯಮಬಾಹಿರ ಎಂದು ಗೊತ್ತಿದ್ದೂ ಮುರಳೀಧರ ವಿಧಿವಿಜ್ಞಾನ ಪ್ರಯೋಗಾಲಯದ ಮೋಹನನ ಸನ್ನಿಧಿಯಲ್ಲಿ ಹೆಂಡತಿಗೊಂದು ಶಾಶ್ವತ ಪೀಠ ದೊರಕಿಸುವುದಕ್ಕಾಗಿ ಸಹಿ ಹಾಕಿಕೊಟ್ಟಿದ್ದಾನೆ. ಅಂತೂ ಮುರಳಿ-ಮೋಹನರ ಲೀಲೆಯಿಂದಾಗಿ ಮಾಲಿನಿ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ನೇಮಕವಾಗಿಯೇ ಬಿಟ್ಟಳು.


ಮಾಲಿನಿಯ ಮಾಲಿನ್ಯಗಾಥೆ ಇಷ್ಟಕ್ಕೇ ನಿಲ್ಲುವುದಿಲ್ಲ. ಕೆಸಿಎಸ್ ನಿಯಮಾವಳಿಗಳ ಪ್ರಕಾರ ಸರ್ಕಾರಿ ನೌಕರರು ಇನ್ಯಾವುದೇ ಖಾಸಗೀ ಸಂಸ್ಥೆಗಳಲ್ಲಿ ಅರೆಕಾಲಿಕರಾಗಿ ಉದ್ಯೋಗ ಮಾಡುವಂತಿಲ್ಲ. ಆದರೆ, ಮಾಲಿನಿ ಒಂದೆಡೆ ವಿಧಿವಿಜ್ಞಾನ ಪ್ರಯೋಗಾಲಯದ ಸಹಾಯಕ ನಿರ್ದೇಶಕಿಯಾಗಿದ್ದುಕೊಂಡೇ ಖಾಸಗೀ ಸಂಸ್ಥೆಗಳಲ್ಲೂ ಅರೆಕಾಲಿಕಳಾಗಿ ಕಾರ್ಯನಿರ್ವಹಿಸುತ್ತಿದ್ದಳು. ಈಗಲೂ ಬೇಕಾದರೆ ಬೆಂಗಳೂರಿನ ರಾಜಾಜಿನಗರದ ನಾಲ್ಕನೇ ಬ್ಲಾಕ್‌ನಲ್ಲಿರುವ 'ಸ್ಪಂದನ' ನರ್ಸಿಂಗ್ ಹೋಮ್‌ಗೆ ಹೋಗಿ ನೋಡಿ. ನರ್ಸಿಂಗ್ ಹೋಮ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾಕ್ಟರ್, ತಜ್ಞರ ಪಟ್ಟಿಯನ್ನು ಅಲ್ಲಿ ಹಾಕಲಾಗಿದ್ದು ಅದರಲ್ಲಿ ಮೊದಲನೆಯ ಹೆಸರು ಆ ನರ್ಸಿಂಗ್ ಹೋಮ್‌ನ ಮುಖ್ಯಸ್ಥ ಡಾ. ಟಿ.ಎಸ್. ಚಂದ್ರಶೇಖರ್ ಹೆಸರಾಗಿದ್ದರೆ ಎರಡನೆಯ ಹೆಸರೇ ಡಾ.ಮಾಲಿನಿಯದ್ದು! ಅದೂಅಲ್ಲದೇ ಸರ್ಕಾರಿ ದಾಖಲೆಗಳ ಪ್ರಕಾರ ಆಕೆ ಎಂಎ ಮುಗಿಸಿದ್ದಾಳಾದರೂ ನರ್ಸಿಂಗ್ ಹೋಮ್‌ನಲ್ಲಿ ಅವಳ ಹೆಸರಿನ ಮುಂದೆ ಎಮ್‌ಎಸ್‌ಸಿ, ಎಂಫಿಲ್, ಪಿಎಚ್‌ಡಿ ಎಂದೆಲ್ಲಾ ಸಿಕ್ಕಸಿಕ್ಕ ಡಿಗ್ರಿಗಳನ್ನೆಲ್ಲಾ ಹಾಕಿಕೊಂಡಿದ್ದಾಳೆ.

ಈ ಪ್ರಕರಣದ ಪ್ರಾಥಮಿಕ ತನಿಖೆ ನಡೆಸಿರುವ ಈ ಹಿಂದಿನ ಪೊಲೀಸ್ ಮಹಾನಿರ್ದೇಶಕ ಶ್ರೀಕುಮಾರ್ ಸರ್ಕಾರಕ್ಕೆ ವರದಿ ಸಲ್ಲಿಸಿ "ವಿಧಿವಿಜ್ಞಾನ ಪ್ರಯೋಗಾಲಯದ ಸಹಾಯಕ ನಿರ್ದೇಶಕಿಯಂಥ ಸೂಕ್ಷ್ಮಾತಿಸೂಕ್ಷ್ಮ ಹುದ್ದೆಯಲ್ಲಿದ್ದುಕೊಂಡು, ಭಯೋತ್ಪಾದಕರು, ಮಾಫಿಯಾ ಡಾನ್‌ಗಳು, ಸಮಾಜವಿರೋಧಿ ವ್ಯಕ್ತಿಗಳ ಮೇಲೆ ನಾರ್ಕೋ ಅನಾಲಿಸಿಸ್ ಮಾಡುವ ಗಂಭೀರವಾದ ಮತ್ತು ಜವಾಬ್ದಾರಿಯುತ ಕರ್ತವ್ಯದಲ್ಲಿ ಮಾಲಿನಿಯಂಥವರು ಇರುವುದು ಇಡೀ ಕರ್ನಾಟಕದ ಭದ್ರತಾ ದೃಷ್ಟಿಯಿಂದಲೂ ಅಪಾಯಕಾರಿಯಾಗಿದ್ದು ಅವರನ್ನು ಕೂಡಲೇ ಸೇವೆಯಿಂದ ವಜಾಗೊಳಿಸಬೇಕು" ಎಂದು ಸಲಹೆ ಮಾಡಿದ್ದಾರೆ. "ಪ್ರಯೋಗಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಮಾಣಿಕ ಉದ್ಯೋಗಿಗಳ ನೈತಿಕತೆಯನ್ನು ಎತ್ತಿಹಿಡಿಯುವುದಕ್ಕಾಗಿಯೂ ಮಾಲಿನಿಯನ್ನು ವಜಾಗೊಳಿಸಬೇಕಿರುವುದು ಅವಶ್ಯವಿದೆ" ಎಂದು ಅವರು ಒತ್ತಿ ಹೇಳಿದ್ದಾರೆ. ಈ ನೇಮಕಾತಿ ನಡೆಸಿದ ಸಮಿತಿಯ ಅಧ್ಯಕ್ಷರಾಗಿದ್ದ ಪೊಲೀಸ್ ಮಹಾನಿರ್ದೇಶಕ ಕೆ.ಆರ್.ಶ್ರೀನಿವಾಸನ್ ಅವರು ಈಗ ಮರಣ ಹೊಂದಿರುವರಿಂದ, ಸಮಿತಿಯ ಇನ್ನೊಬ್ಬ ಸದಸ್ಯರಾಗಿದ್ದ ಎಡಿಜಿಪಿ ಸುಭಾಷ್ ಭರಣಿ ಸ್ವಯಂನಿವೃತ್ತಿ ಪಡೆದಿರುವುದರಿಂದ ನೇಮಕಾತಿ ಸಮಿತಿಯ ಇನ್ನಿಬ್ಬರು ಸದಸ್ಯರಾಗಿದ್ದ ಡೈರೆಕ್ಟರ್ ಮೋಹನ್ ಮತ್ತು ಮಧುವೀರಯ್ಯನವರ ಮೇಲೂ ಹಾಗೂ ಮಾಲಿನಿಯ ಫೋರ್ಜರಿ ಸರ್ಟಿಫಿಕೇಟ್‌ಗಳನ್ನು ದೃಢೀಕರಿಸಿದ ಅವಳ ಗಂಡ ಮುರಳೀಧರರ ಮೇಲೂ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.


ಈಗ ಮಾಲಿನಿಗೆ ಗೇಟ್‌ಪಾಸ್ ಕೊಡುವ ಮೂಲಕ ಶ್ರೀಕು[illegible] ಒಂದನ್ನು ಸರ್ಕಾರ [illegible]

ಕೋಮಾದಲ್ಲಿ ಕೊಪ್ಪಳ ಕಾಂಗ್ರೆಸ್! ಬುದ್ಧಿಗೇಡಿಗಳು ನಿದ್ದೆಯಿಂದ ಎದ್ದು ಬರುವುದ್ಯಾವಾಗ?


ಅನ್ಸಾರಿ


ಸಂಗಣ್ಣ


ಶಿವರಾಮೇಗೌಡ


ವಿರೂಪಾಕ್ಷಪ್ಪ

ಕೊಪ್ಪಳ ಲೋಕಸಭಾ ಕ್ಷೇತ್ರ ಅಕ್ಷರಶಃ ರಣರಂಗವಾಗುವ ಎಲ್ಲಾ ಲಕ್ಷಣಗಳು ಕಾಣುತ್ತಿವೆ. ಚುನಾವಣೆ ದಿನಾಂಕ ನಿಗದಿಯಾಗುವ ಮುನ್ನವೇ ಟಿಕೆಟು ಆಕಾಂಕ್ಷಿಗಳು ಪರಸ್ಪರ ಕತ್ತಿ ಮಸೆಯುತ್ತಾ ಕೈ ಹಾಕುತ್ತಿದ್ದಾರೆ. ಸದಾ "ಇದು ನಮ್ಮ ಭದ್ರ ಕೋಟೆ'' ಎಂದು ಬೀಗುತ್ತಿದ್ದ ಕಾಂಗ್ರೆಸಿಗರು ಗೆಲುವಿನ ಭ್ರಮೆ ಹಾಗೂ ಸ್ವಪ್ರತಿಷ್ಠೆಯಿಂದ ಪಕ್ಷವನ್ನು ಕೋಮಾ ಸ್ಟೇಜ್‌ಗೆ ತಂದು ನಿಲ್ಲಿಸಿದ್ದಾರೆ. ಅಭಿವೃದ್ಧಿ ಕಾಣದೆ ಬೆಂಗಾಡಿನಂತಾಗಿರುವ ಹಿಂದುಳಿದ ಕೊಪ್ಪಳ ಜಿಲ್ಲೆಯಲ್ಲಿ ತಳವೂರಲು ಹೊಂಚುಹಾಕುತ್ತಿರುವ ಕೋಮುವಾದಿ ಶಕ್ತಿಯನ್ನು ಹೊರದಬ್ಬಲು ಈ ಬುದ್ಧಿಗೇಡಿ ಕಾಂಗ್ರೆಸಿಗರು ಗಾಢ ನಿದ್ದೆಯಿಂದ ಎದ್ದು ಬರುವುದ್ಯಾವಾಗ ಎಂದು ನೆಮ್ಮದಿ ಬಯಸುವ ಜನ ಆಲೋಚನೆಗೀಳಾಗಿದ್ದಾರೆ.

ಅಷ್ಟೇ ಅಲ್ಲ ಈ ಕ್ಷೇತ್ರಕ್ಕೆ ಎಂದೂ ಇರದ ಡಿಮ್ಯಾಂಡು ಈ ಬಾರಿ ಬಂದಂತಾಗಿದೆ. ಪಕ್ಕದ ರಾಯಚೂರು, ಬಳ್ಳಾರಿ, ಬಿಜಾಪೂರ ಲೋಕಸಭಾ ಕ್ಷೇತ್ರಗಳು ಡಿಲಿಮಿಟೇಷನ್‌ನಲ್ಲಿ ಮೀಸಲು ಕ್ಷೇತ್ರಗಳಾಗಿರುವುದರಿಂದ ಅಲ್ಲಿಯ ಕೆಲಸವಿಲ್ಲದ ಲೀಡರ್‌ಗಳೆಲ್ಲಾ ಕೊಪ್ಪಳ ಸಾಮಾನ್ಯ ಕ್ಷೇತ್ರಕ್ಕೆ ಟಿಕೆಟ್ ಆಕಾಂಕ್ಷಿಗಳಾಗಿ ಬರುತ್ತಿದ್ದಾರೆ. ಇಲ್ಲಿಯವರೇ ಟಿಕೆಟ್‌ಗಾಗಿ ದಿಲ್ಲಿಯಲ್ಲಿ ಬಕೆಟು ಹಿಡಿದು ತಿರುಗಿ ಸುಸ್ತಾಗಿ ಬಂದು "ನಾ ಹೆಚ್ಚು, ಅವ್ನಾ ಹುಚ್ಚು'' ಎಂದು ಅಡ್ವಾನ್ಸ್ ಟೈಗರುಗಳ ಪುಟಾರಾದೋಲನದ ಬೆನ್ನುಬಿದ್ದಿರುವಾಗ ಬೇರೆಯವರು ಅದ್ಹೇಗೆ ಸಹಿಸಿಕೊಳ್ಳುತ್ತಾರೋ?

ಬಳ್ಳಾರಿಯ ಗಣಿಧಣಿ ರೆಡ್ಡಿ ಲಾರ್ಡ್‌ಗಳು ಕ್ಷೇತ್ರಕ್ಕೆ ಕಾಲಿಟ್ಟಿದ್ದಾರೆ ಎಂಬ ರೂಮರ್ ಕೇಳಿಯೇ ಇಲ್ಲಿನ ನಾಯಕರು ತಮ್ಮ ಲೋಕಲ್ ಬೆಂಬಲಿಗರನ್ನು ಕಟ್ಟಿಕೊಂಡು ದಿಲ್ಲಿಯಾತ್ರೆ ಕೈಗೊಂಡಿದ್ದಾರೆ. ಕಾಂಗ್ರೆಸ್ ಪಕ್ಷ ಕೊಪ್ಪಳದ ಇತಿಹಾಸದಲ್ಲಿಯೇ ಇಷ್ಟು ನಿಸ್ತೇಜಗೊಂಡಂತೆ ಎಂದೂ ಕಂಡಿರಲಿಲ್ಲ. ಕೆಪಿಸಿಸಿ ಅಧ್ಯಕ್ಷಗಾದಿಗೆ ಏರುತ್ತಿದ್ದಂತೆ ಆರ್.ವಿ. ದೇಶಪಾಂಡೆ ಇಲ್ಲಿಗೆ ಬಂದು ಹಾರ ಹಾಕಿಸಿಕೊಂಡು ಹೋದರೇ ಹೊರತು ಸ್ಥಳೀಯ ಕಾಂಗ್ರೆಸ್ಸಿಗರ ಭಿನ್ನಮತ ಶಮನ ಮಾಡುವ ಪ್ರಯತ್ನ ಮಾಡಲಿಲ್ಲ. ಅಲ್ಲದೆ ಮುನಿರಾಬಾದ್ ಅತಿಥಿಗೃಹದಲ್ಲಿ ತಮ್ಮ ಎದುರಿಗೆ ಎಚ್.ಜಿ. ರಾಮುಲು ಹಾಗೂ ವಿರೂಪಾಕ್ಷನ ಗ್ಯಾಂಗು ಕೈಕೈ ಹಚ್ಚಿ ಕೆಸರೆರಚಾಡಿ ಕಾಂಗ್ರೆಸ್ಸಿನ ಮರ್ಯಾದೆ ಕಳೆದರೂ ಟಿವಿ ಸೀರಿಯಲ್‌ನಂತೆ 'ವೀಕ್ಷಿಸಿ ಬ್ರೇಕ್ ಬಳಿಕ' ಎಂದು ಉಪ್ಪಿಟ್ಟು ತಿಂದು ಎದ್ದು ಹೋಗಿದ್ದಾರೆ ದೇಶಪಾಂಡೆರಾಯರು.

ನಿಸ್ಸಾರಗೊಂಡಿರುವ ಕಾಂಗ್ರೆಸಿಗರು, ಹಿಂಜರಿಯುತ್ತಿರುವ ಜೆಡಿಎಸ್‌ಗಳ ನಡುವೆ ಈಗ ಕೊಪ್ಪಳ ಬಿಜೆಪಿ ಟಿಕೆಟ್‌ಗೆ ಫುಲ್ ಡಿಮ್ಯಾಂಡ್ ಬಂದಂತಾಗಿದೆ. ಇಲ್ಲಿಯವರೆಗೂ ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಕೊಪ್ಪಳದಲ್ಲಿ ತನ್ನ ಕಿತ್ತಾಟದಿಂದಲೇ ಮೂರು ವಿಧಾನಸಭಾ ಕ್ಷೇತ್ರಗಳನ್ನು ಕಳೆದುಕೊಂಡಿದೆ. ಇಷ್ಟು ದಿನ ಯಾವ ಕ್ಯಾ ಕೊಡದೆ ಸುಮ್ಮನಿದ್ದು ಈಗ ತನ್ನ ಮಗ ಶ್ರೀನಾಥನನ್ನು ಫೀಲ್ಡ್‌ಗೆ ತರಲು ಎಚ್.ಜಿ. ರಾಮುಲು ಎಲ್ಲಿಲ್ಲದ ಪ್ರಯತ್ನ ನಡೆಸಿದ್ದರೆ ಅದಕ್ಕೆ ಕಲ್ಲು ಹಾಕುವ ನಿಟ್ಟಿನಲ್ಲಿ ಹಾಲಿ ಸಂಸದ ವಿರೂಪಾಕ್ಷಪ್ಪ ಕಂಡ ಕಂಡವರಿಗೆಲ್ಲಾ ಕಂಪ್ಲೇಂಟ್ ಕೊಟ್ಟಿದ್ದರೂ ಅದು ವರ್ಕೌಟ್ ಆಗಲಿಲ್ಲ.

ತನಗೆ ಟಿಕೆಟ್ ಸಿಗುವುದಿಲ್ಲವೆಂದು ಗೊತ್ತಿದ್ದರೂ ಸುಮ್ಮನೆ ಸೋಲೊಪ್ಪಿಕೊಳ್ಳದ ವಿರೂಪಾಕ್ಷಪ್ಪ ಕೊಪ್ಪಳದ 11 ಕಾಂಗ್ರೆಸ್ ಕೌನ್ಸಿಲರ್‌ಗಳಲ್ಲಿ 7 ಜನರನ್ನು ದಿಲ್ಲಿಗೆ ಕರೆದುಕೊಂಡು ಹೋಗಿ ಜನವರಿ 26 ರಂದು ಕೆಂಪು ಕೋಟೆ ತೋರಿಸಿ ಟೂರ್ ಹೊಡೆಸಿಕೊಂಡು ಬಂದಿದ್ದಾನೆ. ತನಗೆ ಅಧಿಕಾರ ಸಿಕ್ಕ ಅವಧಿಯಲ್ಲಿ ಕ್ಷೇತ್ರಕ್ಕಾಗಲೀ, ಪಕ್ಷಕ್ಕಾಗಲೀ ಏನನ್ನೂ ಮಾಡದ ವಿರೂಪಾಕ್ಷಪ್ಪ ಈಗ ಖಾಲಿ ಪುಂಗಿ ಊದುವಂತಾಗಿದೆ. ಇನ್ನು ಜನತಾ ಪರಿವಾರದಿಂದ ಕಾಂಗ್ರೆಸ್‌ಗೆ ಬಂದು ನಾಲ್ಕೇ ವರ್ಷದಲ್ಲಿ ಜಿಲ್ಲಾ ಕಾಂಗ್ರೆಸನ್ನು ನಾಲ್ಕು ತುಂಡು ಮಾಡಿರುವ ಬಸವರಾಜ ರಾಯರೆಡ್ಡಿ ಯಲಬುರ್ಗಾದಲ್ಲಿ ಹೀನಾಯವಾಗಿ ಸೋತಿದ್ದರೂ ಇನ್ನೂ ನಾಲ್ಕು ವರ್ಷ ಖಾಲಿ ಕೂರುವುದು ಹೇಗೆ ಎಂದು ಎಂ.ಪಿ. ಟಿಕೆಟ್‌ಗೆ ಕೈಚಾಚಿದ್ದಾರೆ.



ಹಿಂದುಳಿದ ವರ್ಗದ ನಾಯಕನಾಗಿ ಗುರುತಿಸಿಕೊಂಡಿರುವ ಎಚ್.ಜಿ. ರಾಮುಲು ವಿರುದ್ಧ ಮತ್ತೊಬ್ಬ ಹಿಂದುಳಿದ ವರ್ಗದ ಸಂಸದ ವಿರೂಪಾಕ್ಷಪ್ಪನನ್ನು ಎತ್ತಿಕಟ್ಟಿ ತನ್ನ ಕಾರ್ಯ ಸಾಧಿಸಿ ಈಗ ವಿರೂಪಾಕ್ಷಪ್ಪನನ್ನು ಮೂಲೆಗುಂಪು ಮಾಡಲು ಹೊರಟ ರಾಯರೆಡ್ಡಿಗೆ ಈಗ ದೇಶಪಾಂಡೆಯದೇ ಆಸರೆ. ಏಕೆಂದರೆ ಇಬ್ಬರೂ ಒಂದೇ ಬಳ್ಳಿಯ ಹೂಗಳು; ಜನತಾ ಪರಿವಾರದ ಸ್ನೇಹಿತರೆ.

ಇನ್ನು ಕೊಪ್ಪಳದಲ್ಲಿ ಶೋಷಿತರ ಸಮಾವೇಶ ನಡೆಸುವ ಮೂಲಕ ರೂಪುಗೊಂಡಿರುವ ಜೆಡಿಎಸ್ ಜಿಲ್ಲೆಯಲ್ಲಿ ಮತ್ತು ಲೋಕಸಭಾ ವ್ಯಾಪ್ತಿಯಲ್ಲಿ ಗೆದ್ದಿರುವುದು ಎರಡು ಸೀಟು. ಜೆಡಿಎಸ್ ನಾಯಕ ಕುಮಾರಸ್ವಾಮಿ ತಿಂಗಳೊಪ್ಪತ್ತಿನಲ್ಲಿ ಎರಡು ಬಾರಿ ಕೊಪ್ಪಳಕ್ಕೆ ಬಂದಾಗಲೂ ಎಲ್ಲರೂ ಸೂಚಿಸಿರುವುದು ಸಂಗಣ್ಣ ಕರಡಿಯ ಹೆಸರು. ಆದರೆ ಕರಡಿಗೆ ದಿಲ್ಲಿಗೆ ಹೋದರೆ ಕೊಪ್ಪಳದ ಹಿಡಿತ ತಪ್ಪುವ ಚಿಂತೆ. ತಾ[illegible] ದಿಲ್ಲಿಗೆ ಹೋದರೆ ತನ್ನನ್ನೇ ನಂಬಿರುವ ಮಗ, ಅಳಿಯಂದಿರಿಗೆ ರಾಜಕೀಯ ಭವಿಷ್ಯ ಕಲ್ಪಿಸುವುದು ಅಸಾಧ್ಯವೆಂದೂ, ತನ್ನ ಕಟ್ಟಾ ವಿರೋಧಿ ಇಕ್ಬಾಲ್ ಅನ್ಸಾರಿಗೂ ಟಿಕೆಟ್ ತಪ್ಪಿಸಬೇಕೆಂದು ಕಾಂಗ್ರೆಸ್ಸಿನ ಸಾಲೋಣಿಯನ್ನು ಜೆಡಿಎಸ್‌ಗೆ ತಂದು ನಿಲ್ಲಿಸಿ ತಾ[illegible] ಸೇಫಾಗುವ ಪ್ಲಾನನ್ನು ಕರಡಿ ಹೆಣೆದಿದ್ದಾರೆ.

ಮೊನ್ನೆಯ ಅಸೆಂಬ್ಲಿ ಚುನಾವಣೆಯಲ್ಲಿ ಜೆಡಿ[illegible] ಅನ್ಸಾರಿಗೂ, ಕಾಂಗ್ರೆಸ್‌ನ ಸಾಲೋಣಿಗೂ ಕುಸ್ತಿಗೆ ಕೊಯ್ದು ತನ್ನ ಹಿಡಿತದ 25 ಹಳ್ಳಿಗಳಲ್ಲಿ ಬಿಜೆಪಿ ಪ್ರಚಾರ ಮಾಡಿದ್ದು ಇದೇ ಶಾಸಕ ಸಂಗಣ್ಣ ಕರಡಿ 2004ರಲ್ಲಿ ಗೆದ್ದು ಸಲೀಸಾಗಿ ಮಂತ್ರಿಯಾಗುತ್ತಿದ್ದ ಸಾಲೋಣಿ ಕರಡಿಯ ಬೆಣ್ಣೆ ಮಾತಿಗೆ ಮರುಳಾಗಿ ಬಿಜೆಪಿಯಿಂದ ಲೋಕಸಭೆಗೆ ನಿಂತು ಹಾ[illegible] ಆದ. ಈಗ ಮತ್ತೊಮ್ಮೆ ಸಂಗಣ್ಣನ ಮರುಳು ಮಾತಿಗೆ ಬೀಳಲು ಸಿದ್ಧನಾಗಿದ್ದಾನೆ.

ಕೊಪ್ಪಳದ ಇತಿಹಾಸದಲ್ಲೇ ಮೊದಲ ಬಾರಿಗೆ ಬಿಜೆಪಿಗೆ ಡಿಮ್ಯಾಂಡ್ ಬಂದಿದೆ. ಆದರೆ ಕೊಪ್ಪಳ ಬಿಜೆಪಿಗೆ ವಲಸಿಗರಾದ ಹಾಲಪ್ಪ ಆಚಾರ್, ಡಾ. ರಾಂಪೂರ, ಮಾಜಿ ಸಂಸದ ಬಸವರಾಜ ಪಾಟೀಲ ಅನ್ವರಿ, ಗಂಗಾವತಿಯ ಶಿವರಾಮೇಗೌಡ ಟಿಕೆಟು ಆಕಾಂಕ್ಷಿಗಳಾಗಿದ್ದರು. ಹೈಕಮಾಂಡ್ ಲಿಸ್ಟ್‌ನಲ್ಲಿ ಹಾಲಪ್ಪ ಹಾಗೂ ಶಿವರಾಮೇಗೌಡ ಇಬ್ಬರೇ ಪ್ರಬಲರಾಗಿದ್ದಾರೆ. ಆದರಲ್ಲಿಯೂ ಶಿವರಾಮೇಗೌ[illegible] ಜಾಸ್ತಿ ತೂಕದಲ್ಲಿದ್ದಾನೆ. ಹಾಲಪ್ಪ ಕಡಿಮೆ ಸಂಖ್ಯೆಯ ಜನಾಂಗ ರೆಡ್ಡಿ ಜಾತಿಯವನಾದರೆ ಶಿವರಾಮೇಗೌ[illegible] ಬಹುಸಂಖ್ಯಾತ ಪಂಚಮಸಾಲಿ ಜನಾಂಗದಾತ.

ಎಲ್ಲಿಂದ ಬಂದನೋ ಈ ಅನ್ವರಿ?

ಸದ್ಯ ಕೊಪ್ಪಳದ ಬೀದಿಗಳೇ ಕರ ಹಿಡಕೊಂಡು [illegible] ರಾಯಚೂರು ಜಿಲ್ಲೆಯ ಲಿಂಗಸೂರಿನವರಾದ [illegible] ಕೊಪ್ಪಳದ ಎಂಪಿ ಆಗೇ ತೀರತೀನಿ, ಗದ್ದು ಪಾರ್ಲಿಮೆಂಟಿಗೆ [illegible] ಅಂಡ್ ವೈಟ್ ಸಿನಿಮಾ ತೋರಿಸುತ್ತಿದ್ದಾನೆ.


ಕೊಪ್ಪಳ ಜಿಲ್ಲೆಯ ಗಂಧಗಾಳಿಯೂ ಗೊತ್ತಿರದ ಅನ್ವರಿ ಸಾಹೇಬ 89ರಲ್ಲಿ ಜನತಾದಳದ ಸಿದ್ದರಾಮಯ್ಯ [illegible] ಲೋಕಸಭೆ ಪ್ರವೇಶಿಸಿ ಮೂರು ತಿಂಗಳ ಕಾಲ ಗಣಿ ಮತ್ತು ಉಕ್ಕು ಖಾತೆಗ ರಾಜ್ಯ ಮಂತ್ರಿಯೂ [illegible] ಆವಾಗಿ ಉಳಿದ ಹಣದಲ್ಲೇ 94ರಲ್ಲಿ ಕಾಂಗ್ರೆಸ್‌ನಿಂದ ನಿಂತು ಸೋತು ಸುಣ್ಣವಾಗಿದ್ದ ಅನ್ವರಿ 15 ವರ್ಷ[illegible] [illegible]


ವಳ [illegible] "ನಾನು ಮೊದಲಿ[illegible] ಸಂಘಪರಿವಾರದ ಭಕ್ತ ಮಹಾನ್ ದೇಶಭಕ್ತ [illegible]'' ಪಾದಕ್ಕೆರಗಿದ್ದಾನೆ.. ಇವನನ್ನು ಆ ಕೊಪ್ಪಳದ ಜನ ತಪ್ಪಿಸ ಮಾಡದಿದ್ದರೆ [illegible]

ನೀರ್ಥಡಿ ರಾಜಣ್ಣನ ದುರಂತ ಸಾವು

ಕೆಳೆದ ವರ್ಷ ಕರ್ನಾಟಕ ರಾಜ್ಯದ ವಿಧಾನಸಭಾ ಚುನಾವಣೆಗಳು ಮುಗಿದು ಕೋಮುವಾದಿ ಬಿಜೆಪಿ ಪಕ್ಷ ಅಧಿಕಾರಕ್ಕೆ ಬಂದ ನಂತರ ಸೋತು ಸುಣ್ಣವಾಗಿದ್ದ ವಿರೋಧ ಪಕ್ಷಗಳು ಜನಸಾಮಾನ್ಯರ ಯಾವ ಸಮಸ್ಯೆಗಳಿಗೂ ಸ್ಪಂದಿಸದೆ ಮಕಾಡೆ ಮಲಗಿದ್ದವು. ಒಂದು ರೀತಿಯಲ್ಲಿ ಬಿಜೆಪಿಗೆ ಪ್ರತಿಸ್ಪರ್ಧಿಯೇ ಇಲ್ಲದಂತಹ ವಾತಾವರಣ ಆಗ ನಿರ್ಮಾಣವಾಗಿತ್ತು.

ಅಂತಹ ಸಂದರ್ಭದಲ್ಲಿಯೇ ರಸಗೊಬ್ಬರದ ಕೊರತೆಯಿಂದಾಗಿ ದಾವಣಗೆರೆಯಲ್ಲಿ ರೈತರು ಪರದಾಡಲಾರಂಭಿಸಿದರು. ಆಗ ದಾವಣಗೆರೆ ಜಿಲ್ಲೆಯ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷರಾಗಿದ್ದ ನೀರ್ಥಡಿ ರಾಜಪ್ಪ (ಎಲ್ಲರಿಗೂ ರಾಜಣ್ಣ ಎಂದೇ ಪರಿಚಿತವಾಗಿದ್ದವರು) ತಮ್ಮ ನಿಕಟವರ್ತಿಗಳೊಂದಿಗೆ ಹತ್ತಾರು ಅಕ್ರಮ ರಸಗೊಬ್ಬರ ದಾಸ್ತಾನುಗಳ ಮೇಲೆ ದಾಳಿಯಿಟ್ಟು ರಸಗೊಬ್ಬರವನ್ನು ವಶಪಡಿಸಿಕೊಂಡು ರೈತರಿಗೆ ವಿತರಿಸಿದ್ದರು. ಇದಾದ ಮರುದಿನವೇ ಈ ಅಕ್ರಮ ದಾಸ್ತಾನು ಮತ್ತು ಬಿಜೆಪಿ ಸರ್ಕಾರದ ನಿರ್ಲಕ್ಷ್ಯ ಧೋರಣೆ ವಿರುದ್ಧ ಜಿಲ್ಲಾದ್ಯಂತ ರಸಗೊಬ್ಬರಕ್ಕಾಗಿ ರೈತ ಹೋರಾಟಗಳು ಪ್ರಾರಂಭಗೊಂಡವು. ಒಂದೆರಡು ದಿನಗಳಲ್ಲೇ ಅದು ರಾಜ್ಯದಾದ್ಯಂತ ವಿಸ್ತರಿಸಿ ಅದು ಸರ್ಕಾರಿ ವಿರೋಧಿ ಹೋರಾಟಗಳಾಗಿ ಮಾರ್ಪಟ್ಟವು. ಹುಬ್ಬಳ್ಳಿಯಲ್ಲಿ ರಸಗೊಬ್ಬರದ ಕೊರತೆಯನ್ನು ನೀಗಿಸದ ಸರ್ಕಾರದ ವಿರುದ್ಧ ಪ್ರತಿಭಟಿಸುತ್ತಿದ್ದ ಸಿದ್ದಲಿಂಗಪ್ಪ ಚೂರಿ ಹಾಗೂ ಮತ್ತೊಬ್ಬ ರೈತ ಪೊಲೀಸರ ಗುಂಡಿಗೆ ಬಲಿಯಾಗುವುದರ ಮೂಲಕ ಇಡೀ ರೈತ ಸಮೂಹ ಬಿಜೆಪಿ ಸರ್ಕಾರದ ವಿರುದ್ಧ ತಿರುಗಿ ನಿಂತಿತ್ತು. ದುರಂತವೆಂದರೆ ಇಂತಹ ವ್ಯಾಪಕ ಹೋರಾಟದ ಜ್ವಾಲೆಯ ಆರಂಭದ ಕಿಡಿಯಾಗಿದ್ದ ನೀರ್ಥಡಿ ರಾಜಣ್ಣ 23.02.2009ರಂದು ಹೃದಯಾಘಾತದಿಂದ ಮರಣ ಹೊಂದಿದ್ದಾರೆ.





ಸರಳತೆ ಮತ್ತು ಪ್ರಾಮಾಣಿಕತೆಗಳನ್ನು ಮೈಗೂಡಿಸಿಕೊಂಡಿದ್ದ ರಾಜಣ್ಣ ತಮ್ಮ ಸಹ ಹೋರಾಟಗಾರರೊಂದಿಗೆ ಸ್ನೇಹ-ನಿಷ್ಠುರತೆಗಳೆರಡನ್ನೂ ಕಾಯ್ದುಕೊಂಡಿದ್ದರು ಮತ್ತು ಪ್ರಗತಿಪರ ಸಂಘಟನೆಗಳ ಗೆಳೆಯರೊಂದಿಗೆ ಜೀವಂತ ಸಂಬಂಧವನ್ನೇರ್ಪಡಿಸಿಕೊಂಡಿದ್ದರು. ಜಿಲ್ಲೆಯ ಯಾವುದೇ ಭಾಗದಲ್ಲಿ ರೈತ ಸಮುದಾಯಕ್ಕೆ ಸಮಸ್ಯೆಯುಂಟಾದಾಗ ತಕ್ಷಣ ಸ್ಪಂದಿಸುತ್ತಿದ್ದ ರಾಜಣ್ಣ ಶೋಷಕ ಅಧಿಕಾರಿಗಳ ವಿರುದ್ಧ ಸೆಡ್ಡು ಹೊಡೆದು ರೈತರಿಗೆ ನೈತಿಕ ಧೈರ್ಯ ನೀಡಿ ನ್ಯಾಯ ದಕ್ಕಿಸಿಕೊಡುತ್ತಿದ್ದರು. ಸುಮಾರು 8-10 ವರ್ಷಗಳಿಂದ ನಿರಂತರವಾಗಿ ರೈತ ಸಂಘಟನೆಯಲ್ಲಿ ದುಡಿಯುತ್ತಿದ್ದ ರಾಜಣ್ಣ ಇಬ್ಭಾಗವಾಗಿದ್ದ ರೈತ ಸಂಘಟನೆಗಳು ಇತ್ತೀಚೆಗೆ ಒಂದಾಗಿ ಮರು ಸಂಘಟನೆಗೊಂಡು ಜಿಲ್ಲಾ ಕಾರ್ಯಾಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾದ ನಂತರದಲ್ಲಿ ಪ್ರತಿನಿತ್ಯ ರೈತ ಪರವಾದ ಹೋರಾಟಗಳಿಗೆ ನಾಯಕತ್ವ ನೀಡುತ್ತಲೇ ಜಿಲ್ಲೆಯ ಇತರೆ ತಾಲ್ಲೂಕುಗಳ ರೈತ ನಾಯಕರಿಗೆ ಸ್ಫೂರ್ತಿಯಾಗಿದ್ದರು.

ಈ ಹಿಂದೆ ಮಹಿಳಾ ಜಾಗೃತಿ ಸಂಘಟನೆಯ ಕಾರ್ಯಕರ್ತೆಯರಾದ ಮಂಜುಳ, ಮಲ್ಲಿಗೆ ಹಾಗೂ ಗೌರಿಯವರನ್ನು ದಾವಣಗೆರೆ ಪೊಲೀ[illegible] ವಿನಾಕಾರಣ ಬಂಧಿಸಿದಾಗ ಖಾಕಿಗಳ ದೌರ್ಜನ್ಯವನ್ನು ವಿರೋಧಿಸಿ ಈ ಕಾರ್ಯಕರ್ತೆಯರ ನೆರವಿಗೆ ರಾಜಣ್ಣ ನಿಂತಿದ್ದರು. ಚರ್ಚ್‌ಗಳ ಮೇಲಿನ ದಾಳಿಗಳನ್ನು ಪ್ರತಿಭಟಿಸಿ ಸೆಪ್ಟೆಂಬರ್ 2008ರಂದು ಕೋಮು ಸೌಹಾರ್ದ ವೇದಿಕೆ ದಾವಣಗೆರೆಯಲ್ಲಿ ಆಯೋಜಿ[illegible] ಕಾರ್ಯಕ್ರಮಕ್ಕೆ ಇಲ್ಲಿನ ಪೊಲೀಸ್ ಇಲಾಖೆ ಹಾಗೂ ಜಿಲ್ಲಾಧಿಕಾರಿ ತೀವ್ರ ಅಡ್ಡಿಗಳನ್ನೊಡ್ಡಿ ಬಿಜೆಪಿ ಏಜೆಂಟರಂತೆ ವರ್ತಿಸಿದ[illegible] ರಾಜಣ್ಣ ಇದನ್ನು ವಿರೋಧಿಸಿದ್ದರು. ಮಾತ್ರವಲ್ಲ ಕಾರ್ಯಕ್ರಮದ ಯಶಸ್ವಿಗಾಗಿ ದುಡಿದಿದ್ದರು.

42 ವರ್ಷದವರಾಗಿದ್ದ ರಾಜಣ್ಣನಿಗೆ ಯಾವು[illegible] ದುಶ್ಚಟಗಳಿರಲಿಲ್ಲ. ತಮ್ಮ ಮಾತಿನಲ್ಲಿ ಹಳ್ಳಿಯ ಸೊಗಡನ್ನು ಹರಿಸುತ್ತಿದ್ದರಲ್ಲದೆ ಅತ್ಯಂತ ಆರೋಗ್ಯವಂತರಂತೆ ಕಾಣುತ್ತಿದ್ದರು. ಆದರೆ ಹೃದಯಕ್ಕೆ ಸಂಬಂಧಿಸಿದ ಕಾಯಿಲೆ ಅವರನ್ನು ▶▶

ಿ ದುಡ್ಡಿನ ದರ್ಪದಲ್ಲಿ ತನ್ನದೇ ಒಂದು
ಕ ಲೋಕದಲ್ಲಿ ಬದುಕುವ ಹಾಲಪ್ಪನಿಗೂ
ಟೇಟರ್ ವ್ಯವಹಾರಗಳ ಮೂಲಕ
ಕ ಸಂಪರ್ಕ ಇರುವ
ೇಗೌಡನಿಗೂ ಬಹಳ ವ್ಯತ್ಯಾಸವಿದೆ.

ುವರೆಗೂ ಕಾಂಗ್ರೆಸ್‌ನಲ್ಲಿದ್ದು ತನ್ನೊಂದಿಗೆ
ಳಗಳಕ್ಕೂ ಲಾಭ ಕೊಡಿಸಿ ಈಗ ಬಿಜೆಪಿಗೆ
ನ ಹಾಲಪ್ಪ ಜಿಲ್ಲಾಧ್ಯಕ್ಷನಾಗಿ ನಾಲ್ಕೇ
ಹಿಂದುಳಿದ ವರ್ಗಗಳ ಮುಖಂಡರಿಗೆ
ಮೇಲೆ ಬೇರು ಕೂಡ ಹಾಕದಷ್ಟು
ಾಗಿದ್ದಾನೆ. ಈ ಹಾಲಪ್ಪನ ಭಂಡತನದಿಂದ
ಸಳೇ ಬಿಜೆಪಿಗರೆಲ್ಲಾ ಶಿವರಾಮೇಗೌಡನ
ವಾ ಶಿವಾ ಎನ್ನುತ್ತಿರುವುದು ನೋಡಿದರೆ
ಬಡಿದಾಡಿ ಮನೆ ಸೇರುವುದು
ದೆ ಎಂಬಂತಿದೆ.

ಪಿಗಳ ಒಡಕಿನ ಲಾಭಕ್ಕೆ ಜೆಡಿಎಸ್
ದೋ ಅಥವಾ ನಿದ್ದೆಯಲ್ಲಿರುವ ಕಾಂಗ್ರೆಸ್‌ನ
ು ಎದ್ದು ಬರುತ್ತವೋ ಕಾಲ ನಿರ್ಧರಿಸಬೇಕಷ್ಟೆ...

ಹುರುಳಿಕುಪ್ಪಿ ವಿನಯ್

...ಾಲೂ ಬರತಾನೆ ದಾರಿ ಬಿಡಿ

[illegible]




[illegible]

ಾಗಿ ಬಾಧಿಸುತ್ತಿದ್ದರೂ ಅದರ ಬಗ್ಗೆ
ಯಾರೊಂದಿಗೆ ಹೇಳಿಕೊಂಡಿರಲಿಲ್ಲ.
ಂದರೆ ತಮ್ಮ ಅನಾರೋಗ್ಯದ ಬಗ್ಗೆ
ಗರೂಕತೆಯನ್ನು ವಹಿಸಲು ಅವರ ಬೆನ್ನ
ಂಡತನ ಅಸಾಧ್ಯವಾಗಿಸಿತ್ತು. ಸಂಸಾರದ
ನಿಭಾಯಿಸಲೂ ಅವರು ಬಹಳ ಕಷ್ಟ
ರು.

ಣ್ಣ ಎಂದೂ ಅಧ್ಯಕ್ಷನಾಗಿಳಿದು ಹಣ
ರೈತ ಸಂಘಟನೆಯ ಹೆಸರನ್ನು
ಬಳಸಿಕೊಂಡ ಹಲವರಂತೆ ರಾಜಣ್ಣ
ಮಾಡಲಿಲ್ಲ. ತಾವೇನು ತನ್ನ ಬಗ್ಗೆ
ನ್ನು ಪ್ರಚಾರ ಮಾಡುತ್ತಿದ್ದರೂ ರಾಜಣ್ಣ
[illegible]

ಚಂದ್ರಶೇಖರ ಕೋರಣಘಟ್ಟ

ಶೃಂಗೇರಿ ಯೋಗೀಶ್ವರ ಮಿಶ್ರನೆಂಬ ಪ್ರಜಾಪೀಡಕ



ಈತನ ಹೆಸರು ಯೋಗೀಶ್ವರ ಮಿಶ್ರ. ಹೆಸರಿಗೆ ಶೃಂಗೇರಿಯ ತಹಶೀಲ್ದಾರ. ಮಾಡುತ್ತಿರುವುದು ಶೃಂಗೇರಿ ಮಠದ ದ್ವಾರಪಾಲಕ ಕೆಲಸ. ಸಾಲದ್ದಕ್ಕೆ ತನ್ನ ಆಫೀಸಿನ ಅಟೆಂಡರ್‌ನಿಂದ ಹಿಡಿದು ಜನಸಾಮಾನ್ಯನ ತನಕ ಎಲ್ಲರಿಗೂ ಎಷ್ಟು ಸಾಧ್ಯವೋ ಅಷ್ಟು ಹಿಂಸೆ ಕೊಡುವುದು ಈತನ ಪ್ರವೃತ್ತಿ.

ರಾಜ್ಯದಲ್ಲಿ ಅತ್ಯಂತ ಚಿಕ್ಕ ತಾಲ್ಲೂಕಾದ ಶೃಂಗೇರಿ 1959ರ ವರೆಗೂ ಮಠದ ಜಹಗೀರ್ ಆಗಿ ಬ್ರಾಹ್ಮಣರ ನೇರ ಆಡಳಿತದಲ್ಲಿತ್ತು. ಸಾಮಾನ್ಯವಾಗಿ ಇಲ್ಲಿಗೆ ಒಳ್ಳೆಯ ಅಧಿಕಾರಿಗಳು ಬರುವುದೇ ಇಲ್ಲ. ಬಂದವರು ಬಹಳ ದಿನ ಉಳಿಯುವುದಿಲ್ಲ. ಮಠದ ಆಡಳಿತಾಧಿಕಾರಿಯಾಗಿರುವ ಗೌರಿಶಂಕರನ ಅಣತಿಯಂತೆ ನಡೆದುಕೊಳ್ಳುವ ಅಧಿಕಾರಿಗಳಿಗಷ್ಟೇ ಇಲ್ಲಿ ಅವಕಾಶ. ಇಲ್ಲದಿದ್ದರೆ ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಟ್ರಾನ್ಸ್‌ಫರ್ ಲೆಟರ್ ಹಿಡಿದುಕೊಂಡು ಓಡಬೇಕಾಗುತ್ತದೆ.

ಗೌರಿಶಂಕರನ ಆಣತಿಯಂತೆ ಕೆಲಸ ಮಾಡುವ ಅಧಿಕಾರಿಗಳು ಚೆನ್ನಾಗಿ ಕಮಾಯಿ ಮಾಡಿಕೊಳ್ಳುತ್ತಾರೆ. ಅವರು ಬ್ರಾಹ್ಮಣ ಜಾತಿಗೆ ಸೇರಿದ್ದರಂತೂ ಅವರಿಗೆ ಮಠದ ಪುಕ್ಕಟೆ ಮನೆಯೂ ಒಳಗೊಂಡಂತೆ ಎಲ್ಲಾ ರೀತಿಯ ಭಿಕ್ಷೆಗಳೂ ಸಿಗುತ್ತವೆ. ಸದ್ಯಕ್ಕೆ ಶೃಂಗೇರಿಯ ತಹಶೀಲ್ದಾರನಾಗಿ ವಕ್ಕರಿಸಿಕೊಂಡಿರುವ ಯೋಗೀಶ್ವರ ಇದಕ್ಕೆಲ್ಲ ಹೇಳಿಮಾಡಿಸಿದ ವ್ಯಕ್ತಿ ಎಂದರೆ ತಪ್ಪಾಗಲಾರದು. ಈತ ಶೃಂಗೇರಿಗೆ ಬಂದು ಮೂರು ವರ್ಷಗಳಾಗಿದ್ದು ಮಠದ ಆಶ್ರಯದಲ್ಲಿ ಚೆನ್ನಾಗಿ ಬೇರು ಬಿಟ್ಟಿದ್ದಾನೆ.

ಈತ ಶೃಂಗೇರಿಗೆ ಬಂದು ಅದೇನು ಕಡಿದು ಗುಡ್ಡೆ ಹಾಕಿದ್ದಾನೋ ಗೊತ್ತಿಲ್ಲ, ಆದರೆ ಮಠದ ಆಡಳಿತಾಧಿಕಾರಿಯಾದ ಗೌರಿಶಂಕರನ ಸೇವೆಯನ್ನಂತೂ ಚೆನ್ನಾಗಿ ಮಾಡಿಕೊಂಡು ಬಂದಿದ್ದಾನೆ. ಗೌರಿಶಂಕರನ ವಿರುದ್ಧ ಯಾರಾದರೂ ಮಾತನಾಡಿದರೆ ಸಾಕು ಈತನಿಗೆ ಅದೆಲ್ಲಿಂದ ಕೋಪ ಬರುತ್ತೋ ಗೊತ್ತಿಲ್ಲ. ಏನಾದರೂ ನೆಪವೊಡ್ಡಿ ಅಂಥವರ ಮೇಲೆ ಕೇಸು ಜಡಿದು ಬಾಯ್ಮುಚ್ಚಿಸುತ್ತಾನೆ. ಅದಕ್ಕೆ ಪ್ರತಿಯಾಗಿ ಗೌರಿಶಂಕರ ಮಠದ ಪುಕ್ಕಟೆ ಬಂಗಲೆಯನ್ನೂ ಒಳಗೊಂಡಂತೆ ಎಲ್ಲಾ ರೀತಿಯ ಭಿಕ್ಷೆಗಳನ್ನು, ಭಕ್ಷ್ಯಗಳನ್ನು ಒದಗಿಸುತ್ತಾನೆ. ಅದೂಅಲ್ಲದೇ ತನಗೆ ಚೆನ್ನಾಗಿ ಸೇವೆ ಸಲ್ಲಿಸಿದ್ದಕ್ಕಾಗಿ ಗೌರಿಶಂಕರ ಭಾರಿ ಕಸರತ್ತು ನಡೆಸಿ ಈ ಬಾರಿ ಆತನಿಗೊಂದು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯನ್ನೂ ಕೊಡಿಸಿದ್ದಾನೆ.

ಈತನ ಯಶೋಗಾಥೆ ಇಲ್ಲಿಗೆ ಮುಗಿಯುವುದಿಲ್ಲ. ಈ ಹಿಂದೆ ದಿವಾಕರ ಎಂಬ ರೈತನೊಬ್ಬ ಈತನ ವಿರುದ್ಧ ಮುಖ್ಯಮಂತ್ರಿಗೆ ದೂರು ಬರೆದಿದ್ದಕ್ಕಾಗಿ ಪೊಲೀಸರನ್ನು ಛೂಬಿಟ್ಟು ಹಿಂಸೆ ಕೊಟ್ಟಿದ್ದ. ಜನಸಾಮಾನ್ಯರಿಗೆ ಸರ್ಕಾರ ನೀಡಿದ್ದ 50ಕ್ಕೂ ಹೆಚ್ಚು ಮನೆ, ಅಕ್ರಮ-ಸಕ್ರಮ ಜಮೀನು, ಮನೆಗಳಿಗೆ ನೀಡಿದ ಹಕ್ಕುಪತ್ರ ರದ್ದುಪಡಿಸಿ ರೈತರ ಮೇಲೆ ಕೇಸು ದಾಖಲಿಸಿದ್ದ. ಭಕ್ತರಿಂದ ಮುಜರಾಯಿ ದೇವರಿಗೆ ಬಂದ ಸೀರೆಯನ್ನು ಹಂಚಿಕೆ ಮಾಡದೆ ತನ್ನ ನೆಚ್ಚಿನವರಿಗೆಲ್ಲಾ ಹಂಚಿ ರಂಪ ಮಾಡಿಕೊಂಡಿದ್ದ.

ಪ್ರಚಾರಕ್ಕೆ ಹಾತೊರೆಯುವ ಈತ ಎಂಥ ಹೀನ ಕೆಲಸಕ್ಕೂ, ಯಾರಿಗೆ ಎಷ್ಟು ತೊಂದರೆ ಕೊಡುವುದಕ್ಕೂ ಹಿಂಜರಿಯುವುದಿಲ್ಲ. ತನ್ನ ವಿರೋಧಿಗಳನ್ನು ಮಟ್ಟಹಾಕುವುದಕ್ಕೆ ಕೇಸು ಹಾಕುವುದನ್ನೇ ಒಂದು ಅಸ್ತ್ರವಾಗಿ ಬಳಸುತ್ತಾನೆ. ಈ ಹಿಂದೆ ಹೊಸ್ಕೆರೆ ಗೋಪಾಲಕೃಷ್ಣ ಎಂಬ ಬ್ರಾಹ್ಮಣರ ಮೇಲೆ ಕೇಸು ಹಾಕಿ, ಆಮೇಲೆ ಅವರೆಲ್ಲ ತಿರುಗಿಬಿದ್ದು ಇವನ ವಿರುದ್ಧವೇ ಕೇಸು ಜಡಿದು ರಾದ್ಧಾಂತವಾಗಿತ್ತು. ಕೊನೆಗೆ ಅದನ್ನು ಬಗೆಹರಿಸುವುದಕ್ಕೆ ಖುದ್ದು ಶಾಸಕನೇ ಬರಬೇಕಾಯ್ತು. ಇನ್ನೊಂದು ಪ್ರಕರಣದಲ್ಲಿ 'ನಾಗೇಶ' ಪತ್ರಿಕೆಯ ಸಂಪಾದಕ ಟಿ. ನಾಗೇಶರನ್ನು ಪ್ರಮಾಣಪತ್ರದಲ್ಲಿ ಸುಳ್ಳು ಹೇಳಿದ್ದಾನೆಂದು 420 ಕೇಸು ಹಾಕಿ ಜೈಲಿನಲ್ಲಿಟ್ಟಿದ್ದ. ಆ ಹೊತ್ತು ನಾಗೇಶನ ವಿರುದ್ಧ ದೂರುಕೊಡುವಂತೆ ತ್ಯಾಗರಾಜ ಎಂಬುವವನನ್ನು ಹುರಿದುಂಬಿಸಿದ್ದ. ಈಗ ಅದೇ ನಾಗೇಶನಿಂದ ತ್ಯಾಗರಾಜನ ವಿರುದ್ಧ ದೂರು ಬರೆಸಿಕೊಂಡು ಕೇಸು ಜಡಿಸಿದ್ದಾನೆ! ಅಂದರೆ ಒಬ್ಬರನ್ನು ತುಳಿಯುವುದಕ್ಕೆ ಇನ್ನೊಬ್ಬನನ್ನು ಬಳಸಿಕೊಳ್ಳುವುದು ಯೋಗೀಶ್ವರನ ಜಾಯಮಾನ.

ಈತ ಎಂಥಾ ಪರಾಕ್ರಮಿ ಎಂದರೆ ದಾರಿಯಲ್ಲಿ ಸಾಗುತ್ತಿದ್ದ ಲಾರಿಯೊಂದನ್ನು ಹಿಡಿದು, ಬಲಾತ್ಕಾರವಾಗಿ ಬಂಡೆ ಇರುವಲ್ಲಿಗೆ ತೆಗೆದುಕೊಂಡು ಹೋಗಿ ನಾಲ್ಕು



ಸೈಜುಗಲ್ಲುಗಳನ್ನು ಅದರ ಮೇಲೆ ಹಾಕಿಸಿ ಆಮೇಲೆ ಫೋಟೋ ಕ್ಲಿಕ್ಕಿಸಿಕೊಂಡು 'ಲಾರಿಯನ್ನು ರೆಡ್‌ಹ್ಯಾಂಡ್ ಆಗಿ ಹಿಡಿದೆ' ಎಂದು ಪೋಜು ಕೊಡುತ್ತಾನೆ! ಕೇಸು ಜಡಿಸಿಕೊಂಡ ಲಾರಿ ಮಾಲೀಕರು ಕೋರ್ಟುಗಳನ್ನು ಅಲೆಯುತ್ತಿದ್ದಾರೆ.

ಇವನ ಇನ್ನೊಂದು ತಿಕ್ಕಲುತನವನ್ನು ನೋಡಿ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೇ ಭೋವಿ ಜನಾಂಗವನ್ನು ಪರಿಶಿಷ್ಟ ಜಾತಿಯಲ್ಲಿ ಸೇರಿಸಿವೆ. ಆ ಜನಾಂಗದವರಿಗೆ ಎಸ್‌ಸಿ ಪ್ರಮಾಣಪತ್ರ ಕೊಡುವುದು ತಹಶೀಲ್ದಾರನಾದವನ ಕರ್ತವ್ಯ. ಆದರೆ, ಈ ಯೋಗೀಶ್ವರ ಅದೆಂಥ ಕಿಲಾಡಿ ಎಂದರೆ ಜಿಲ್ಲಾ ಪಂಚಾಯ್ತಿ ಸದಸ್ಯ ಶಿವಣ್ಣ [illegible] ವರೊಂದಿಗೆ ಕತ್ತಿ ಮಸೆಯುವುದಕ್ಕಾಗಿ ಇಡೀ [illegible] ಜನಾಂಗಕ್ಕೆ ಪರಿಶಿಷ್ಟ ಜಾತಿ ಪ್ರಮಾಣಪತ್ರಗಳನ್ನು ಕೊಡುತ್ತಿಲ್ಲ.

ತನ್ನ ವಿರೋಧಿಗಳನ್ನು 'ಹಣಿಯುವುದಕ್ಕೆ' ಎಂಥ ತಂತ್ರಗಳನ್ನು ಹೆಣೆಯುತ್ತಾನೆ ಎಂಬುದಕ್ಕೆ ಈತ ಕಲ್ಕುಳಿ ವಿಠಲ್ ಹೆಗಡೆ ಮೇಲೆ ಅಟ್ರಾಸಿಟಿ ಕೇಸು ದಾಖಲಿಸಿದ್ದೇ ಸಾಕ್ಷಿಯಾಗಿದೆ. ವಾಸ್ತವದಲ್ಲಿ ವಿಠಲ್ ಹೆಗಡೆ ಹತ್ತಾರು ವರ್ಷಗಳಿಂದ ದಲಿತರ ಪರವಾಗಿ, ಬಡವರ ಪರವಾಗಿ, ಪರಿಸರ ಸಂರಕ್ಷಣೆಗಾಗಿ ನಿರಂತರವಾಗಿ ಹೋರಾಟ ಮಾಡುತ್ತಾ ಬಂದವರು. ಅಂತೆಯೇ ಯೋಗೀಶ್ವರ ಜನಸಾಮಾನ್ಯರಿಗೆ ಕೊಡುತ್ತಿದ್ದ ಹಿಂಸೆಯನ್ನೂ ಖಡಾಖಂಡಿತವಾಗಿ ಯಾವ ಮುಲಾಜೂ ಇಲ್ಲದೇ ವಿರೋಧಿಸಿದರು ಎಂಬ ಒಂದೇ ಕಾರಣಕ್ಕೆ ಕೆಲವು ದಲಿತರನ್ನು ವಿಠಲ್ ಹೆಗಡೆ ವಿರುದ್ಧ ಎತ್ತಿ ಕಟ್ಟಿ ಅವರ ಮೇಲೆ ಅಟ್ರಾಸಿಟಿ ಕೇಸು ದಾಖಲಿಸಿದ್ದಾನೆಂದರೆ ಅವನೆಂಥ ಕ್ರಿಮಿನಲ್ ಇರಬೇಕು?

ಜನಸಾಮಾನ್ಯರನ್ನು, ತನ್ನ ಆಫೀಸಿನ ಜವಾನರನ್ನು ಪೀಡಿಸುವ ಕೆಟ್ಟ ಚಾಳಿ ಸಾಮಾನ್ಯವಾಗಿ ಎಲ್ಲಾ ಸರ್ಕಾರಿ ಅಧಿಕಾರಿಗಳಿಗಿರುತ್ತದೆ. ಆದರೆ, ಈತನದ್ದು ಪೀಡನೆಯಲ್ಲಿ ಒಂದು ಗುಂಜಿ ಮೇಲು ಎಂದೇ ಹೇಳಬೇಕು. ಈತನ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಮಲ್ಲಿಕಾರ್ಜುನ ಎಂಬ ಗುಮಾಸ್ತ ಇವನ ಪೀಡೆಯನ್ನು ತಾಳಲಾರದೆ ಆತ್ಮಹತ್ಯೆಯನ್ನೇ ಮಾಡಿಕೊಂಡ ಎಂದರೆ ಇವನ ಪೀಡನೆಯ ಪರಿ ಯಾರಿಗಾದರೂ ಅರ್ಥವಾಗುತ್ತದೆ. ಆತ್ಮಹತ್ಯೆ ಮಾಡಿಕೊಂಡ ಮಲ್ಲಿಕಾರ್ಜುನನ ಪತ್ನಿಗೆ ಕೆಲಸ ಕೊಡಿಸುವುದಾಗಿ ನಂಬಿಸಿ ಅವರ ಬಾಯಿ ಮುಚ್ಚಿಸಿದ್ದು ಇಡೀ ಶೃಂಗೇರಿಗೆ ಗೊತ್ತಿರುವ ರಹಸ್ಯ.

ಹಿಂದಿನ ಯಾವ ತಹಶೀಲ್ದಾರನ ಮೇಲೆಯೂ ಇಲ್ಲದಷ್ಟು ಕೇಸುಗಳನ್ನು ಜನ ಇವನ ಮೇಲೆ ಹಾಕಿ ನ್ಯಾಯಾಲಯದ ಮೊರೆ ಹೋಗಿದ್ದಾರೆಂದರೆ ಜನರಿಗೆ ಈತ ಅದೆಷ್ಟು ಕಿರುಕುಳ ಕೊಟ್ಟಿದ್ದಾನೆಂಬುದು ಅರ್ಥವಾಗುತ್ತದೆ. ಇಲ್ಲಿಯವರೆಗೂ ಜನ ಹೇಗೋ ಈತನನ್ನು ಸಹಿಸಿಕೊಂಡಿದ್ದರು. ಆದರೀಗ ಅವರ ಸಹನೆಯ ಕಟ್ಟೆ ಒಡೆದಂತೆ ಕಾಣಿಸುತ್ತಿದೆ. ಯೋಗೀಶ್ವರ ಮಿಶ್ರ, ಗೌರಿಶಂಕರ ಮತ್ತು ಶೃಂಗೇರಿ ಶಾಸಕ ಜೀವರಾಜ್ ಆದಿಯಾಗಿ ಎಲ್ಲ ಜನಕಂಟಕರ ವಿರುದ್ಧವೂ ಜನ ಕುದಿಯುತ್ತಿರುವುದನ್ನು ನೋಡಿದರೆ ಶೃಂಗೇರಿ ಯಾವಾಗ ಬೇಕಾದರೂ ಸ್ಫೋಟಗೊಳ್ಳಬಹುದು. ಈಗಾಗಲೇ ಯೋಗೀಶ್ವರನ ವಿರುದ್ಧ ತಾಲ್ಲೂಕು ಪಂಚಾಯತಿಯಲ್ಲಿ ನಿರ್ಣಯವೊಂದನ್ನು ಮಾಡಲಾಗಿದೆ. ಈತನ ಪೀಡನೆಯನ್ನು ತಾಳಲಾರದೇ ಅವನನ್ನು ವರ್ಗಾವಣೆ ಮಾಡಬೇಕೆಂದು ಜಿಲ್ಲಾ ಪಂಚಾಯ್ತಿ ಸದಸ್ಯನೊಬ್ಬ ತನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

ಹಾಗೆ ನೋಡಿದರೆ ಕಾಂಗ್ರೆಸ್ ಮತ್ತು ರಾಜ್ಯಪಾಲರ ಆಡಳಿತದಲ್ಲೇ ಈತ ಗಂಟುಮೂಟೆ ಕಟ್ಟಬೇಕಿತ್ತು. ಹೇಗೋ ಉಳಿದುಕೊಂಡು ಈಗ ಬಿಜೆಪಿಯವರ ಆಶ್ರಯದಲ್ಲಿ ಇನ್ನಷ್ಟು ಚಿಗುರಿಕೊಂಡಿದ್ದಾನೆ. ಬಿಜೆಪಿಯಲ್ಲೇ ಈತ ಕೆಲವರಿಗೆ ಬೇಡವಾಗಿದ್ದರೂ ಶೃಂಗೇರಿ ಮಠದ ಗೌರೀಶಂಕರನ ಕೃಪಾಕಟಾಕ್ಷದಿಂದ ಉಳಿದುಕೊಂಡಿದ್ದಾನೆ. ಜನ ಬೀದಿಗಿಳಿದು ಎಮ್ಮೆಲ್ಲೆಗೆ ಛೀಮಾರಿ ಹಾಕುವ ಮೊದಲು ಜೀವರಾಜ್ ಎಚ್ಚೆತ್ತುಕೊಳ್ಳುವುದೊಳಿತು.

■ ವರದಿಗಾರ

ಎ.ಸಿ. ದಯಾನಂದನ ರಕ್ಷಾಕವಚ

ಯೋಗೀಶ್ವರನ ಪೀಡೆಗಳಿಗೆಲ್ಲಾ ಶ್ರೀರಕ್ಷೆಯಾಗಿ ನಿಂತಿರುವವನು ಉಪವಿಭಾಗಾಧಿಕಾರಿ ದಯಾನಂದ. ಹಾಗೆ ನೋಡಿದರೆ ದಯಾನಂದ ಯೋಗ್ಯ ಮನುಷ್ಯನೇ. ಆದರೆ ಯೋಗೀಶ್ವರ ಮತ್ತು ದಯಾನಂದ ಒಂದೇ ಬ್ಯಾಚಿನಲ್ಲಿ ಕೆಎಎಸ್ ಮಾಡಿದವರು ಎಂಬ ಒಂದೇ ಕಾರಣಕ್ಕೆ ಮತ್ತು ಅವರಿಬ್ಬರ ನಡುವೆ ಒಂದು ರೀತಿಯ ಸ್ನೇಹವಿದೆ ಎಂಬ ಕಾರಣಕ್ಕೆ ಯೋಗೀಶ್ವರನ 'ತರಲೆ' ಕೆಲಸಗಳಿಗೆಲ್ಲಾ ರಕ್ಷಣೆ ಒದಗಿಸುತ್ತಾ ನಿಂತಿರುವುದು ಆತನಿಗೆ ಶೋಭೆ ತರುವಂತಹದ್ದಲ್ಲ. ನಾಳೆ ಜನ ಯೋಗೀಶ್ವರನ ವಿರುದ್ಧ ಬೀದಿಗಿಳಿದರೆ ಅವನೊಂದಿಗೆ ತಾನೂ ತಲೆದಂಡ ಕೊಡಬೇಕಾದೀತು ಎಂಬ ಪ್ರಜ್ಞೆ ದಯಾನಂದರಿಗಿದ್ದರೆ ಒಳ್ಳೆಯದು.

ಪ್ರಕೃತಿ ಧ್ಯಾನ ಪರಿಣಾಮಕಾರಿ ಸಂವಹನ



ಕಡಲಿಗೆ ಕಳಿಸಿದ ದೀಪ

(ಕವನ ಸಂಕಲನ)

ಟಿ.ಯಲ್ಲಪ್ಪ

ಪುಟಗಳು : 80

ಬೆಲೆ: ರೂ. 50/–

ಸಂಚಯ ಪ್ರಕಾಶನ

ನಂ. 100, 2ನೇ ಮುಖ್ಯರಸ್ತೆ, 6ನೇ ಬ್ಲಾಕ್ , 3ನೇ ಸ್ಟೇಜ್, 3ನೇ ಫೇಸ್, ಬನಶಂಕರಿ, ಬೆಂಗಳೂರು–560 085

ದೂರವಾಣಿ :080–26791925

ಪುಸ್ತಕ ವಿಮರ್ಶೆ

ದಮನಿತ ಲೋಕದ ಕುರುಹುಗಳಿಂದ ಬದುಕಿನ ಅಂತರ್ಯ ಅರಿಯುವ ತುಡಿತದೊಂದಿಗೆ ಟಿ. ಯಲ್ಲಪ್ಪ 'ಕಡಲಿಗೆ ಕಳಿಸಿದ ದೀಪ'ವನ್ನು ಓದುಗರ ಮುಂದಿಟ್ಟಿದ್ದಾರೆ.

ಕ್ಷಣಕ್ಷಣಕ್ಕೂ ಬೆರಗು ಹುಟ್ಟಿಸುವ, ಆತಂಕ ತರುವ, ಸಂಭ್ರಮಿಸುವಂತೆ ಮಾಡುವ ಪ್ರಕೃತಿಯೆಂಬ ಬದುಕು, ಬದುಕೆಂಬ ಪ್ರಕೃತಿಯನ್ನು ಮುಗ್ಧತೆಯಿಂದ ನೋಡುವ ಹಳ್ಳಿಗಾಡ ಹುಡುಗನ ತಹತಹ, ಬಹುಪಾಲು ಬೆದರಿದ, ಕಮರಿದ ಶೋಷಿತ ಜೀವನ, ಒಂದು ಅತಿಯಾದ ಒತ್ತಡವನ್ನೂ ಸಹಜವಾಗಿ ಏಗುವ ಅಕ್ಕ, ಅವ್ವನಂಥ ಹೆಣ್ಣುಜೀವ, ಕಾಲದ ಸ್ಥಿತ್ಯಂತರಗಳು ತಂದೊಡ್ಡುವ ಪರಿಣಾಮಗಳನ್ನು ನಿರುಮ್ಮಳವಾಗಿ ಧ್ಯಾನಿಸುವ ಕವಿಮನಸ್ಸು ಇವೆಲ್ಲ 'ಕಡಲಿಗೆ ಕಳಿಸಿದ ದೀಪ' ಸಂಕಲನದ ಕಾವ್ಯ ಪರಿಕರಗಳು.

ಈ ಸಂಕಲನದಲ್ಲಿ ಸ್ವಶೋಧದ ಪ್ರಯತ್ನಗಳು ಗಾಢವಾಗಿದ್ದು, ವಸ್ತು, ಕಾವ್ಯದ ರೂಪ ಪಡೆಯುವ ಹೊತ್ತಿಗೆ ಅರ್ಥಪೂರ್ಣ ಪ್ರತಿಮೆಗಳನ್ನು ಒಡಲಾಗಿಸಿಕೊಂಡು ಗಟ್ಟಿಬಂಧ ಹೊಂದುತ್ತಲೇ ತನ್ನ ಪರಿಧಿಯನ್ನು ಹರವಿಕೊಳ್ಳುತ್ತದೆ. ಅರಿವಿನ ಗಾಳಿಗೆ ಮತ್ತೆ ಮತ್ತೆ ತೂರಿದ ಉಳಿದ ಗಟ್ಟಿಕಾಳುಗಳಂತಿವೆ ಇಲ್ಲಿನ ಪದಗಳು. ಕಣ್ತಪ್ಪಿ ನುಸುಳಿದ ಜಾಳುತನದ ಸುಳಿವೂ ಕೂಡ ಇಲ್ಲವೆನ್ನಲಾಗುವುದಿಲ್ಲ, ಕಾವ್ಯಧ್ಯಾನವನ್ನು ಬದುಕಿನ ಮುಖ್ಯ ಭಾಗವಾಗಿ ಭಾವಿಸಿದಂತಿರುವ ಈ ಕವಿ ಕೆಲವು ಅರ್ಥವಂತಿಕೆಯ, ಏಕಕಾಲಕ್ಕೆ ಸುಂದರವೂ, ಮೌಲಿಕವೂ ಆಗಬಲ್ಲಂತಹ ಕವಿತೆಗಳನ್ನು ಸೃಜಿಸಿದ್ದಾರೆ. ಇದಕ್ಕೆ 'ಅರಿವು', 'ನನ್ನ ನಿನ್ನ ನಡುವೆ', 'ತುಡಿತ' ಕವಿತೆಗಳನ್ನು ಸಾಕ್ಷಿಯಾಗಿಸಬಹುದೇನೋ?

ಶವದ ಆತ್ಮಕಥೆಗಳ ಹುಡುಕ ಹೊರಟ ಈ ಕವಿ 'ಹೊಸಹುಟ್ಟು ಬರುವುದಿದೆ ಭೂಮಿಗೆ । ಹಿರಮಿಡ್ಡು ಕಟ್ಟಬೇಡ ಗೆಳತಿ' ಎನ್ನುತ್ತಾರೆ. ಸ್ತ್ರೀ ಸಂಕಥನಕ್ಕೆ ಕೆಲವು ಮೌಲಿಕ ಮಗ್ಗಲುಗಳನ್ನು ತೋರಿಸುವ, ಸೂಕ್ಷ್ಮಗ್ರಾಹ್ಯವಾದವನಿಗೆ ಮಾತ್ರ ದಕ್ಕಬಹುದಾದ, ಸಂಕೀರ್ಣ ಸಂಬಂಧಗಳನ್ನು ಸೂಕ್ತ ಪದಗಳಲ್ಲಿ ಕಟ್ಟಿಕೊಡುವ ಯಶಸ್ವಿ ಪ್ರಯತ್ನ ಅರಿವು, ಹಸಿವು, ಅಮ್ಮ, ಅಂಗಳ, ರಂಗೋಲಿ, ಪುಷ್ಪವತಿಯ ಸ್ವಗತ, ಅಕ್ಕ ಚಿಟ್ಟಿ ಮತ್ತು ಗಾಳಿಪಟ ಕವಿತೆಗಳಲ್ಲಿವೆ. ತಾನೊಬ್ಬ ಪುರುಷನೆಂಬ ಭ್ರಮೆಯಾಚೆ ಸಹಜೀವಿ ಮನುಷ್ಯನಾಗಿ ಅಂತಃಕರಣದ ಕಣ್ಣುಗಳಿಂದ ಕಂಡ ಹೆಣ್ಣಿನ ಬದುಕನ್ನು ತೀವ್ರ ಸಂವೇದನೆಗಳಿಂದ, ವಿಷಾದ, ಮರುಕದ ಒಟ್ಟೊಟ್ಟಿಗೆ ಚೈತನ್ಯವನ್ನೊದಗಿಸುವ ಸಾಧ್ಯತೆಗಳತ್ತ ಈ ಕವಿ ಸಂಯಮದಿಂದ ನಡೆದಿದ್ದಾರೆ.

ಸರ್ಪಭೀತಿಯ
ಅಕ್ಕ ಮರೆತಳು ಪ್ರಶ್ನೆಯ
ಕಾವು ಕೊಟ್ಟಿದ್ದು ಹಾವು ಹುಟ್ಟಿದ್ದು
ಒಂದೊಂದೇ ನೆನಪನೆಕ್ಕುತ್ತ
ನಂಜನಗಿಯುತ್ತ
ಅಕ್ಕ ಅತ್ತಳು ಒಂದೇ ಸಮನೆ

ಇಲ್ಲಿನ ಕೆಲವು ಕವಿತೆಗಳು ಬಹುವಾಗಿ ಪ್ರಭಾವಿಸಿರುವ ಅಕ್ಕ ಸ್ತ್ರೀ ಬದುಕಿನ ಸಂಕೀರ್ಣ ಸಂಕಟದ ರೂಪಕವಾಗಿದ್ದಾಳೆ. ಮಾತ್ರವಲ್ಲ, ಅವಳು ನಮ್ಮ ನಿಮ್ಮ ನಡುವಿನ ಜೀವವಾಗಿಯೂ ಕಾಡುವ ತಾಕತ್ತಿನವಳು.

ಹರಿದ ರವಿಕೆಯೊಳಗಿಂದ ಹಸಿದ ಕಂದನ ತುಟಿಗೆ ಜೋತ ಮೊಲೆಯಿಟ್ಟು, ಎದೆಯ ನೆತ್ತರು ಬಸಿದು ಹಾಲೂಡಿ ನಕ್ಕ ತಾಯಿಯ ಚಿತ್ರವನ್ನು, ಅವಳ ಒಟ್ಟಂದದಲ್ಲಿಯೇ ಕಟ್ಟಿಕೊಂಡು ಮೌಲಿಕ ಯತ್ನವನ್ನು, ಯಥಾವತ್ತಾಗಿ ತೆಗೆದುಕೊಳ್ಳುವುದಾದರೆ ಕ್ಷುದ್ರಗೊಂಡ ಮನವೊಮ್ಮೆ ಮಾನವೀಯತೆಯ ಆಲಿಂಗನದಲ್ಲಿ ಮೀಯದಿರಲು ಸಾಧ್ಯವಿಲ್ಲ.

ಅಪ್ಪ ಹಸಿದಾಗ
ಅಮ್ಮನ ಕಡೆ ನೋಡುತ್ತಾನೆ
ಅಮ್ಮ ಊಟ ಬಡಿಸೊಲ್ಲ
ತುಟಿಯಂಚಿನಲಿ ಕಿಸಕ್ಕನೆ ನಗುತ್ತಾಳೆ

ನನಗೆ ಭಯವಾಗುತ್ತದೆ
ನಾನು ರಗ್ಗಿನೊಳಗೆ ನುಸುಳಿಕೊಳ್ಳುತ್ತೇನೆ.

ಸೃಜನಶೀಲ ಮನಸ್ಸುಗಳ ಬಹುಮುಖ್ಯ ತಲ್ಲಣವೆಂದರೆ ಅನನ್ಯತೆಯ ಹುಡುಕಾಟ. ಈ ಅನನ್ಯತೆಯನ್ನು ಕಂಡುಕೊಳ್ಳಲು, ಸಾಕ್ಷಿಗಳ ಮೂಲಕ ಸಾಬೀತುಪಡಿಸಲು ಯಲ್ಲಪ್ಪ ಬಹುವಾಗಿ ದಣಿದಂತಿದೆ. 'ನೀನು ಬಯಸಿದ ಉತ್ತರವಲ್ಲ । ನನ್ನ ಬದುಕು । ನಿನ್ನ ನಿರೀಕ್ಷೆಯ ಶೈಲಿಯೂ ಅಲ್ಲ । ನನ್ನ ನಡೆನುಡಿ ಕಳೆದುಬಿಡು । ತಪ್ಪಾಗಿದ್ದಾಗಲೂ ನನಗೆ ಬರಬಹುದಾಗಿದ್ದ । ಪೂರ್ಣಾಂಕವ' ಇಂತಹ ಸಾಲುಗಳಾಗಲೀ, 'ಮಣ್ಣಿನ ವಾಸನೆ ಭೂಮಿಗಿಳಿಯುವುದಿಲ್ಲ । ಬಾನಿಗೆಳಸುತ್ತದೆ । ತರಗತಿಯ ತೆರದಿ ನಾನಾರಿಗೂ । ಸಿಕ್ಕ ಬಯಸುವುದಿಲ್ಲ' ಎನ್ನುತ್ತಲೇ ತಾನುತಾನಾಗಿಯೇ ಕಾಣಬಹುದಾದ ಸಾಧ್ಯತೆ ಯಾವುದು? ಇದು ತಾನೆ ಎಂದು ಗುರುತಿಸಬಹುದಾದ ವಿನ್ಯಾಸ ಯಾವುದು? ಎಂಬುದನ್ನು ಅರಿಯುವ ಹಪಹಪಿ ಸುಪ್ತವಾಗಿಸಲೆತ್ನಿಸಿದರೂ ಗೋಚರಿಸುವ ಸತ್ಯದ ಸಾಲುಗಳು ಕವಿಯ ಬುದ್ಧಿಪೂರ್ವ ಎಚ್ಚರವನ್ನು ಮೀರಿಯೂ ಪ್ರದರ್ಶಿತವಾಗಿವೆ. ಕವಿಯ ಈ ತಾಕಲಾಟದ ಧಣಿವು 'ಅಗತ್ಯವಿಲ್ಲ ಚಮ್ಮಾರನ ಹಾವುಗೆಯಲ್ಲಿ । ಮೈಯಾಗಿ ಮಲಗಿದರೂ । ಶತಮಾನಗಳ ತುಳಿತಕ್ಕೂ । ಹೆಜ್ಜೆ ಗುರುತುಗಳೇ । ಇರದ ತೊಗಲು । ನನ್ನ ಬದುಕು' ಎನ್ನುವ ಚರಮಗೀತೆಯು ಮೌಲಿಕತೆಯಾಚೆ ಕವಿಯ ಒಳಮನಸ್ಸಿನಲ್ಲಿ ಹರಳುಗಟ್ಟಿರಬಹುದಾದ ಜೀವಪರ ಕಾಳಜಿ ಅತ್ಯಂತ ವಿಶಿಷ್ಟ ಅನನ್ಯತೆಯನ್ನು ತಾನಾಗಿಯೇ ರೂಪಿಸುತ್ತದೆ. ಕವಿಯ ಅರಿವು ವಿಸ್ತರಿಸಿದಂತೆಯೇ ಬದುಕಿನ ದಟ್ಟ ಅನುಭವವೂ ಅಂತಸ್ಥವಾಗಿರುವಾಗ ಅನನ್ಯತೆ ಯಾರ ಸ್ವತ್ತೂ ಅಲ್ಲ ಸಾಧಿಸುವವರ ಹೊರತು.


ಟಿ.ಯಲ್ಲಪ್ಪ

ಬದುಕ ದುರಂತ, ಪ್ರಕೃತಿ ದುರಂತವನ್ನು ಒಟ್ಟಾಗಿಯೇ, ಅಷ್ಟೇ ಗಂಭೀರವಾಗಿ ಪರಿಗಣಿಸುವ ಯಲ್ಲಪ್ಪ 'ನನ್ನ ತೆಪ್ಪದಲ್ಲಿನ ರಂಧ್ರಗಳು । ನನಗೇ ಕಾಣುವುದಿಲ್ಲ' ಎನ್ನುತ್ತಲೇ ಕಾರ್ಖಾನೆಯುಗುಳಿದ 'ಹೊಗೆ ನುಂಗಿ । ಕಪ್ಪಾಗಿದೆ ಮೋಡ । ಮಳೆಯನೆರಲಾರದೆ ಬಂಜೆ ಬಾನು' ಎಂಬಂತಹ ಚಿತ್ರಾತ್ಮಕ ಸಾಲುಗಳ ಮೂಲಕ ಗಾಯಗಳ ಮೇಲೆ ತಣ್ಣಗೆ ಮುಲಾಮಿನ ಗಾಳಿಯೂದುವ ಪ್ರಯತ್ನ ಮಾಡುತ್ತಾರೆ.

ಬದುಕಿನ ಹಲವು ಮಗ್ಗಲುಗಳ ಕದ ತಟ್ಟಿರುವ ಯಲ್ಲಪ್ಪ ಕೇವಲ ತಾವು ಮಾತ್ರ ಕೊಡಬಹುದಾದ ಚಿತ್ರಗಳನ್ನು ಸೃಷ್ಟಿಸುವುದು ಅಭಿನಂದನೀಯ. ಪ್ರಕೃತಿ, ಹೆಣ್ಣುಜೀವವನ್ನು ಒಟ್ಟಂದದಲ್ಲಿ ಕೊಡುವ ಪ್ರಯತ್ನ ವಿಶಿಷ್ಟ. ಆದರೆ ಈ ಕವಿಯ ಅಷ್ಟೂ ಬುದ್ಧಿಮತ್ತೆಯ, ಜೊತೆಯಲ್ಲಿಯೇ ಅಷ್ಟೂ ಬದುಕಿನ ಆರ್ದ್ರ ಅನುಭವಗಳಲ್ಲಿ ಕಂಡುಂಡ ಸಾಮಾಜಿಕ ಬದುಕೇಕೆ ಗೈರಾಗಿದೆ? ಕೇವಲ ತಾನು, ತನ್ನ ಸಂಬಂಧ, ತಾನು ಜೀವಿಸುವ ಪ್ರಕೃತಿ ಪ್ರಭಾವಿಸಿರುವಂತೆಯೇ ಯಾಕೆ ಈ ಕಾಲದ ಕರಾಳತೆಗಳು ಇವರ ಹೃದಯವನ್ನು ವಿಚಲಿತಗೊಳಿಸಿಲ್ಲ, ಅಥವಾ ಇದೊಂದು ಪೂರ್ವಗ್ರಹಿತ ವಿಮುಖತೆಯೋ? ಮತ್ತಷ್ಟು ಕ್ಷುದ್ರಗೊಳಿಸುತ್ತಿರುವ ಸಾಮಾಜಿಕ, ರಾಜಕೀಯ, ಸ್ಥಿತ್ಯಂತರಗಳು ಅಧೋಲೋಕವನ್ನು ಅಲ್ಲಿಯೇ ಬಿಟ್ಟು ಆಧುನಿಕೋತ್ತರ ಬದುಕಿನೆಡೆಗೆ ಧಾವಿಸಿರುವ ದಾರುಣತೆ ಈ ಕವಿಯ ಅರಿವಿಗೆ ನಿಲುಕದ್ದೇ?

■ ವೀರಣ್ಣ ಮಡಿವಾಳರ

'ತಾಲಿಬಾನ್‌ಕರಣ'ವಲ್ಲ 'ಮಂಗ್ಲೂರೀಕರಣ'

ಒಂದು ಪತ್ರ

ಮಂಗಳೂರು 'ತಾಲಿಬಾನ್‌ಕರಣಗೊಳ್ಳುತ್ತಿದೆ' ಎಂಬ ಕೇಂದ್ರ ಸಚಿವೆ ರೇಣುಕಾ ಚೌಧರಿಯವರ ಹೇಳಿಕೆಗೆ 80% ಮಂಗಳೂರು ನಾಗರಿಕರ ಸಹಮತಿಯಿದೆ. ವಿದ್ಯಾರ್ಥಿ ಸಮುದಾಯವಂತೂ ನೂರಕ್ಕೆ-ನೂರು ರೇಣುಕಾರವರ ಮಾತನ್ನು ಸಮರ್ಥಿಸುತ್ತದೆ. ನಗರವನ್ನೇ 'ತಾಲಿಬಾನ್' ಎನ್ನುವುದಕ್ಕೂ, ಒಂದು ಸುಸಂಸ್ಕೃತ ನಗರ 'ತಾಲಿಬಾನ್'ಕರಣಗೊಳ್ಳುತ್ತಿದೆ ಎಂದು ಹೇಳುವುದಕ್ಕೂ ಬಹಳ ವ್ಯತ್ಯಾಸವಿದೆ. ಏನಿದ್ದರೂ ನಗರದ 60 ವಾರ್ಡ್‌ಗಳಲ್ಲಿ ಕೇವಲ ಒಂದು ವಾರ್ಡ್ ಅನ್ನು ಪ್ರತಿನಿಧಿಸುವ ಒಬ್ಬ ಕಾರ್ಪೋರೇಟರ್ ಹಾಗೂ ನಗರದ ಅತಿ ಕೆಟ್ಟ ಕ್ರಿಮಿನಲ್‌ಗಳ ಕೆಲಸಗಳನ್ನೇ ತೆಗೆದುಕೊಂಡು ನಗರವನ್ನೇ ಅಪರಾಧೀಕರಣಗೊಳಿಸುತ್ತಿರುವ ಒಬ್ಬ ಕ್ರಿಮಿನಲ್ ಲಾಯರ್, ಇಬ್ಬರೇ ಕೂಡಿಕೊಂಡು ರೇಣುಕಾ ಮೇಲೆ ಕೇಸ್ ಹಾಕಿ, ಈಗ ತಾವು ಇಡೀ ಮಂಗಳೂರಿನ 6 ಲಕ್ಷ ನಾಗರಿಕರನ್ನು ಪ್ರತಿನಿಧಿಸುತ್ತಿರುವುದಾಗಿ ಕೊಡುತ್ತಿರುವ ಹೇಳಿಕೆ ಹಾಸ್ಯಾಸ್ಪದವಾಗಿದೆ.

ಮುಂಬೈ ಭೂಗತ ಜಗತ್ತಿಗೆ ಅತಿಹೆಚ್ಚು 'ಶೂಟರ್'ಗಳನ್ನು ಒದಗಿಸುವ ಮಂಗಳೂರನ್ನು ಮುಂಬೈಯವರು ಭೂಗತ ಕ್ರಿಮಿನಲ್‌ಗಳ ತವರೂರು ಎನ್ನುತ್ತಾರೆ. ಶೆಟ್ಟಿ, ಪೂಜಾರಿ, ಹೆಗಡೆ, ರೈ ಎಂಬ ಹೆಸರುಳ್ಳವರಿಗೆ ಅಲ್ಲಿ ಬಾಡಿಗೆಗೆ ಮನೆ ಕೊಡಲು ಸ್ಥಳೀಯರು ಹಿಂದೆ ಮುಂದೆ ನೋಡುತ್ತಾರೆ. ಕಾರಣ ಈ ಹೆಸರುಳ್ಳವರೆಲ್ಲಾ ಕ್ರಿಮಿನಲ್ ಹಿನ್ನಲೆಯವರೇ ಎಂದು ಅಲ್ಲಿನವರ ತಪ್ಪು ಅಭಿಪ್ರಾಯ. ವ್ಯಾಲೆಂಟೈನ್ಸ್ ಡೇಯಂದು ಹರಿಯಾಣದಲ್ಲಿ ಮಾರಲ್-ಪೊಲೀಸರು ಒಂದು ಜೋಡಿ ಯುವಕ-ಯುವತಿಗೆ ಹೊಡೆದದ್ದಕ್ಕೆ ಹರಿಯಾಣದ ಪತ್ರಿಕೆಗಳು ಅದನ್ನು 'ಮಂಗ್ಲೂರ್‌ಗಿರಿ' ಅಥವಾ 'ಮಂಗ್ಲೂರೀಕರಣ' ಎಂದು ಕರೆದವೇ ವಿನಃ ತಾಲಿಬಾನ್‌ಕರಣವೆನ್ನಲಿಲ್ಲ. ಕೇರಳದ ಪತ್ರಿಕೆಗಳು ಮೊದಲಿನಿಂದಲೂ ಮಂಗಳೂರಿಗೆ ಗೌರವಯುತವಾಗಿ 'ಮಂಗಳಾಪುರಂ' ಎಂದೇ ಕರೆಯುತ್ತಿದ್ದವು. ಆದರೆ ಈಗ ಮಂಗಳಾಪುರಂ ಬದಲಿಗೆ 'ತಾಲಿಬಾನ್‌ಪುರಂ' ಎನ್ನುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಯಾರ ಮೇಲೆಲ್ಲಾ ಕಾರ್ಪೋರೇಟರ್ ಮತ್ತು ಲಾಯರ್ ಕೇಸ್ ಹಾಕಲು ಸಾಧ್ಯ?


ಹೆಚ್ಚಾಗಿ ಎಲ್ಲಾ ಶಾಲಾ-ಕಾಲೇಜುಗಳು ಜನವರಿ-ಫೆಬ್ರವರಿ ತಿಂಗಳಲ್ಲೇ ಸ್ಟಡಿ-ಟೂರ್ ಇಟ್ಟುಕೊಳ್ಳುವುದು. ಆದರೆ ಈ ವರ್ಷ ಕೇಸರಿ ಪಡೆಗಳ ಪುಂಡಾಟಿಕೆಯಿಂದಾಗಿ 13 ಕಾಲೇಜುಗಳು ಈಗಾಗಲೇ ತಮ್ಮ ಸ್ಟಡಿ-ಟೂರ್‌ಗಳನ್ನು ಒಂದೋ ಕ್ಯಾನ್ಸಲ್ ಮಾಡಿವೆ ಅಥವಾ ಕೇವಲ ಗಂಡು ಹುಡುಗರನ್ನು ಮಾತ್ರ ಟೂರ್‌ಗೆ ಕರೆದುಕೊಂಡುಹೋಗಿವೆ. ಇದರಿಂದಾಗಿ ವಿದ್ಯಾರ್ಥಿನಿಯರ ಅಭ್ಯಾಸಕ್ಕೆ ಹಿನ್ನಡೆಯುಂಟಾಗಿದೆ. ಕೇಸರಿ ಪಡೆಗಳಲ್ಲಿ ಯಾರೂ ಎಸ್ಸೆಸ್ಸೆಲ್ಸಿಗಿಂತ ಹೆಚ್ಚು ಕಲಿತವರಿಲ್ಲ, ಅಂತಹವರಿಗೆ ಉಚ್ಚ ಶಿಕ್ಷಣದ ಮಹತ್ವ ಹೇಗೆ ಅರ್ಥವಾದೀತು?

ಇನ್ನು ಕೇಸರಿ ಪಡೆಗಳೆಲ್ಲಾ 'ಅಪರಾಧೀಕರಣಗೊಂಡಿವೆ' ಎನ್ನುವುದಕ್ಕೆ ತಾಜಾ ಪುರಾವೆ ಇಲ್ಲಿದೆ- ಕಳೆದವಾರ, ಹಲವಾರು ಕೊಲೆ-ಸುಲಿಗೆ ಕೇಸ್‌ಗಳಲ್ಲಿ ಬೇಕಾಗಿದ್ದು ತಲೆಮರೆಸಿಕೊಂಡಿದ್ದ 'ಕ್ಯಾಂಡಲ್ ಸಂತು' ಎಂಬ ಕುಖ್ಯಾತ ಕ್ರಿಮಿನಲ್‌ನನ್ನು ಅವನ ಸಹಚರರೇ ಕೊಂದರು. ಅಂತೆಯೇ ಮಂಜುನಾಥನೆಂಬ ಖಾಸಗಿ ಫೈನಾನ್ಸ್ ಕಂಪನಿಯ ರೌಡಿ 'ಸೀಜರ್'ನನ್ನು ಅವನ ಜೊತೆಗಾರರೇ ಹಣದ ಅವ್ಯವಹಾರಕ್ಕಾಗಿ ಕೊಲೆಗೈದರು. ಆದರೆ ಇವರಿಬ್ಬರೂ ಹಿಂದೂ ಸಂಘಟನೆಗಳ ಕಾರ್ಯಕರ್ತರಾಗಿದ್ದ ಕಾರಣ ಅವರ ಮರಣ 'ಸಮಾಜದ ಒಳಿತಿಗಾಗಿ ಅವರು ಕೊಟ್ಟ ಬಲಿದಾನ' ಎಂಬ ರೀತಿಯಲ್ಲಿ ಹಿಂದೂ ಜಾಗರಣ ವೇದಿಕೆ ಅವರಿಬ್ಬರ ಕುಟುಂಬದ ಪರಿಹಾರಕ್ಕಾಗಿ ಎನ್ನುತ್ತಾ ಲಕ್ಷಾಂತರ ರೂಪಾಯಿ ಜನರಿಂದ ಜಬರ್‌ದಸ್ತ್ ಕಲೆಕ್ಷನ್ ಮಾಡಿದೆ. ಅವರಿಬ್ಬರೂ ದೊಡ್ಡ ಸಮಾಜಸೇವಕರು, ಧರ್ಮದ ರಕ್ಷಕರು ಎಂಬಂತೆ ಸಾರ್ವಜನಿಕವಾಗಿ ಬಿಂಬಿಸಲಾಗುತ್ತಿದೆ. ಕ್ರಿಮಿನಲ್‌ಗಳ ಈ ರೀತಿಯ glorification ಕಂಡು ಎಲ್ಲಾ ಕ್ರಿಮಿನಲ್‌ಗಳಿಗೆ ತಾವೂ ಹಿಂದೂ ಸಂಘಟನೆ ಸೇರಿಕೊಂಡರೆ ಜನರಿಂದ ಗೌರವ, ಪೊಲೀಸರಿಂದ ರಕ್ಷಣೆ ಹಾಗೂ ಸತ್ತರೆ ಕುಟುಂಬಕ್ಕೆ ಲಕ್ಷಾಂತರ ಪರಿಹಾರ ಸಿಗುತ್ತದೆ ಎಂಬುದು ಖಾತ್ರಿಯಾಗಿ, ಸಣ್ಣ-ದೊಡ್ಡ ಕ್ರಿಮಿನಲ್‌ಗಳೆಲ್ಲ ಈಗ ಒಂದಲ್ಲ ಒಂದು ಕೇಸರಿ ಸಂಘಟನೆಯೊಂದಿಗೆ ಗುರುತಿಸಿಕೊಳ್ಳುತ್ತಿದ್ದಾರೆ. ಹಾಗಾಗಿ ಮರ್ಯಾದಸ್ಥರೆಲ್ಲಾ ಈ ಸಂಘಟನೆಗಳಿಂದ ದೂರ ಸರಿದಿದ್ದಾರೆ. ಮಂಗಳೂರಿನ ಮತ್ತೊಬ್ಬ ಹಿಂದೂ ಕ್ರಿಮಿನಲ್ ಈಗ 'ಧಾರ್ಮಿಕ ಕಾರ್ಯಕರ್ತ' ಎಂಬ ಹಣೆಪಟ್ಟಿ ಹಚ್ಚಿಕೊಂಡಿದ್ದಾನೆ. ಇದು ಕರಾವಳಿಯಲ್ಲಿ ಇಡೀ ಧರ್ಮ ಅಪರಾಧೀಕರಣಗೊಂಡಿದೆ ಎಂಬುದಕ್ಕೆ ಸಾಕ್ಷಿ.

-ಪ್ರವೀಣ್ ಎಸ್. ಶೆಟ್ಟಿ
ಮಂಗಳೂರು


ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು 8



ಅಕ್ಷರ ರೂಪ: ಅಕ್ಷತಾ ಕೆ.

ಹಸಿರು ಶಾಲು ಪರಿಚಯಿಸಿದ್ದು ನಾನು





ತವೆ ಚಳವಳಿ ...ನಡೆದ ...ವೇ ಮಾತುಕತೆಗೆ ...ಬು ರೈತರನ್ನು ...ಮಾವತೊವಗಿವೆವು. ...ಳ್ಳಿಯ ಸಭೆಯಲ್ಲಿ ...ಜೆಪಿ ಪಕ್ಷದ ...ಮುಖಂಡರು ...ಟ ಚಳವಳಿಯನ್ನು ... ಕೇಳಿ ವಾಪಸ್ ... ಅಂತೆಲ್ಲ ಕ್ಯಾತೆ ತೆಗೆದರು. ಆದರೆ ...ಕ್ಷದವರೇ ಆದ ನರಸಿಂಹನಾಯಕರು ...ಪರವಾಗಿ ಅವರು ನಿರ್ಧಾರ ...ದ್ದಾರೆ. ನಾಳೆಯೇ ಮಾತುಕತೆಗೆ ...ಕು. ಅಂತದ್ರಲ್ಲಿ ನಮ್ಮನ್ನೆಲ್ಲ ಎಲ್ಲಿ ...ು ಬಂದು ಒಪ್ಪಿಗೆ ಪಡ್ಕೊಳ್ತಾರೆ: ಯಾಕೆ ... ನಮ್ಮ ಒಪ್ಪಿಗೆ ಬೇಕು. ನಮ್ಮನ್ನು ಅವರ ... ಸೇರಿಸಿಕೊಂಡಿದ್ದಾರೆ, ಅದು ಅವರ ...ಸ. ರೈತಸಂಘದ ಹಿಂದೆ ನಾವು ... ಇದ್ದರೆ ಬೇಲಿ ಇಲ್ಲದ ಗೂಟ ಆಗ್ತೀವಿ. ...ಧಾರಕ್ಕೂ ಏನು ಇರಲ್ಲ. ಆದ್ದರಿಂದ ...ಯಾವುದೇ ನಿರ್ಧಾರ ತಗಂಡ್ರೂ ನಾವು ... ಬೆಂಬಲ ಕೊಡೋಣ'' ಎಂದರು. ...ಉಳಿದವರು ಸುಮ್ಮನಾದರು.

...ತೆಗೆ ಹೋಗೋ ಸಂದರ್ಭದಲ್ಲಿ ಯಾವ ...ು ಪಕ್ಷಕ್ಕೂ ಸೇರದ ಪಕ್ಷಾತೀತವಾಗಿರುವ ...ಸಮಿತಿಯನ್ನೇ ರಚಿಸಿಕೊಂಡ್ವಿ.

...ತುಕತೆ ಸಂದರ್ಭದಲ್ಲಿ ಗುಂಡೂರಾಯರು ...ಮಾತೊಂದು ಇವತ್ತಿಗೂ ನನಗೆ ... "ನಮ್ಮ ತಂದೆ ಮೇಷ್ಟ್ರು. ಅವರು ... ಅಪರೂಪಕ್ಕೆ ಚಳವಳಿ ಮಾಡ್ತಿದ್ದಾರೆ. ...ವಲೂ ಕಷ್ಟವೋ ನಷ್ಟವೋ ರೈತರು ...ಸಿಕೊಂಡೆ ಇರ್ತಾರೆ ವಿನಃ ಚಳವಳಿ ಎಲ್ಲ ...ವರಲ್ಲ. ಈಗಲೂ ರೈತರು ದಂಗೆ ... ಅಂತ ಭಾವಿಸದೇ ಅವರನ್ನು ಕರೆಸಿ ...ಷ್ಟ ಸುಖ ವಿಚಾರಿಸಿಕೋ, ಅವರ ...ಳನ್ನು ಪರಿಹರಿಸು' ಅಂತ ಹೇಳಿದ್ರು.''

...ತ್ತೊಂಬತ್ತು ಬೇಡಿಕೆಗಳಲ್ಲಿ ಸರ್ಕಾರ ...ಮು ಬೇಡಿಕೆಗಳ ಈಡೇರಿಕೆಗೆ ಒಪ್ಪಿಗೆ ... ರೈತ ಹೋರಾಟದ ಪೂರ್ಣ ಆಶಯ ...ವಿದ್ದರೂ ಸಂಘಟನೆಗೆ ಮೊದಲ ಹಂತದ ... ರುಚಿ ಸಿಕ್ಕಿತ್ತು. ರಾಜಧಾನಿಯಿಂದ ...ಗಿದ ಕೂಡಲೇ ರೈತಸಂಘವನ್ನು ...ಜಿ ಗಟ್ಟಿಯಾಗಿ ಕಟ್ಟಲು ನಿರ್ಧಾರ ... ಇಲ್ಲಿಂದ ಮುಂದೆ ರುದ್ರಪ್ಪನವರು ...ದರು. ರಾಜ್ಯ ಸಂಚಾಲಕರಾಗಿ ...ತಸ್ವಾಮಿ ಪೂರ್ತಿ ಆಕ್ಟೀವ್ ಆಗ್ಬಿಟ್ರು ...ಘವನ್ನ ತಮ್ಮ ಕೈಗೆ ತೆಗೆದುಕೊಂಡ್ರು. ...ಘದ ರಾಜ್ಯ ಕಮಿಟಿ ಮಾಡಬೇಕು ...ನಿರ್ಧಾರ ಆಯಿತು.

... ಜಿಲ್ಲೆಗೆ ಒಬ್ಬರನ್ನ ಅಧ್ಯಕ್ಷರನ್ನಾಗಿ ...ಣ ಅಂತ ನಂಜುಂಡಸ್ವಾಮಿ ಹೇಳಿದ್ರು. ...ದು ಸರಿ ಬರಲಿಲ್ಲ. ಗ್ರಾಮ ಮಟ್ಟದಿಂದ ...ಆಗಬೇಕು. ಗ್ರಾಮ, ತಾಲ್ಲೂಕು, ಜಿಲ್ಲೆ ...ರಾಜ್ಯ ಹೀಗೆ ಚತುಸ್ತಂಭದ ಆಧಾರದಲ್ಲಿ ...ನೇಮಕ ಆಗಬೇಕು ಅನ್ನೋದು ನನ್ನ ...ವಾಗಿತ್ತು. ಇದರ ಹಿಂದೆ ಇದ್ದಿದ್ದು ...ಮೂ ಸಿದ್ಧಾಂತದ ಪ್ರಭಾವ. ನಾನು ...ಸಭೆಯಲ್ಲೆ "ರಾಜ್ಯದಲ್ಲಿ ಎಪ್ಪತ್ತೈದು ...ತರಿದ್ದಾರೆ. ಅಂತದ್ರಲ್ಲಿ ಜಿಲ್ಲೆಗೊಬ್ಬ ...ಎಲ್ಲಿಗೆ ಸಾಕಾಗುತ್ತೆ, ಗ್ರಾಮ ಮಟ್ಟದಿಂದ ...ಮಾಡಬೇಕು. ಆದರೆ ಅದು ಸಾಧ್ಯವೇ ...ದ ಪಕ್ಷದಲ್ಲಿ ತಾಲ್ಲೂಕು ಮಟ್ಟದಿಂದ ...ಮಾಡೋಣ. ತಾಲ್ಲೂಕಿಗೊಬ್ಬರು ..., ಕಾರ್ಯದರ್ಶಿಯನ್ನು ನೇಮಕ ... ಅಂತ ನಂಜುಂಡಸ್ವಾಮಿಯವರಿಗೆ ... ಅವರಿದ್ಕೋರು "ಸಾಧ್ಯವೇ ಇಲ್ಲ. ...ತ್ತು ಮುನ್ನೂರು ಜನ ...ರಿಗಳನ್ನ ನೇಮಿಸಿಕೊಂಡು ಕಷ್ಟ ಕಣ್ರಿ ...ಕಾಗಲ್ಲ'' ಅಂದ್ರು. ನಾನಿದ್ದೋನು ...ಪ್ಪತ್ತು ಐನೂರು ಜನ ...ರಿಗಳಾದರೆ ತಪ್ಪೇನಿದೆ? ನಮ್ಮ ರಾಜ್ಯ ...ನೋಡಿದ್ರೆ ಹೆದರಿಕೆ ಹುಟ್ಟಿಸೋ ...ಕು: ... ಬಿ.ಜೆ. ... ...ಾ? ಅವರ ಖರ್ಚಲ್ಲಿ ರೈತರು ಸಭೆಗೆ ...ಬುತ್ತಿ ಕಟ್ಟಿಕೊಂಡು ಬಂದು ಊಟ ಮಾಡ್ತಾರೆ. ತಾಲ್ಲೂಕು ಮಟ್ಟದಿಂದ ಸಮಿತಿ ರಚನೆಯಾಗಬೇಕು'' ಅಂತ ಪಟ್ಟು ಹಿಡಿದು ಕೂತೆ. ಜೊತೆಗೆ "ಒಂದು ವರ್ಷ ಸಮಿತಿಯ ಕಾರ್ಯ ಚಟುವಟಿಕೆಗಳನ್ನ ನೋಡೋಣ. ಸರಿ ಬರದಿದ್ದರೆ ನಂತರ ನೋಡೋಣ'' ಅನ್ನೋ ಸಲಹೆಯನ್ನೂ ಮುಂದಿಟ್ಟೆ. ನಂಜುಂಡಸ್ವಾಮಿಯವರು ಒಪ್ಪಿಗೆ ಕೊಟ್ಟರು. ನಂತರದ ದಿನದಲ್ಲಿ ಈ ನಿರ್ಧಾರದ ಬಗ್ಗೆ ಅವರಿಗೆ ಸಂತೋಷ ಆಯಿತು.

ಸಮಿತಿ ನೇಮಕ ಸಭೆಯಲ್ಲಿ ನನ್ನ ಪದಾಧಿಕಾರದ ಪ್ರಶ್ನೆ ಬಂತು. ರಾಜ್ಯ ಸಮಿತಿಯ ಯಾವುದಾದರೂ ಅಧಿಕಾರ ವಹಿಸ್ಕಳ್ಳಿ, ಇಲ್ಲಾಂದ್ರೆ ಜಿಲ್ಲಾ ಅಧ್ಯಕ್ಷರಾಗಿ ಹೀಗೆಲ್ಲ ವಿಧವಿಧದ ಸಲಹೆಗಳು ಬಂದವು. ನಾನಿದ್ದೋನು "ಸಂಘಟನೆ ಎಲ್ಲಿಲ್ಲವೋ ಅಲ್ಲಿ ಹೋಗಿ ಸಂಘಟನೆ ಕಟ್ತೀನಿ. ರೈತ ಸಂಘದ ಸುದ್ದಿ ಫೋಟೋ ಎಲ್ಲ ಪತ್ರಿಕೆಗಳಿಗೆ ಕೊಡುವ ಕೆಲಸ ಮಾಡ್ತೀನಿ. ಜಗಳ ನಡೆದರೆ, ಪರಸ್ಪರ ಭಿನ್ನಾಭಿಪ್ರಾಯ ಇದ್ದರೆ ನ್ಯಾಯ ತೀರ್ಮಾನ ಮಾಡ್ತೀನಿ. ಅದನ್ನ ಬಿಟ್ಟು ಪದಾಧಿಕಾರ ವಹಿಸಿಕೋ ಅಂದ್ರೆ ನನಗೆ ಆಗಲ್ಲ. ನಂಗ್ಯಾವ ಪದಾಧಿಕಾರವೂ ಬೇಡ'' ಅಂತ ಸ್ಪಷ್ಟ ಮಾತುಗಳಲ್ಲಿ ನಿರಾಕರಿಸಿದೆ. ಆದರೆ ತೀರ್ಥಹಳ್ಳಿಯ ಹುಡುಗರು ಬಿಡಲಿಲ್ಲ. "ಶಾಮಣ್ಣ, ನೀವು ನಮ್ಮ ತಾಲ್ಲೂಕು ರೈತ ಸಂಘಕ್ಕೆ ಅಧ್ಯಕ್ಷರಾಗಿ ಬನ್ರಿ. ನಾವು ಎಲ್ಲ ರೈತ ಸಂಘಗಳಿಗಿಂತ ತುಂಬಾ ಚೆನ್ನಾಗಿ ಚಟುವಟಿಕೆ ನಡೆಸೋಣ. ನಿಮಗೆ ಭಗವತಿಕೆರೆಯಿಂದ ತೀರ್ಥಹಳ್ಳಿಗೆ ಬರಕ್ಕೆ ತೊಂದರೆ ಆಗತ್ತೆ ಅಂತಾದ್ರೆ ವಾರಕ್ಕೊಮ್ಮೆ, ಹದಿನೈದು ದಿನಕ್ಕೊಮ್ಮೆ ಬನ್ನಿ ಸಾಕು. ನಾವು ನಿಭಾಯಿಸ್ತೀವಿ'' ಅಂತ ಹೇಳಿದ್ರು. ನಾನು ಸಂತೋಷದಿಂದಲೇ ತೀರ್ಥಹಳ್ಳಿ ತಾಲ್ಲೂಕು ರೈತ ಸಂಘದ ಅಧ್ಯಕ್ಷನಾದೆ.

ಒಂದು ಸಣ್ಣ ಘಟನೆ ಕೆಲವೊಮ್ಮೆ ಐತಿಹಾಸಿಕ ತೀರ್ಮಾನಕ್ಕೆ ಕಾರಣವಾಗುತ್ತದೆ. ರೈತರ ಹೆಗಲನ್ನು ಆವರಿಸಿ ಅವರಿಗೆ ಒಂದು ಅಸ್ತಿತ್ವ ತಂದುಕೊಟ್ಟ ಹಸಿರು ಶಾಲು ಮೊದಲಿಗೆ ಪರಿಚಯ ಆಗಿದ್ದು ಹಾಗೆಯೇ. ನಂತರದಲ್ಲಿ ಅದು ಕಡ್ಡಾಯವಾಗಿ ರೈತರ ಹೆಗಲ ಮೇಲೆ ಕಾಣಿಸಿಕೊಂಡಿತು. ಅದೇ ರೈತ ಸಂಘದವರ ಗುರುತು ಆಯಿತು. ಈ ತೀರ್ಮಾನಕ್ಕೆ ನಾನು ಕಾರಣಕರ್ತ ಅನ್ನೋ ಹೆಮ್ಮೆಯಂತೂ ಯಾವತ್ತಿಗೂ ನನಗಿರುತ್ತದೆ. ರಾಜ್ಯ ಸಮಿತಿ ರಚನೆಯಾಗೋ ಸಂದರ್ಭದಲ್ಲೇ ಕಬ್ಬು ಬೆಳೆಗಾರರ ಸಮಸ್ಯೆಗಳ ಚರ್ಚೆಗೆ ಸಂಬಂಧಿಸಿದಂತೆ ಶಿವಮೊಗ್ಗದ ಪಕ್ಷದ ಕಚೇರಿಯಲ್ಲಿ ಸಭೆ ಸೇರಿದ್ವಿ. ಆವತ್ತು ಸಭೆಗೆ ಹೋಗೋನು ಸಮಯ ಇದ್ದಿದ್ದರಿಂದ ಗೋಪಿ ಹೋಟೇಲ್ ಹತ್ತಿರ ಪರಿಚಿತರ ಬಟ್ಟೆ ಅಂಗಡಿಯಿತ್ತು, ಅಲ್ಲಿಗೆ ಹೋದೆ. ಅಲ್ಲಿ ಮಾತಾಡ್ತಾ ಕೂತಿದ್ದಾಗ ಹಸಿರು ಬಣ್ಣದ ಕ್ವೀನಿ ಬಟ್ಟೆಯ ಟಾನು ಕಣ್ಣಿಗೆ ಬಿತ್ತು. ಅದರಲ್ಲಿ ಒಂದು ಮೀಟರ್ ಬಟ್ಟೆ ಹರಿಸಿ ಅದನ್ನು ಸ್ಕೇರ್ ಆಕಾರದಲ್ಲಿ ತಲೆಗೆ ಕಟ್ಟಿಕೊಂಡು ಸಭೆಗೆ ಬಂದೆ. ತಮಿಳುನಾಡಿನ ರೈತ ಮುಖಂಡರಾದ ನಾರಾಯಣಸ್ವಾಮಿ ನಾಯ್ಡು ಅದರಲ್ಲಿ ಹಸಿರು ಟೊಪ್ಪಿ ಧರಿಸ್ತಿದ್ದರು. ಇಲ್ಲಿ ಕೂಡ ರೈತ ಸಂಘದ ಸಭೆ, ಚಳವಳಿಗೆ ಬರುವಾಗ ಹಸಿರು ಟೊಪ್ಪಿಯನ್ನು ಧರಿಸಿಕೊಂಡು ಬರುವುದನ್ನು ಕಡ್ಡಾಯ ಮಾಡಿದ್ದರೂ ಹೆಚ್ಚಿನ ರೈತರು ಧರಿಸ್ತಿರಲಿಲ್ಲ.

ನಾನು ತಲೆಗೆ ಕಟ್ಟಿಕೊಂಡು ಹೋಗಿದ್ದ ಹಸಿರು ಕ್ವೀನಿ ಬಟ್ಟೆ ಆವತ್ತಿನ ಸಭೆಯಲ್ಲಿ ಎಲ್ಲರ ಗಮನ ಸೆಳೆಯಿತು. ಎಲ್ಲಿ ಕೊಂಡ್ಕಂಡ್ರಿ ಅಂತ ಬಹಳಷ್ಟು ರೈತರು ವಿಚಾರಿಸಿದರು. ಅಶೋಕನಗರದ ಕೆಂಪರಾಜ್ ಇದ್ದವರು ಕೂಡಲೇ ಅದೇ ಅಂಗಡಿಗೆ ಹೋಗಿ ಬಟ್ಟೆ ಕೊಂಡು ತಲೆಗೆ ಕಟ್ಟಿಕೊಂಡು ಬಂದ್ರು. ಅವರನ್ನ ನೋಡಿ ಮತ್ತೊಬ್ಬರು ಹಾಗೆ ಮಾಡಿದರು. ಮತ್ತೊಬ್ಬರನ್ನ ನೋಡಿ ಮಗದೊಬ್ಬರು ಹೀಗೆ ಆವತ್ತಿಡಿ ದಿನ ಯಾವ ಉದ್ದೇಶಕ್ಕೆ ಸಭೆ ಸೇರಿದ್ವೋ ಆ ವಿಷಯ ಚರ್ಚೆಯಾಗಿದ್ದಕ್ಕಿಂತ ಹಸಿರು ಬಟ್ಟೆ ಬಗ್ಗೆಯೇ ಹೆಚ್ಚಿನ ಗಮನ ಹೋಯಿತು. ಸಂಜೆ ಹೊತ್ತಿಗೆ ಆ ಅಂಗಡಿಯಲ್ಲಿದ್ದ ಎರಡ್ನೂರು ಟಾನು ಬಟ್ಟೆಯೂ ಖರ್ಚಾಯ್ತು. ಎಲ್ಲವನ್ನು ಸಭೆಯಲ್ಲಿದ್ದ ರೈತರೇ ಒಂದೊಂದು ಮೀಟರ್ ಲೆಕ್ಕದಲ್ಲಿ ಖರೀದಿಸಿದ್ದರು. ದುಡ್ಡು ಮಾತ್ರ ಯಾರೂ ಕೊಡಲಿಲ್ಲ. ಅವರೆಲ್ಲ ಅಂಗಡಿಗೊ ಹೋಗೋದ್ರು, ಶಾಮಣ್ಣ ಹೇಳಿದಾರೆ ಒಂದು ಮೀಟರ್ ಬಟ್ಟೆ ಕೊಡಬೇಕಂತೆ ಅನ್ನದು, ತಗಂಬರದು. ಅಂಗಡಿಯವರಿಗೇನು ಯಾವತ್ತಿದ್ದರೂ ಶಾಮಣ್ಣ ಕೊಟ್ಟೆ ಕೊಡ್ತಾರೆ ಅನ್ನೋ ನಂಬಿಕೆ. ಇವರು ಕೇಳಿದ್ದ ಹಾಗೆಲ್ಲ ಅವರು ಒಂದೊಂದೆ ಮೀಟರ್ ಹರಿದುಕೊಡ್ತಾ, ಭರ್ಜರಿ ವ್ಯಾಪಾರ ಆಗ್ತಿದೆ ಅಂತ ಖುಷಿ ಪಡ್ತಾ ನನ್ನ ಹೆಸರಿಗೆ ಬಾಕಿ ಲೆಕ್ಕ ಬರೀತಾ ಹೋದರು.

ಸಭೆಯಲ್ಲಿದ್ದ ಬಹುತೇಕ ರೈತರು ಯಾವಾಗ ಹಸಿರು ಬಟ್ಟೆ ಕಟ್ಟಿಕೊಂಡು ಕಾಣಿಸಿಕೊಂಡ್ರೂ ಆಗ "ಇದೇನು ಬಾಬಯ್ಯನ ಹಬ್ಬನೇನ್ರಿ ಹಸಿರು ಬಟ್ಟೆ ಕಟ್ಟಿಕೊಂಡಿದ್ದೀರಲ್ಲ'' ಅಂತ ನಂಜುಂಡಸ್ವಾಮಿ ಅಣಕವಾಡಿದರು. ಸುಂದ್ರೇಶ್ ಕೂಡಾ "ಇದೇನ್ರಿ ಶಾಮಣ್ಣ ಹಸಿರು ಬಟ್ಟೆ ತಲೆಗೆ ಕಟ್ಟಿಕೊಂಡು...'' ಅಂತ ರಾಗ ಎಳೆದರು. "ನಾನಂತೂ ಇವತ್ತಿಂದ ಕಡ್ಡಾಯವಾಗಿ ಹಸಿರು ಬಟ್ಟೆ ಕಟ್ಟಿಕೊಳ್ಳುವವನೇ. ನೀವು ಕೂಡಾ ಕಟ್ಟಿಕೊಳ್ಳಿ ಅಂತ್ಲೇ ನಾನು ಹೇಳ್ತೀನಿ. ನಾವ್ಯಾವಾಗ್ಲೂ ಏನು ಮಾಡ್ತೀವಿ ಅಂದ್ರೆ ಕಡಿದಾಳ್ ಮಂಜಪ್ಪನವರ ಕುಟುಂಬದವನು ಅಂತಾನೋ, ಆ ಇಂಜಿನಿಯರರ ತಮ್ಮ, ಈ ಡಾಕ್ಟರರ ಅಣ್ಣ ಹೀಗೆ ನಮ್ಮನ್ನು ನಾವು ಗುರುತಿಸಿಕೊಳ್ತೀವಿ. ಇನ್ನು ಮೇಲೆ ಹೀಗಾಗಬಾರದು. ನಾನು ರೈತ ನನ್ನನ್ನು ರೈತ ಅಂತ್ಲೇ ಗುರುತಿಸಬೇಕು. ಅದಕ್ಕೊಂದು ಗುರುತು ಬೇಕು. ಈ ಹಸಿರು ಬಟ್ಟೆಯೇ ಆ ಗುರುತು. ಇನ್ನು ಮುಂದೆ ನನ್ನದು ಸ್ವಮರ್ಯಾದಿ ಚಳವಳಿ'' ಎಂದೆ.



ನಂತರದಲ್ಲಿ ನಾನೇ ಆಸಕ್ತಿ ವಹಿಸಿ ಖಾದಿ ಭಂಡಾರದಿಂದ ರೈತ ಸಂಘದ ಹೆಸರಿನಲ್ಲಿ ಇಪ್ಪತ್ತು ಸಾವಿರ ಬೆಲೆಯ ಹಸಿರು ಬಣ್ಣದ ಖಾದಿ ಬಟ್ಟೆ ಸಾಲ ಪಡೆದೆ. ಮೈಸೂರಿನ ಗೆಳೆಯರಾದ ಭಾಸ್ಕರ್ ಮತ್ತವರ ಪತ್ನಿ ನಳಿನಿಯವರು ಕಡಿಮೆ ಬೆಲೆಗೆ ಪ್ರತಿ ಬಟ್ಟೆಯ ಮೇಲೂ ಜೋಡೆತ್ತಿನ ಉಳುವ ರೈತನ ಗುರುತನ್ನು ಸ್ಕ್ರೀನ್ ಪ್ರಿಂಟಿಂಗ್ ಮಾಡಿ ಕೊಟ್ಟರು. ರೈತರೆಲ್ಲ ಬೆಂಗಳೂರಿಗೆ ಪಾದಯಾತ್ರೆ ಹೋದೆವಲ್ಲ, ಆ ಸಂದರ್ಭದಲ್ಲಿ ಈ ಹಸಿರು ಶಾಲುಗಳನ್ನು ಮಾರಾಟಕ್ಕಿಟ್ಟಿದ್ದೆವು. ಒಂದು ಶಾಲಿಗೆ ಏಳು ರೂಪಾಯಿ ಬೆಲೆ. ರೈತರೆಲ್ಲ ಬರೋರು ರೇಟ್ ಕೇಳೋರು ಕೊಳ್ಳದೆ ವಾಪಾಸ್ ಹೋಗೋರು. ಬೆರಳೆಣಿಕೆಯಷ್ಟು ಶಾಲುಗಳು ಮಾತ್ರ ಮಾರಾಟ ಆದವು. ಹಾಸನದ ದತ್ತಾ ಕೋಡಿಹಳ್ಳಿ ಮತ್ತಿತರರು "ಶಾಮಣ್ಣ ಹಿಂಗಾದ್ರೆ ಆಗಲ್ಲ. ರೈತರೇನು ಶಾಲು ಕೊಳ್ಳೋಕೆ ಸಮಾವೇಶದಲ್ಲಿ ದುಡ್ಡಿಟ್ಕಂಡು ಬಂದಿರಲ್ಲ. ನೀವೊಂದು ಕೆಲಸ ಮಾಡಿ. ಒಂದು ಜಿಲ್ಲೆಗೆ ಇಷ್ಟು ಅಂತ ಶಾಲುಗಳನ್ನು ಕೊಟ್ಬಿಡಿ. ಅವರು ಅಲ್ಲಿ ಮಾರಾಟ ಮಾಡಿ ನಿಮಗೆ ದುಡ್ಡು ಕಳಿಸ್ತಾರೆ'' ಅಂದ್ರು. ನನಗೂ ಅದೇ ಸರಿಯಾದ ಕ್ರಮ ಅನ್ನಿಸಿ ಎಲ್ಲ ಶಾಲುಗಳನ್ನು ಆಯಾ ಜಿಲ್ಲಾಧ್ಯಕ್ಷರಿಗೆ ಹಂಚಿಕೊಟ್ಟು ಮಾರುವ ಜವಾಬ್ದಾರಿ ವಹಿಸಿ ಬಂದೆ. ಹಸಿರು ಶಾಲು ಮಾರಾಟ ಮಾಡಿದ ದುಡ್ಡು ಬಂತಾ ಅನ್ನೋ ಪ್ರಶ್ನೆಗೆ ಮೌನವೇ ನನ್ನ ಉತ್ತರ. ಕೆಲವರು ಪ್ರಾಮಾಣಿಕವಾಗಿ ದುಡ್ಡು ಕಳಿಸಿಕೊಟ್ಟರು ಅನ್ನೋದು ನಿಜ. ಅದೇನೆ ಇರಲಿ ಇಲ್ಲಿಂದ ಮುಂದೆ ಪ್ರತಿ ರೈತನ ಹೆಗಲ ಮೇಲೂ ಹಸಿರು ಶಾಲು ಕಾಣಿಸಿಕೊಂಡಿತು. ರೈತ ಸಂಘದ ಹೆಗ್ಗುರುತಾಯಿತು. ಎಷ್ಟೋ ಭ್ರಷ್ಟ ಅಧಿಕಾರಿಗಳು ರಾಜಕಾರಣಿಗಳು ಹಸಿರು ಶಾಲು ಕಂಡರ ನಡುಗುವ ಸಂದರ್ಭ... ನಿರ್ಮಾಣವಾಯಿತು.

ಒಂದು ಸಣ್ಣ ಘಟನೆ ಕೆಲವೊಮ್ಮೆ ಐತಿಹಾಸಿಕ ತೀರ್ಮಾನಕ್ಕೆ ಕಾರಣವಾಗುತ್ತದೆ. ರೈತರ ಹೆಗಲನ್ನು ಆವರಿಸಿ ಅವರಿಗೆ ಒಂದು ಅಸ್ತಿತ್ವ ತಂದುಕೊಟ್ಟ ಹಸಿರು ಶಾಲು ಮೊದಲಿಗೆ ಪರಿಚಯ ಆಗಿದ್ದು ಹಾಗೆಯೇ. ನಂತರದಲ್ಲಿ ಅದು ಕಡ್ಡಾಯವಾಗಿ ರೈತರ ಹೆಗಲ ಮೇಲೆ ಕಾಣಿಸಿಕೊಂಡಿತು. ಅದೇ ರೈತ ಸಂಘದವರ ಗುರುತು ಆಯಿತು. ಈ ತೀರ್ಮಾನಕ್ಕೆ ನಾನು ಕಾರಣಕರ್ತ ಅನ್ನೋ ಹೆಮ್ಮೆಯಂತೂ ಯಾವತ್ತಿಗೂ ನನಗಿರುತ್ತದೆ.

ಬಿಜೆಪಿಗಳಿಗೆ ಮನಮೋಹನಸಿಂಗ ಮೋಟುಮರ ಗಾಳಿ ಮಿಂಡನ

"ವಾಜ್‌ಪೈಗೆ ಉಹಾರಿಲದಂತೆ" ಎಂದು ಸೀರ, ಮೇಗಲಮನೆ ಪೂಜಾರಯ್ಯನಿಗೆ ಉಹಾರಿಲ್ಲದಂತೆ ಎಂಬಷ್ಟೇ ಸರಾಗವಾಗಿ ತೇಳಿದ. ಅದಕ್ಕೆ ಕಾಳಮಾವನೂ ಅಷ್ಟೇ ಸರಾಗವಾಗಿ.

"ವಯಸಾಯ್ತಲ್ಲ ಬುಡು" ಎಂದ.

"ಅದ್ರು ಬಾಳ ದಿನದಿಂದ ಮನಗಿದ್ದನಂತೆ" ಎಂದು ಸೀರ ಮತ್ತೆ ಕೆದಕಿದ.

"ಇಸಿಸಿ, ತಿರಗ ಅದ್ನೆ ಹೇಳ್ತಿಯಲ್ಲಾ. ನಾವೇನೊ ಸೂಕುಸ್ನಾಗಿ ತಿರುಗಾಡ್ತಿವಿ ಅಂದ್ರೆ ಯಲ್ಲ ತಿರಗಾದ್ಯರೆ?

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

ಅವುರ್ಕಲ್ಲ ದಪ್ಪ ಸರೀಳದ ಆಳು, ಇಲ್ಲಿಗಂಟ ಬದುಕಿರದೇ ಹೆಚ್ಚು."

"ಅಂತೂ ಸಾಯ ಕೆಡಸತಿ ಪ್ರಧಾನಿ ಮಾಡಿದ್ರು ಬಿಜೆಪಿಗಳು" ಎಂದ ಉಗ್ರಿ.

"ಈಗೇನಾರ ಗೆದ್ರೆ ಅವುನ್ನೆ ಮಾಡತಿದ್ರಲವೆ?" ಎಂದ ಸೀರ.

"ಅವುನೆಲ್ಲಾದನೂ? ಅದ್ವಾನಿ ರಡಿಯಾಗ್ಯವುನೆ. ಈಗ ಬಿಜೆಪಿಲಿ ಆವುನ ಸರದಿನೆ ಅಲವೆ. ಯಾರೂ ಇಲ್ಲದ ಮನಿಗೆ ಯಡವಟ್ಟಪ್ಪನೆ ಯಜಮಾನ ಅನ್ನಂಗೆ ಅಲ್ಲಿ ಅವುನ ಬುಟ್ರೆ ಇನ್ನಾರೂ ಇಲ್ಲ."

"ಅಂತೂ ಅದ್ವಾನಿ ಪ್ರಧಾನಿಯಾಯ್ತನೆ ಅನ್ನು?"

"ನಾನ್ಯಂಗೇಳ್ಳೊ ಮಾವ? ಬಿಜೆಪಿಗಳಿಗೇ ಆತ್ಮವಿಶ್ವಾಸ ಇದ್ದಂಗೆ ಕಾಣದಿಲ್ಲಾ."

"ಅಂಗರ್ರಿನ್ಯಾರಾದರ್ಲ?" ಎಂದಳು ಜುಮ್ಮಿ.

"ನಿಮ್ಮ ಮಾವನೆ ಮುಂದುವರಿತನಂತೆ."

"ನಮ್ಮ ಮಾವ್ನಾರೂ?"

"ಇನ್ನಾರೂ, ಮನಮೋಹನ ಸಿಂಗ ಕಣೆ. ಆಲ್ಪಾಪರೇಷನ್ ಆದ್ರೂ, ಅಂಗೆ ಕುದ್ರೆಮರಿಯಿದ್ದಂಗವುನೆ. ಅವುನ ಮ್ಯಾಲೆ ಒಂದೇ ಒಂದೂ ಕ್ಯಟ್ಟೆಸರಿಲ್ಲ, ಯಾರಿಗೂ ಬೈಲಿಲ್ಲ, ಅನ್ನಲಿಲ್ಲ. ಸೋನಿಗಾಂಧಿ ಮಾತಾಯ್ತು ಅವುನಾಯ್ತು ಅಂಗೇ ತಣ್ಣಗೆ ದೇಶ ನ್ಯಡಿಸಿಗಂಡೋದ. ಬಿಜೆಪಿ ಪಾಲಿಗಂತೂ ಅವುನು ಮೋಟಮರ ಗಾಳಿ ಮಿಂಡ ಅನ್ನಂಗೇ ಬಾಳಿಬುಟ್ಟ ಕಣೆ. ಅದ್ಕೆ ಸೋನಿಯಾಗಾಂಧಿ ತಿರಗ ನೀನೆ ಪ್ರಧಾನಿ ಅಂದಿದ್ದಳಂತೆ."

"ಅಂಗರೆ ಮುಂದುಕೂ ಅವುನೆಯಾ ಅನ್ನು?"

"ಅವುಳಂಗಂದವುಳೆ, ಅಕಸ್ಮಾತ್ ಆದ ಅನ್ನು, ಒಂದಿನ ವರೆ ಇಳಕಿ ರಾವುಲಗಾಂಧಿ ಯಗಲುಮ್ಯಾಲೆ ಮಡಗಿ, ಹೊತಗಂಡು ನಡಿಯಪ್ಪ ಹಿಂದೆ ನಾನಿರತಿನಿ ಅಂತ ಅಂದ್ರೂ ಅಂದನೆಯಾ. ಅಥವಾ ಅನ್ನದೆಯಿದ್ರೂ ಸೋನಿ ಯಾಗಾಂಧಿ ಸಾಕು ಬುಡು ಅನ್ನುಬವುದು. ಆಗ ತಿರಿಗಿ ಉತ್ತರ ಕೊಡದಂಗೆ ಅಧಿಕಾರ ಬುಟ್ಟು ಕೊಡ್ತನೆ."

"ಕೊಡದಿಲವೆ ಪಾಪ. ಅವತ್ತು ಸೋನಿಗಾಂಧಿ ಬಿಜೆಪಿಗಳಬ್ಬರಕೆ ಕಿವಿ ಗೊಡದೆ ತಾನೇ ಪ್ರಧಾನಿಯಾಗಬವುದಿತ್ತು. ಇವುನಿ ಗೋಸ್ಕರ ತ್ಯಾಗನೆ ಮಾಡಿದ್ಲು" ಎಂದ ಸೀರ.

"ಪಾಪ, ಅವುಳೊಸಿದಿನಾಗಬೇಕಾಗಿತ್ತು ಕಣಮಾವ" ಎಂದು ಜುಮ್ಮಿ ಕೈಮೀರಿ ಹೋದ ಗಳಿಗೆಯೊಂದನ್ನು ನೆನೆದು ಕಣ್ಣು ಮಿನುಗಿಸಿದಳು.


"ಆಗಬೇಕಾಗಿತ್ತ ಅಂತ ನೀನಂತಿ. ಈ ಹಾಳು ಬಿಜೆಪಿ ಜನ ಇಡೀ ದೇಸದ ತುಂಬ ಗಲಭೆ ಮಾಡೋರು ಕಣೆ" ಎಂದ ಉಗ್ರಿ.

"ಪೊಲೀಸ್ ಬುಟ್ಟು ಸರಿಯಾಗಿ ನೇಮ್ಸಿದ್ರೆ ಅಮಿಕ್ಯಂಡು ಸುಮ್ಮನಾಗರು ಕಂಡ್ಯ. ತೆಪ್ಪು ಮಾಡಿ ಬುಟ್ರು ಆಗ" ಎಂದ ಕಾಳಮಾವ.

"ಮಾಡಿಬುಟ್ರು, ಅಂದ್ರೆ ಸೋನಿಗಾಂಧಿನೆ ಗಲಭೆ ಲೂಟಿ ಮಾಡದ ಒಪ್ಪದಿಲವಲ್ಲ ಹೇಳು. ಬಿಜೆಪಿಗಳೇನೊ ಅದ್ನೆ ಮಾಡಿಸಿಗಂಡು ಅದರಲ್ಲೇ ಬದುಕ್ತರೆ. ಆದ್ರೆ ಇವುಳ ಕೈಲಾದತೇ?"

"ಆಗದಿಲ್ಲ ಬುಡು. ಇಲ್ಲೆ ನೋಡು ಏನು ವಸಿ ದಾನ್ಲಿ ಮಾಡ್ತಯಿದ್ದರೇ."

"ಅವುನ್ಯಾವನ್ಲ ಮತ್ತಾಲಿಕ್ಯ ಅನ್ನೋನು?" ಎಂದ ಸೀರ.



"ಅಯ್ಯೋ, ಅವುನೊಬ್ಬ ಪಾಪದ ಮನ್ಸ ಚಿಗಪ್ಪ, ಈ ಬಿಜೆಪಿಗಳ ಮಾತ ಕಟಿಗಂಡು ರಾಮಸೇನೆ, ಶಿವಸೇನೆ ಅಂತ ಮಾಡಿಕಂಡು, ದಾನ್ಲಿ ಮಾಡಿ ಮೈಮ್ಯಾಲ್ಕಲ್ಲ ಕೇಸಾಕಿಸಿಗಂಡು, ಈಗ ಆ ಜೈಲಿಂದ ಈ ಜೈಲು, ಈ ಜೈಲಿಂದ ಆ ಕೋರ್ಟು ಅನ್ನಂಗೆ ಅಲಿತಾ ಅವುನೆ" ಎಂದು ವಾಟಿಸ್ಸೆ ವಿವರಿಸಿದ.

"ಉಪ್ಪು ತಿಂದೋಳು ನೀರು ಕುಡಿತಳೆ ಬ...
ಎಂದ ಕಾಳಮಾವ.

"ಆದ್ರೆ ನೀರು ಉಪ್ಪಾಗ್ಯದಲ್ಲ ಹೇಳು. ಎದ... ಗೂಂಡಾ ಕಾಯ್ದೆ ಗಡಿಪಾರು ಅಂತ ಹೆದಿಸ್ಯಸ್ನ...

"ಹೆದರಸ್ಕೆ ಇನ್ನೇನು ಮಾಡ್ತನೊ. ಅಂತ ... ಕಡೆವರಿಗೂ ಕಟಿಗಂಡು ತಿರಗಕ್ಯಾದತೆ. ... ಎಡೂರಪ್ಪನಿಗೆ ಯಾರೂ ಬ್ಯಾಡ ಅಂಗಾಗ್ಯವುನೆ" ... ಉಗ್ರಿ.

"ಅದ್ಕೆ ಕಣೊ ಚುಂಚ... ಐನೋರು ನಮ್ಮೊರ ಕಟಿಗ... ವಳ್ಗಿದಾಗದಿಲ್ಲ, ಉಸಾರು ಅಂ... ಅಂಗಂ ದೇಟಿಗೆ ಎಡ... ಎಲಿಕಾಪ್ಟರಿಂದ ನ್ಯಗದು ಸ್ವಾಮಿ... ಕಾಲಿಗೆ ಬದ್ದು ಕಿವಿಕೊಟ್ಟನಂತೆ" ... ವಾಟಿಸ್ಸೆ ನಕ್ಕ.

"ಕಿವಿ ಯಾಕ್ ಕೊಡ್ತನ್ಲ?"

"ಅದೇನ್ಡೇಳಿ ಅಂತ ಅಲ್ಲ ಕ... ಬೇಕಾದ್ರೆ ಕಿವಿ ಹಿಂಡಿ, ಬೇ... ಬ್ಯಾಡಿ ಅಂತ ಹೇಳಿದ್ನಂತೆ ಈ ಪ್ರ... ಫೆಲೊ. ಅಲ್ಲಾ ಆವುನೆ ನಾನು ... ಕೋಟಿ ಜನಗಳ ನಾಯಕ, ... ಅಂತ ಏನೇನೋ ಹೇಳ್ತನೆ. ಅಂ... ನೋಗಿ ಅದೂ ಚುಂಚನಗಿರಿ ಸ್ವಾ... ಕಿವಿಹಿಂಡಿ ಕೊಡ್ತಿನಿ ಅಂತನಲ್ಲಾ ಇ... ಳನ? ಇಟೀಸ್ ಷೇಮ್."

"ಇನ್ಯಾವ ಸ್ವಾಮಿಗೆ ಅಂಗನ್ನ... ಗಿತ್ತೋ?"

"ಪೇಜಾವರನಿಗೆ ಅಂಗನ್ನಬೇಕಾಗಿತ್ತು ಕಣೊ ... ಅವುನಾದ್ರೆ ಬಿಜೆಪಿ ಸ್ವಾಮಿ, ನಮ್ಮ ಚುಂಚನ... ಅಯ್ಯನೋರು ಜೆಡಿಎಸ್ ಸ್ವಾಮಿ."

"ಅಂಗರೆ ಕಾಂಗ್ರೆಸ್ ಸ್ವಾಮಿ ಯೊರ್ಲ?"

"ಐ ತಿಂಕ್, ನಿಡುಮಾಮಿಡಿ ಅಥವ ಮುರುಗಾ...

ಪೆದ್ದ ಹಾದರಗಿತ್ತಿ ಅಂತಹ ಸಿಸುಮಗ!

'ಸಿಸುಮಗ'ನ ಮನಸ್ಸಿಗೆ ಆಘಾತವಾಗಿತ್ತು; ನೋವಾಗಿತ್ತು; ಬೇಸರ ಆಗಿತ್ತು, ಇನ್ನು ಏನೇನು 'ಆಗಿತ್ತು' ಆಗಬಹುದಿತ್ತೋ ಅದೆಲ್ಲವೂ ಆಗಿತ್ತು, ಯಾವ ಕೋಮನ್ನೂ ನಿರ್ಲಕ್ಷಿಸದೆ ಆಡಳಿತ ನಡೆಸುತ್ತಿರುವುದಕ್ಕೆ ಇದೇನಾ ಬಾಲಗಂಗಾಧರನಾಥ ಸ್ವಾಮೀಜಿಯವರು ನೀಡಿದ ಬಳುವಳಿ ಎಂದು ಮಮ್ಮಲ ಮರುಗಿತು. ಏನು, ಕೋಮಲವಾದ ಸಿಸುಮಗನ ಮನಸ್ಸು. ಮಠಾಧೀಶರಿಂದಲೇ ಮುಖ್ಯಮಂತ್ರಿಯಾಗಿರುವ ಸಿಸುಮಗನಿಗೆ ಅವರಿಂದಲೇ ಶಾಪ ಬಂದಾಗ ಏನೇನು ಆಗಬಹುದೋ ಅದೆಲ್ಲ ಆಗಿತ್ತು.

ಹಿಂದಿನ ಕಾಲದಲ್ಲಿ ದೇವತೆಗಳು ಶಾಪ ನೀಡಿದರೆ ಅದನ್ನು ಹಿಂಪಡೆಯಲು ಬೇರೆ ದೇವತೆಗಳೇ ಬರಬೇಕಾಗಿತ್ತು. ಇಂದಿನ ಸರ್ಕಾರಿ ಅಧಿಕಾರಿಗಳೂ ಅಷ್ಟೆ. ತನ್ನ ಕೈಕೆಳಗಿನ ನೌಕರರ ಮೇಲೆ ಶಿಸ್ತುಪಾಲನಾ ಕ್ರಮ ತೆಗೆದುಕೊಂಡರೆ ಅದನ್ನು ಹಿಂಪಡೆಯಲು ಅವರಿಗೆ ಅಧಿಕಾರವಿಲ್ಲ. ಅವರ ಮೇಲಿನ ಅಧಿಕಾರಿ ಹೀಗೆ ಮಾಡಬಹುದು. ಮಠಾಧೀಶರು ಈ ನಿಯಮಕ್ಕೆ ಹೊರಗೆ. ಅವರು ಒಂದು ತರಹ ಹಿಂದಿನ ಕಾಲದ ಋಷಿಗಳ ತರಹ. ತಮ್ಮ ಮನಸ್ಸಿಗೆ ಹಿತವಾಗಿ ನಡೆಯದವರಿಗೆ ಅವರು ಶಾಪ ನೀಡುತ್ತಿದ್ದರಾದರೂ ಹೀಗೆ ಶಾಪಿತನಾದವನು ಕುಯ್ಯೋಮರ್ರೋ ಎಂದ ಗೋಳಾಡಿದರೆ ಶಾಪ ವಿಮೋಚನೆಗೆ ಮಾರ್ಗ ಸೂಚಿಸುತ್ತಿದ್ದರು. ಇದನ್ನು ಅರಿತಿದ್ದ ಸಿಸುಮಗ, ಚುನಾವಣೆ ಸಮಯದಲ್ಲಿ ಇಂತಹ ಶಾಪದಿಂದ ಆಗಬಹುದಾದ ಅನಾಹುತ ಗ್ರಹಿಸಿಯೇ, ಗುರು ಸಾನ್ನಿಧ್ಯಕ್ಕೆ ತೆರಳಿದರು.

ಗುರುಮಠದಲ್ಲಿ ಅವರಿಬ್ಬರ ನಡುವೆ ನಡೆದಿರಬಹುದಾದ ಮಾತು ಕತೆಗಳನ್ನು ಬಹಿರಂಗಪಡಿಸಲಿ ಎಂದು ಮಾಜಿ ಸ್ಪೀಕರ್ ಕೃಷ್ಣ ಅವರು ಒತ್ತಾಯಿಸಿದ್ದಾರೆ. ಅವರ ಮಾತಿಗೆ ಯಾರೂ ಕವಡೆ ಕಾಸಿನ ಕಿಮ್ಮತ್ತು ನೀಡಿದಂತಿಲ್ಲ. ಅವರಿಬ್ಬರಷ್ಟೇ ಬಲ್ಲವರಿಂದ ತಿಳಿದುಬಂದಿರುವುದೇನೆಂದರೆ ಮಾತುಕತೆ ಈ ರೀತಿ ನಡೆದಿರಬಹುದು.

ಸ್ವಾಮಿಗಳ ಪಾದಪೂಜೆ, ಹಾರಾರ್ಪಣೆ ಎಲ್ಲ ಸಾಂಗವಾಗಿ ನೆರವೇರಿದ ನಂತರ 'ಒಕ್ಕಲಿಗರ ಕಡೆಗಣಿಕೆ' ಮಟ್ಟ ಕೊಂಚ ಇಳಿದಿರಬಹುದು.

'.... ಅವರನ್ನು ಲೋಕಾಯುಕ್ತರ ಬಲೆಗೆ ಕೆಡವಿದ್ದೀರಿ. ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಬಾರದು. ಅವರನ್ನು ಈಗಿರುವ ಸ್ಥಾನದಲೇ ಮುಂದುವರೆಸಬೇಕು'

'ಆಗಲಿ ಮಹಾಸ್ವಾಮಿ.'

'ಶ್ರೀಮಠದ ಮೇಲೆ ಭೂಕಬಳಿಕೆಯ ಆರೋಪ ಇದೆ. ಅದನ್ನು ಹಿಂಪಡೆಯಬೇಕು.'

'ಆಗಬಹುದು ಮಹಾಸ್ವಾಮಿ.'

'ಅಷ್ಟು ಮಾತ್ರ ಅಲ್ಲ, ಯಾವುದೇ ಮಠ ಯಾವುದೇ ಭೂಮಿಯನ್ನು ವಶಪಡಿಸಿಕೊಂಡರೂ ಅದನ್ನು ಪ್ರಶ್ನಿಸಬಾರದು.'

'ಮಠಗಳೂ ಸಮಾಜ ಸೇವೆ ಮಾಡುತ್ತಿರುವುದರಿಂದ ಇದಕ್ಕೆ ಇಲ್ಲ ಅನ್ನಲಾಗುತ್ತದೆಯೇ ಗುರುವರ್ಯ.'

'ಎಲ್ಲಾ ಜಾತಿಯ ಮಠಗಳಿಗೂ ಅನುದಾನ ನೀಡಿದ್ದೀರಿ ಆದರೆ....'

'ಮಹಾಪರಾಧ ಆಯಿತು ಮಹಾಸ್ವಾಮಿ. ತಮ್ಮ ಮಠಕ್ಕೂ ಹಣ ಬಿಡುಗಡೆ ಮಾಡುವಂತೆ ಈಗಲೇ ಆಜ್ಞೆ ಮಾಡುತ್ತೇನೆ.'

ಹೀಗೇ ಮುಂದುವರಿದಿರುತ್ತೆ. ಆನಂತರ.... ಬೆಂಗಳೂರಿನ ಒಂದು ಕೆಳರಸ್ತೆ ಉದ್ಘಾಟನೆಗೆ ಇಬ್ಬರೂ ಸಂತೋಷದಿಂದ ಹೋಗುತ್ತಾರೆ. ಗುರೂಜಿ ಉದ್ಘಾಟನೆ ಮಾಡುತ್ತಾರೆ. ನಂತರ ಸಿಸುಮಗನ ಮಾತು. ಈ ರಸ್ತೆಗೆ ಪೂಜ್ಯಸ್ವಾಮೀಜಿಯವರ ಹೆಸರನ್ನು ಇಡಲಾಗುತ್ತದೆ!

ಆಯಿತಲ್ಲ ಒಕ್ಕಲಿಗರ ಉದ್ಧಾರ!

ತುಮಕೂರು ವಿಶ್ವವಿದ್ಯಾಲಯಕ್ಕೆ ಸಿದ್ಧಗಂಗಾ ಮಠದ ಸ್ವಾಮಿ ಹೆಸರು ಇಡುತ್ತಾರೆ. ಆಯಿತು ಲಿಂಗಾಯತರ ಉದ್ಧಾರ! ಇನ್ನು ಉಳಿದ ಜಾತಿ ಯವರ ಉದ್ಧಾರ ಆಗಬೇಕಲ್ಲ! ಕೆಳಸೇತುವೆ ಗಳಿಗೆಲ್ಲ ವಿವಿಧ ಜಾತಿಯ ಸ್ವಾಮಿಗಳ ಹೆಸರಿಟ್ಟರಾಯಿತು!

ಇದರ ಪರಿಣಾಮ: 'ಒಕ್ಕಲಿಗರ ಕಡೆಗಣಿಸು ವಿಕೆ' ಸಂಪೂರ್ಣ ಇಲ್ಲವಾಗಿ ಅವರಿಗೆ ಸಾಮಾಜಿಕ ನ್ಯಾಯ ದೊರೆಯುತ್ತದೆ! ಗುರುಪೀಠ ಇದೆಲ್ಲದರಿಂದ ಸಂಪ್ರೀತರಾಗಿ 'ಬಿಜೆಪಿ ಸರ್ಕಾರ ಒಕ್ಕಲಿಗರನ್ನು ಕಡೆಗಣಿಸಿಲ್ಲ, ನನ್ನ ಹೇಳಿಕೆಯನ್ನು ಮಾಧ್ಯಮಗಳು ತಪ್ಪಾಗಿ ಅರ್ಥೈಸಿವೆ' ಎಂದು ವ್ಯಾಖ್ಯಾನಿಸುತ್ತಾರೆ. 'ಆರ್‌ಎಸ್‌ಎಸ್ ಹಿನ್ನೆಲೆಯಿಂದ ಬೆಳೆದು ಬಂದ ನಿಮ್ಮ ಬಗ್ಗೆ ಹಾಗೂ ಬಿಜೆಪಿ ಸರ್ಕಾರದ ಬಗ್ಗೆ ನಮಗೆ ... ಗೌರವವಿದೆ. ಈ ಸರ್ಕಾರ ಇನ್ನೂ ಹತ್ತು ವರ್ಷ ರಾಜ್ಯ... ಆಡಳಿತ ನಡೆಸಲಿ' ಎಂದು ಆಶೀರ್ವದಿಸುತ್ತಾರೆ.



ಗುರುಗಳ ಮನಸ್ಸಿಗೆ ಸ್ವಲ್ಪ ನೋವಾದರೂ ಅ... ನೋವು ಅನುಭವಿಸಲು ಇಂತಹ ಸಿಸುಮಗನ ... ಆಡಳಿತ ಕಂಡರಾಗದವರು ಏನೇನೋ ಅಪಾರ್ಥಗ... ಕಲ್ಪಿಸುತ್ತಾರೆ. ಎಂತಹ ತ್ಯಾಗಮಯಿ ಈ ಸಿಸು... ಎಂಬುದನ್ನು ನೆನಸಿಕೊಂಡರೇ ಹೃದಯ ತುಂಬಿ ಬರು... ಬಡರೈತನ ಮಗ ಡಾಕ್ಟರ್ ಅನ್ನಿಸಿಕೊಳ್ಳುವುದು ತರ... ಅಂತ 'ಡಾಕ್ಟರ್' ಅನ್ನು ತ್ಯಾಗ ಮಾಡಿದರು. ಡಾ... ಅನ್ನಿಸಿಕೊಂಡ ಯಾರಾದರೂ ರೈತರ ಮಗ ಇದ್ದರೆ ಅ... ಇವರ ದಾರಿ ಹಿಡಿಯಲಿ! ಆ ಗೌರವ ರೈತರ ಮಕ್ಕಳಿ... ಅದು ಬೇರೆಯವರಿಗೆ ಮೀಸಲು! ಅರೆರೆ ಈ ಗೌ...

ಅಣಾ...

ಎಚ್.ಎಲ್. ಕೇಶವಮೂ...

ಡಾಕ್ಟರೇಟನ್ನು ನನ್ನ ನಾಡಿನ ಜನತೆಗೆ ಅರ್ಪಿಸು... ಅಂದಿದ್ದರಲ್ಲ ಅಂತಹ ಗೌರವದಿಂದ ಈಗ ದೇ... ಜನತೆಯೇ ವಂಚಿತರಾಗಬೇಕಾ ಎಂದರೆ ಆಗಲೇಬೇ... ಅಂತಹ ಸಿಸುಮಗನೇ ಇದು ಬ್ಯಾಡ ಅಂತ ಬಿಸಾಕಿರು... ಉಡಿಪಡಿಯವರದ್ದೇನು ಲೆಕ್ಕ ಅಲ್ಲವಾ.

ಸರಳಜೀವನ ಅಂದರೇನು ಎಂಬುದಕ್ಕೆ ಸಿಸುಮ... ಮಾದರಿ. ನಮ್ಮ ರೈತರಿಗೆ ಹುಟ್ಟಿದ ದಿನವೇ ಗೊತ್ತಿ... ಸುಮ್ಮನೇ ಹಾಗೇ ಅಡ್ಡಾಡಿ ತಿಳಿಯುತ್ತೆ. ಆಸ್ಪತ್ರೆಗೆ ಬ... 'ಹೆಸರೇನು?' ಇದಕ್ಕೆ ಉತ್ತರ ಹೇಳ್ತಾರೆ. 'ಎಷ್ಟು ವಯ... ಅಂತ ಕೇಳಿದರೆ ಬರೋ ಉತ್ತರ ಏನು ಗೊತ್ತೆ? '... ಒಂದೈವತ್ತ' ಅಂತಾವೆ! ಇನ್ನು ಕೆಲವರಿರುತ್ತಾರೆ. 'ಏನ... ವರ್ಷ' ಅಂತ ಕೇಳಿದರೆ 'ಯಾರಿಗ್ಗೊತ್ತು ಅವೆಲ್ಲ, ಗಾ... ಮಹಾತ್ಮ ಸತ್ತಾಗ ನಾನು ಮೂರು ತಿಂಗಳ ಮಗ ... ಅಂತಾರೆ! ಹೀಗೆ ಯಾವುದೋ ಒಂದು ... ಮುಖಾಂತರ ವಯಸ್ಸು ತಿಳಿಯುವ ಭೂಪರೇ ಹೆಚ್ಚು... ದೇಶ ನಮ್ಮದು. ಅಪ್ಪಿತಪ್ಪಿ 'ಇಸ್ಕೂಲು' ಹತ್ತಿದರೂ ವ... ನಿಖರವಾಗಿರುತ್ತೆ ಅನ್ನುವ ಖಾತರಿ ಇಲ್ಲ, ಶಾಲೆಗೆ ಸೇ... ದಿನ ಮೇಷ್ಟರು ಬರೆದುಕೊಂಡಿದ್ದೇ ಹುಟ್ಟಿದ ದಿನ... ಸಿಸುಮಗ ಹಳ್ಳಿಹೈದ ಅಲ್ಲವಾ. ಅವರಿಗೆ ಇದೆಲ್ಲ ತಿಳಿ...

...ಂಗ್ರೆಸ್ ಸ್ವಾಮಿಗಳು ಅನ್ನಬನ್ನುದು. ಆದ್ರು."

...ಸ್ತಾರು ಸ್ವಾಮಿ?"

...ರು ಯಲ್ಲಾ ಪಾರ್ಟಿಗೂ ಸಲ್ಲೊ ಸ್ವಾಮಿ. ...ಧಿಕಾರಕ್ಕೆ ಬಂದ್ರು ಅವ್ರುರ ಪರ ಇರತರೆ."

...ನಮ್ಮ ಚುಂಚನಗಿರಿ ಸ್ವಾಮಿನೂ ಅಂಗೆ ...? ನೋದಾಗ್ಲೆ ಕೇಣಿ ಕರದ ಅಂತ ಹೋಗಿ ... ಹೂವಿನ ಮಳೆ ಸುರಿಸಿಗಂಡು ಹೊಗಳಿದ

...ರೆ ದ್ಯಾವೇಗೌಡ್ರಿಗೆ ಉರಿ ಕಿತಗಂದಿರತದೆ?"

...ಸ್ಸಿ ಸುಮ್ಮನಿರು" ಎಂದು ಸೀರ ಕಣ್ಣು ಮಿಟುಕಿಸಿ

...ೀಡಪ್ಪ ನಮ್ಮ ಸೀರ ಚಿಗ್ಗಪ್ಪನಿಗಾಗಿರೊ ... ಯಾರಾರ ದೊಡ್ಡೊರು ಜಗಳಾಡತರೆ ಅಂದ್ರೆ ...ಪ್ಪು ಏನೂ ಬ್ಯಾಡ ಇವ್ರುನಿಗೆ" ಎಂದ ವಾಟಿಸ್ಸೆ.

...ಗಲ್ಲ ಕಂಡ್ಯ, ದ್ಯಾವೇಗೌಡ್ರಿಗೂ ಕೇಣಿಗೂ ...ಯಿರುವಾಗ ಅವ್ರುನು ಚುಂಚನಗಿರಿ ಸ್ವಾಮಿ ...ನುಮಾನ ಮಾಡಿದ ಅಂದ್ರೆ ದ್ಯಾವೇಗೌಡನಿಗೆ ...ವತ್ತ?"

ಸನುಮಾನ ಹಾಳುಬಿದ್ದೋಗ್ಲಿ. ಸ್ವಾಮಿಗಳು ...ಕ್ಕೆ ಕರದು ಮಗ್ಗಲ್ಲಿ ಕುಂಡ್ರಿಸಿಗಂಡು ಇನ್ನು ...ನೀನೆ ಇರು, ನಿನ್ನಂಗೆ ಆದಳತ ಮಾಡೋರ ...ನೋದಿರಲಿಲ್ಲ ಅಂದವ್ರುರಂತೆ, ಇದಕೇನೇಳಿರೀ?"

...ರು.

...ಪ್ಪ ಇದು ವಳ್ಳೆ ತಮಾಸೆಯಾ."

...ಸಿಯಲ್ಲ ಕಣೊ, ಸ್ವಾಮಿಗಳು ಸೀರಿಯಸ್ಸಾಗೇ ...ತೆ. ನೀನು ಆರೆಸೆಸ್ಸಿನ ಶಿಸ್ತಿನಿಂದ ಬಂದ ವ್ಯಕ್ತಿ ...ರೆಸೆಸ್ಸು ಅಂದ್ರೆ ತುಂಬಾ ಇಷ್ಟು. ಅದ್ಕೆ ಅವರು ... ಹೋಯ್ತಿನಿ. ನಿನ್ನಲ್ಲಿ ಅಂಥಾ ಸಮುಸ್ಕಾರ ...ಗ್ಗೆ ಮಠಗಳಿಗೆ ದುಡ್ಡು ಕೊಟ್ಟದ್ದೀ. ನನ್ನ ...ರ ನಿನಿಗೆ ಯಾವಾಗ್ಲು ಅದೆ. ಇನ್ನ ಹತ್ತೊರಸ ...ವರಂತೆ."

...ೀ ಹತ್ತೊರಸ ಆಳದಾದ್ರೆ ಖರಗೆ, ಸಿದ್ದರಾಮಯ್ಯನ

"ಅವ್ರುರ ಕತೆ ಮುಗಿತು."

"ಮಿಸ್ಟರ್ ಉಗ್ರಿ, ಚುಂಚನಗಿರಿ ಸ್ವಾಮಿ ಮಾತ ಸೀರಿಯಸ್ಸಾಗಿ ತಗೋಬ್ಯಾಡ. ಎಡೂರಪ್ಪನ ಸರ್ಕಾರಿಕೆ ಹತ್ತೊರ್ಸ ಅಲಾಟ್ ಮಾಡೋ ಇವ್ರುರು ಎಷ್ಟೊರ್ಸ ಇರತರಪ್ಪ."

"ಅದ ಚುಂಚನಗಿರಿ ಸ್ವಾಮಿ ನೋದಿಕಳೊ ದಾಗುಟ್ರೋಳಬೇಕು."

"ದಾಗುಟ್ರಿಗೂ ಕೈಕೊಟ್ಟ ಪೇಷಂಟ್‌ಗಳ ಎಷ್ಟು ನೋದಿಲ್ಲ ನಾವು. ಅಂಗೆ ಪೇಷಂಟ್‌ಗಳ ಮಾತ ಸೀರಿಯಸ್ಸಾಗಿ ತಗೋಬ್ಯಾಡ ಕಣೊ ಉಗ್ರಿ. ಅವ್ರುನ್ನೇನಿದ್ರು ಸುಳ್ಳಿನ ಆಕಾಂಕ್ಷೆ. ಅಥವ ಆಸೆ ಅಂತ ಪರಿಗಣಿಸಬೇಕು. ಎಡೂರಪ್ಪನ ಆಡಳತ ಚುಂಚನಗಿರಿ ಸ್ವಾಮಿಗಳಿಗೇನು ಗೊತ್ತೊ ಉಗ್ರಿ. ಮಠಕ್ಕೆ ದುಡ್ಡು ಕೊಡ್ತನೆ ಅಂದ್ರೆ ಅವ್ರುನು ವಳ್ಳೆ ಚೀಫ್ ಮಿನಿಷ್ಟ್ರು ಅನ್ನಕಂಡಿರಬೇಕು ಅಷ್ಟೆ."

"ಕುಮಾರಸ್ವಾಮಿ ವಳ್ಳೆ ಆಡಳಿತ ಕೊಟ್ರು, ಅವ್ರುರ ಬಾಯಿಲಿ ಅಂತ ಮಾತು ಬರಲಿಲ್ಲ ನೋಡು" ಎಂದ ಕಾಳಮಾವ.

"ನೋಡು, ದೇವೇಗೌಡ್ರು ಬಾಯಲಿ ಬರೋ ಮಾತು ನಮ್ಮ ದ್ವಡಪ್ಪನ ಬಾಯಲಿ ಬತ್ತಾ ಅದೆ. ಇದಕೇನೇಳ್ತೀ?"

"ನೋಡು ಮತ್ತೆ, ಆದ್ರು ಯತ್ಲಿಂದ ನೋಡಿದ್ರೂ ಕುಮಾರಸ್ವಾಮಿ ಆಡಳತ ಇಷ್ಟು ಕೆಟ್ಟಿರಲಿಲ್ಲ ಅಲವೆ?"

"ನಿಜ. ಪೊಲೀಸ್ ಇಲಾಖೆ ವರ್ಗಾ ವರ್ಗಿಲಿ ಇವುರಷ್ಟು ಲಂಚ ಅವ್ರುರು ತಗಂಡಿರಲಿಲ್ಲ."

"ತಗಳದೆಯಿದ್ರೂ ವಳ್ಳೊಳ್ಳೆ ಜನ ಹಿಡಿದು ಆಯ್ಕಟ್ಟಿನ ಜಾಗದಲ್ಲಿ ಕುಂಡ್ರಿಸಿಗಂಡು ದ್ಯಾವೇಗೌಡ್ರು ಆಪರೇಟು ಮಾಡ್ತಾಯಿದ್ರು. ಅಂಥ ಅಧಿಕಾರಿಗಳಿಗೆ ಈ ಎಡೂರಪ್ಪ ಕ್ಯಲಸಿಲ್ಲದಂಗೆ ಮಾಡ್ಯವ್ರುನಂತೆ."

"ಆ ದೂರು ಚುಂಚನಗಿರಿ ಸ್ವಾಮಿಗಳಿಗೆ ತಲುಪ್ಯದೆ. ಅದ್ಕೆ ಅವ್ರುರು ನಮ್ಮ ಜನಾಂಗ ಕಡಗಣಿಸಿದ್ರೆ ಕಷ್ಟ ಅಂತ ಎಚ್ಚರಿಕೆ ಕೊಟ್ಟವ್ರುರೆ. ಅದ್ಕೆ ಎಡೂರಪ್ಪ ಹೋಗಿ ಅನಾಮತ್ತು ಕಾಲಿಗೆ ಬಿದ್ದು ಹತ್ತೊರ್ಸ ಸ್ಯಾಕ್ಷನ್ ಮಾಡಿಸಿಗಂಡು ಬಂದವ್ರುನೆ, ದಿಸೀಸ್ ಪ್ಯಾಕ್ಟ್!"

"!?"

■

...ನ್ನ ದಿನಾಚರಣೆಯನ್ನು ವಿಜೃಂಭಣೆಯಿಂದ ...ಳ್ಳುವುದಿಲ್ಲ ಎಂದಿದ್ದಾರೆ. ಯಾಕೆ ಅವರು ರೈತನ ...ಡಿ! ಚೇಲಾಗಳು ಅದ್ದೂರಿಯಾಗಿ ಆಚರಿಸಿದರೆ ...ಣೆಗಾರರಲ್ಲ! ಅಲ್ಲ ಇದಕ್ಕೂ ಅಡ್ಡ ಮಾತು ...ಪ್ಪತ್ತೇಳನೇ ತಾರೀಖು ನಾನು ಹುಟ್ಟಿದ ದಿನ ...ದ್ದೂರಿಯಾಗಿ ಆಚರಿಸಿ ಅಂತ ಸೂಚನೆ ಇದೆ ...ತಿನಲ್ಲಿ ಅಂತಾರಲ್ಲ ಅವರ ನಾಲಿಗೆ ಸೇದಿ ...ದಿಲ್ಲವಾ.

...ೀ ಮುಗಿದಿಲ್ಲ ಈ ರೈತ ಸಿಸುಮಗನ ... ಇನ್ನು ಮುಂದೆ ಸಭೆ ಸಮಾರಂಭಗಳಲ್ಲಿ ... ಹಾಕಿಸಿಕೊಳ್ಳುವುದಿಲ್ಲವಂತೆ. ಹಾಗೇನಾದರೂ ...ಕುವ ಉದ್ಧಟತನ ತೋರಿದರೆ ಅರ್ಧದಲ್ಲೇ ...ರಂಭಗಳಿಂದ ಹೊರನಡೆಯುವರಂತೆ. ಗಾಂಧೀಜಿ ...ಕ್ಷರ ಬೇಡುವವರಿಂದ ಹಣ ಪಡೆದು ಹರಿಜನ ...ಗೆ ನೀಡುತ್ತಿದ್ದರು. ಕೆಂಗಲ್ ಹನುಮಂತಯ್ಯ ...ಹರಾಜು ಮಾಡಿ ಯಾವುದೋ ಕಲ್ಯಾಣನಿಧಿಗೆ ...ು. ಈ ಸಿಸುಮಗನೂ ಹೀಗೆ ಹರಾಜು ...ನೋ ತಿಳಿದುಬಂದಿಲ್ಲ, ಸದ್ಯಕ್ಕೆ ಪ್ರಸರಿಸಿರುವ ... ಪ್ರಕಾರ ಹಾರ ನಿಷೇಧ ಆಗಿದೆ. ಮುಂದೆ ...ಗಳ ಒತ್ತಾಯದ ಮೇರೆಗೆ ಅದು ಬದಲಾವಣೆ ...ು!

...ೀ ರೈತನ ಮಗ ಅಲ್ಲವಾ ಈ ಸಿಸುಮಗ. ...ೂಗಿನ ತುದೀಲೆ ಸಿಟ್ಟು ಇರ್ತದೆ. ರೈತರು ...ರಟು ನೋದಿ. ಅದಕ್ಕೇ ಇಂಜಿನಿಯರುಗಳ ...ವೇನು ಕತ್ತೆ ಕಾಯುತ್ತೀರಾ' ಅಂತಾರೆ. ಇನ್ನೊಬ್ಬ ..., ಮರಿ ಸಿಸುಮಗ, 'ಬಸ್ಸನ್ನು ಸ್ವಚ್ಛವಾಗಿಡದ ...ಂಡಕ್ಟರನ್ನ ಒದೀರಿ' ಅಂತಾರೆ. ಮತ್ತೊಂದು ...ೀ ಸರ್ಕಾರ' ಅಂತ ಹೇಳಿ ಕಲಾವಿದರನ್ನು ... ಅಸ್ಪೃಶ್ಯ ಭಾಜಪಕ್ಕೆ ತಮಸಗಳನ್ನು ಅರ್ಪಿಸಿದ ...ರಿ ಯಾರೋ ಒಬ್ಬ ಹಾದಿಬೀದಿ ಪುಂಡನ್ನ ... ಪೈಗಂಬರ್‌ಗೆ ಹೋಲಿಸುತ್ತಾರೆ. ಇವೆಲ್ಲ ...ವರು ಕೋಪ ಬಂದಾಗ ಅತಿ ಆನಂದದಿಂದ ...ಡುವ ಮಾತು. ಈ ಸರ್ಕಾರ ರೈತರ, ಬಡವರ ...ದಕ್ಕೆ ಸಾಕ್ಷಿ ಸಾಲದಾ. ಉಹುಂ. ಇಲ್ಲವಂತೆ. ...ಕೆ ನೀಡುವವರಿಗೆಲ್ಲ ತಲೆ ಕೆಟ್ಟೋಗಿದೆಯಂತೆ. ...ಪತ್ರೆಸ್‌ನಲ್ಲಿ ತಪಾಸಣೆ ಮಾಡಿಸಬೇಕಂತೆ. ... ಮಾತನ್ನು ಕಟ್ಟಿಕೊಂಡು ಹೋದರೆ ...ೀ ಹುಚ್ಚಾಸ್ಪತ್ರೆ ಆಗುತ್ತೆ ಅಷ್ಟೆ!

ರಾಕ್ಷಸ ದಳ?

ಸಂಸ್ಕೃತಿ ರಕ್ಷಣೆ ಪರಿಣಾಮಕಾರಿಯಾಗಿ ಆಗುತ್ತಿದೆ.

ದಕ್ಷ ಗೃಹಮಂತ್ರಿಗೆ ಕೃತಜ್ಞತೆ ಸಲ್ಲಿಸಬೇಕು!

ಮಂಗಳೂರಿನ ಪಬ್ ದಾಳಿ ಪರಿಣಾಮ, ಬೆಂಗಳೂರಿಗೂ ಹಬ್ಬಿದೆ. ವಿದೇಶಿ ಉಡುಪು ಧರಿಸಿದ ಮಹಿಳೆ ಮೇಲೆ ಈ ಧಾಂಡಿಗರ ಪೌರುಷ. ಒಂಟಿ ಮಹಿಳೆಯರ ಮೇಲೆ ಮಾತ್ರ ಈ ಪೌರುಷ ಉಕ್ಕಿ ಹರಿಯೋದು. ಗುಂಪಿನಲ್ಲಿದ್ದರೆ ಈ ವೀರಾರ್ಜುನರು ಬೃಹನ್ನಳೆಯರಾಗಿಬಿಡುತ್ತಾರೆ!

ಅಶ್ಲೀಲಭಾಷೆ-ಇವರ ಆಯುಧ!

ದರೋಡೆ-ಇವರ ಕಸುಬು!

ಹೆಸರು-ಸಂಸ್ಕೃತಿ ರಕ್ಷಣೆ!

ಸಂಸ್ಕೃತಿ ರಕ್ಷಣೆ ದರೋಡೆ ಅವ್ಯಾಹತವಾಗಿ ನಡೆಯುತ್ತಿದೆಯಂತೆ.

ಹೌದು ಸರ್ಕಾರ ಎನ್ನುವುದು ಒಂದು ಇದೆಯಲ್ಲ?

ಇದೆ ನಿಜ. ಅಲ್ಲಿರುವವರು ಯಾರು? ಇದೇ ಸಂಸ್ಕೃತಿ ರಕ್ಷಕರೇ!

ಗೃಹಮಂತ್ರಿಗೆ ಹೇಳಿದರೆ-'ವಿದೇಶೀ ಉಡುಪು ಧರಿಸಿ ಓಡಾಡಿದ್ದು ಯುವತಿಯರ ಅಪರಾಧ' ಎನ್ನಬಹುದು!

ತಾವು ಮಾಡದ ತಪ್ಪಿಗೆ ಅಪರಾಧಿ ಸ್ಥಾನ ಯುವತಿಯರಿಗೆ!

ಇತ್ತೀಚೆಗೆ ಮಂಗಳೂರಿನಲ್ಲಿ ಈ ಸಂಸ್ಕೃತಿ ರಕ್ಷಕರ ಹಾವಳಿ ಕುರಿತು ಮಾತನಾಡುತ್ತಿದ್ದಾಗ ಒಬ್ಬರು ವಿವರಿಸಿದ್ದು ಹೀಗೆ:

ಈ ಭಜರಂಗದಳ ಎಂದರೇನು?

ಹಲವು ಭಜರಂಗಿಗಳನ್ನು ಕೇಳಿದೆ. ಪುರಾಣವನ್ನು ಓದಿದೆ. ಎಲ್ಲಿಯೂ ಹನುಮಂತನಿಗೆ ಭಜರಂಗಿ ಎನ್ನುವ ಹೆಸರು ಇಲ್ಲ.


ಉತ್ತರ ಭಾರತದಲ್ಲಿ ಭಜರಂಗ ಅಂತ ಒಬ್ಬ ಇದ್ದ. ಆದರೆ ಅವನು ರಾಕ್ಷಸ! ಅವನನ್ನು ಸಾಯಿಸಿದ ಹನುಮಂತ ಭಜರಂಗ ಬಲಿ ಆದ!

'ಭಜರಂಗದಳ' ಅಂದರೆ 'ರಾಕ್ಷಸದಳ!'

ಇದು ತಪ್ಪೋ ಸರಿಯೋ ಗೊತ್ತಿಲ್ಲ, ಮಂಗಳೂರು, ಬೆಂಗಳೂರಿನಲ್ಲಿ ಅವರ ಆಟಾಟೋಪ ನೋಡಿದರೆ ಅದು ರಾಕ್ಷಸದಳವೇ!

■

ಮರೆಯುವ ಮುನ್ನ



■ ಪಿ. ಲಂಕೇಶ್ -ಮೇ 5, 1991

ಗ್ರೀನ್

ನಾವೆಲ್ಲ ಹಲವಾರು ವರ್ಷ ಕೆಲವು ನಟರು, ಕಲಾವಿದರು, ಸಾಹಿತಿಗಳು, ನಿರ್ದೇಶಕರ ಜೊತೆಗೆ ಬದುಕುತ್ತೇವೆ. ಅವರು ನಮ್ಮ ಜೀವನದ ಭಾಗವಾಗಿ ಹೋಗಿರುತ್ತಾರೆ. ಅಂಥ ಜನರಲ್ಲಿ ಗ್ರಹಾಂ ಗ್ರೀನ್ ಒಬ್ಬ. ನಾನು ಈ ಗ್ರೀನ್‌ನನ್ನು ಅಪ್ಪಾಗಿ ಇಷ್ಟಪಡು ತ್ತಿರಲಿಲ್ಲ. ವರದಿಗಾರ ಮತ್ತು ಕಾದಂಬರಿಕಾರ- ಎರಡೂ ಒಮ್ಮೆಗೇ ಆಗಿದ್ದ ಗ್ರೀನ್ ಬ್ರಿಟಿಷ್ ಮನಸ್ಸಿನವ. ಬದುಕಲು ಇಷ್ಟವಿಲ್ಲದೇ ಎಂಭತ್ತೇಳು ವರ್ಷ ಬದುಕಿದ ಗ್ರೀನ್ ತನ್ನ 'ಪವರ್ ಅಂಡ್ ದಿ ಗ್ಲೋರಿ' ಕಾದಂಬರಿಯ ಮೂಲಕ ಸುದ್ದಿಗೆ ಬಂದ, ಪ್ರಖ್ಯಾತನಾದ. ಆಮೇಲೆ 'ಕಮೆಡಿಯನ್ಸ್', 'ಟ್ರಾವೆಲ್ಸ್ ವಿತ್ ಮೈ ಆಂಟ್' 'ದಿ ಕ್ವಯಟ್ ಅಮೆರಿಕನ್' 'ಅವರ್ ಮ್ಯಾನ್ ಇನ್ ಹವಾನಾ' ಮುಂತಾದ



ಕಾದಂಬರಿಗಳನ್ನು ಬರೆದ. ಪನಾಮಾದ ಅಧ್ಯಕ್ಷನೊಬ್ಬ ಕ್ಯೂಬಾದ ಕ್ಯಾಸ್ಟ್ರೋ ಮುಂತಾದವರು ಇವನ ಸ್ನೇಹಿತರಾಗಿದ್ದರು-ಇಂಗ್ಲೆಂಡಿನಲ್ಲಿ ಬರೆಯುವ ವಸ್ತು ಸಿಕ್ಕದೆ ಈತ ದಕ್ಷಿಣ ಅಮೆರಿಕಾ, ಕಾಂಬೋಡಿಯಾ, ತಾಹಿಟಿ ಮುಂತಾದ ಜಾಗಗಳಿಗೆ ವಸ್ತುಗಳಿಗಾಗಿ ಹುಡುಕಿಕೊಂಡು ಹೋಗುತ್ತಿದ್ದ.

ಸಾಹಿತ್ಯದ ವಿದ್ಯಾರ್ಥಿಯಾದ ನನ್ನಂಥವರಿಗೂ ಸುಮ್ಮನೇ ಸಾಹಿತ್ಯ ಓದುವ ರಸಿಕರಿಗೂ ವ್ಯತ್ಯಾಸವಿದೆ. ಸಾಹಿತ್ಯದ ವಿದ್ಯಾರ್ಥಿ ನಿಜಕ್ಕೂ ಅರ್ಥಪೂರ್ಣ ವಸ್ತು, ಶೈಲಿ, ಪಾತ್ರಕ್ಕಾಗಿ ಹುಡುಕುತ್ತಾನೆ; ಆತನ ಮನಸ್ಸಿನಲ್ಲಿ ಫೀಲ್ಡಿಂಗ್, ಜೇನ್ ಆಸ್ಟೆನ್, ಟಾಲ್‌ಸ್ಟಾಯ್, ಕಾಮು ಮುಂತಾದವರೆಲ್ಲ ಇರುತ್ತಾರೆ. ಇಂಥ ವಿದ್ಯಾರ್ಥಿಗಳಿಗೆ ಗ್ರೀನ್‌ನಲ್ಲಿ ಹಾಸ್ಯ ದಾಖಲೆ, ದಕ್ಷ ತಂತ್ರ ಮಾತ್ರ ಕಾಣುತ್ತಿದ್ದವು. ಇವತ್ತಿಗೂ ಈತನ 'ಟ್ರಾವೆಲ್ಸ್ ವಿತ್ ಮೈ ಆಂಟ್' ಎಂಬ ಕಾದಂಬರಿ ಬಿಟ್ಟರೆ ಬೇರೆಯವು ನನ್ನ ಮನಸ್ಸು ನಾಟುವುದೇ ಇಲ್ಲ.

ಆದರೂ ಅಮೆರಿಕಾದಂಥ ದೇಶವನ್ನು ತಿಳಿದುಕೊಳ್ಳುವ ಬಗೆಯನ್ನು, ಮನುಷ್ಯನ ಉದ್ದೇಶಗಳ ದುಷ್ಟತನವನ್ನು ಅರಿಯುವ ರೀತಿಯನ್ನು, ಧರ್ಮದ ಮಿತಿ ಮತ್ತು ಶಕ್ತಿಯನ್ನು ವಿವರಿಸಿದ ಗ್ರೀನ್ ಉಪಯುಕ್ತ ಕಾದಂಬರಿಕಾರ.

ಮೆಚ್ಚಿನ ನಿರ್ದೇಶಕ



ಗ್ರೀನ್ ನಾನು ಕೇಳಿಬಲ್ಲಂಥ, ನಮ್ಮೊಂದಿಗೆ ಬಹುಕಾಲ ಇದ್ದಂಥ ವ್ಯಕ್ತಿಯಾಗಿದ್ದರೆ ಈ ಡೇವಿಡ್ ಲೀನ್ ನನ್ನ ಮೆಚ್ಚಿನ ಚಿತ್ರ ನಿರ್ದೇಶಕ. ಮೊನ್ನೆ ತನ್ನ 82 ನೇ ವಯಸ್ಸಿನಲ್ಲಿ ಈತ ತೀರಿಕೊಂಡ.

ಡೇವಿಡ್ ಲೀನ್‌ನ ಚಿತ್ರ ಬರುತ್ತೆಂದರೆ ನಾವೆಲ್ಲ ಕಾತರಿಸುತ್ತಿದ್ದೆವು; ನಾನಂತೂ ಈತನ ಚಿತ್ರವೆಂದರೆ ಸಂತೋಷದಿಂದ ಕುಣಿದಾಡುತ್ತಿದ್ದೆ. ವಿಮರ್ಶಕರು ಈತನ ಚಿತ್ರಗಳು 'ಕೇವಲ ದೃಶ್ಯ' 'ವ್ಯಾಪಾರೀ ಚಿತ್ರ' 'ದೊಡ್ಡ ಬಜೆಟ್‌ನ ಚಿತ್ರ' ಇತ್ಯಾದಿಯಾಗಿ ಮನಸ್ಸಿಗೆ ಬಂದಂತೆ ಹೀಯಾಳಿಸುವುದನ್ನು ನೋಡಿ ನನಗೆ ರೇಗಿ ಹೋಗುತ್ತಿತ್ತು. ಈತನ 'ಬ್ರಿಜ್ ಆನ್ ದಿ ರಿವರ್ ಕ್ವಾಯ್' ಚಿತ್ರವನ್ನು ಐದು ಸಲ ನೋಡಿದ್ದೇನೆ; "ಡಾ. ಜಿವಾಗೋ" ಚಿತ್ರವನ್ನು ಮೂರುಸಲ, 'ಲಾರೆನ್ಸ್ ಆಫ್ ಅರೇಬಿಯಾ' ಚಿತ್ರವನ್ನು ನಾಲ್ಕು ಸಲ ನೋಡಿದ್ದೇನೆ. ಮೊನ್ನೆ ತಾನೆ ಜಿವಾಗೋ, ಲಾರೆನ್ಸ್‌ಗಳನ್ನು ಮತ್ತೆ ವಿಸಿಆರ್‌ನಲ್ಲಿ ನೋಡಿದ್ದೇನೆ.

ಚಿತ್ರ ಅಂದರೆ ಚಿತ್ರ... ನೋಡಿದ್ದನ್ನು ಸ್ಪಷ್ಟವಾಗಿ, ಪೂರ್ಣವಾಗಿ, ಅದರೆಲ್ಲ ಸೌಭಾಗ್ಯ ಕಾಣಿಸಿಕೊಳ್ಳುವಂತೆ ಕ್ಯಾಮರಾ ಮೂಲಕ ನೋಡುವುದು ಲೀನ್ ವರಸೆ. ಈ ನೋಟದ ತೀವ್ರತೆಯಿಂದಲೇ ದೃಶ್ಯದ ಅರ್ಥ ಹೊಮ್ಮಿಸುವುದು ಆತನ ವೈಶಿಷ್ಟ್ಯ. ಜಗತ್ತಿನಲ್ಲೇ ಮೊಟ್ಟಮೊದಲ ಬಾರಿಗೆ ಅರೇಬಿಯನ್ ಮರುಭೂಮಿ ತನ್ನೆಲ್ಲ ಬಿಸಿ, ವಿಸ್ತಾರ, ದುರಂತ, ಧೂಳು, ಸಾವಿನೊಂದಿಗೆ ಆತನ 'ಲಾರೆನ್ಸ್ ಆಫ್ ಅರೇಬಿಯಾ'ದಲ್ಲಿ ಕಾಣಿಸಿಕೊಂಡಿತು. ಅದು ಬರೀ ಮರುಭೂಮಿಯಲ್ಲ, ಅದು ಲಾರೆನ್ಸ್‌ನನ್ನು ಸೆಳೆದು ಪ್ರೀತಿಸುವಂತೆ ಮಾಡಿದ್ದು ಮಾತ್ರವಲ್ಲ, ಈ ಮರುಭೂಮಿ ಲಾರೆನ್ಸ್ ಬದುಕಿನ ಮರುಭೂಮಿಯನ್ನೂ, ಮನುಷ್ಯರ ಕ್ರಿಯೆಗಳ ಬರಡುತನವನ್ನೂ ತೋರಿಸಿತು; ಹಾಗೆಯೇ ಅವೆಲ್ಲ ವಿಫಲತೆಯೊಳಗಿನ ಅರ್ಥವನ್ನು... ದೂರದ ದಿಗಂತದಲ್ಲಿ ಕಾಣುವ ಕಪ್ಪು ಚುಕ್ಕೆಯೊಂದು ಹತ್ತಿರ ಬರುತ್ತಾ ಕುದುರೆ ಮತ್ತು ಓಮರ್ ಶರೀಫ್‌ನ ರೂಪ ತಾಳುವುದು, ಚುಕ್ಕೆಯಂತೆ, ಮರೀಚಿಕೆಯಂತೆ ಕಂಡ ದೃಶ್ಯ ಮನುಷ್ಯನಾಗುವುದು-ಈ ಚಿತ್ರದ ಕೇಂದ್ರದ ಅರ್ಥಬಿಂದು ಕೂಡ.


ಡೇವಿಡ್‌ಲೀನ್ ಬಗ್ಗೆ ದೊಡ್ಡ ಪುಸ್ತಕವನ್ನೇ ಬರೆಯಬಹುದು. ಆದರೆ ಈತ 'ಡಾ. ಜಿವಾಗೋ'ದಲ್ಲಿ ಸೃಷ್ಟಿಸಿದ ಮಂಜಿನ ಹರಹು, 'ಬ್ರಿಜ್ ಆನ್ ದಿ ರಿವರ್ ಕ್ವಾಯ್'ನಲ್ಲಿ ಸೃಷ್ಟಿಸಿದ ಸೇತುವೆ ಮತ್ತು ಆತ್ಮಗೌರವ, 'ಪ್ಯಾಸೇಜ್ ಟು ಇಂಡಿಯಾ'ದಲ್ಲಿ ತೋರಿದ ಜೂಡಿ ಡೇವಿಸ್‌ಳ ಸೂಕ್ಷ್ಮ ಮುಖ......

ಡೇವಿಡ್ ಲೀನ್ ಬಗ್ಗೆ ನಾವೆಲ್ಲ ಕಲಿಯುವ ಒಂದು ಪಾಠವಿದೆ. ಅದೇನೆಂದರೆ ಆತ ತನ್ನ 82 ನೇ ವಯಸ್ಸಿನಲ್ಲಿ ಸತ್ತಾಗ ಆತ 'ನಾಸ್ಟ್ರಾಮೋ' ಎಂಬ ಚಿತ್ರ ಮಾಡುವುದರಲ್ಲಿದ್ದ. ಅದಕ್ಕಾಗಿ ಕಷ್ಟಪಟ್ಟು ಹಣ ಸೇರಿಸಿ ಚಿತ್ರಕತೆ, ಸೆಟ್ಸ್ ಕೂಡ ಸಿದ್ಧಪಡಿಸಿದ್ದ. ಒಂದು ಒಳ್ಳೆಯ ಚಿತ್ರ ಮಾಡಲು ಹದಿನೈದು ವರ್ಷ ಕಾಯಬಲ್ಲವನಾಗಿದ್ದ ಕನಸಿಸಬಲ್ಲವನಾಗಿದ್ದ ಈ ಲೀನ್... ಬದುಕಬಲ್ಲವನಿಗೆ ಸಾವು ಇಲ್ಲ ಎನ್ನುವಂತೆ ಸಿದ್ಧವಾಗುತ್ತಿದ್ದ ರೀತಿಯಲ್ಲಿ ಬದುಕೆಂಬುದು ಕನಸು ಮತ್ತು ಕ್ರಿಯೆಗಳ ಅರ್ಥಪೂರ್ಣ ಅವಧಿ ಎಂದು ತಿಳಿದು ಕೆಲಸ ಮಾಡುತ್ತಲೇ ಇದ್ದ. ಇದು ಉತ್ತಮ ಪಾಠ. ■

ಕಿ.ರಂ. ಎಂಬ ಕಾಲು ಹಾದಿ

ಅವರದ್ದು
ಹಸಿರು ತೆರೆಗಳ ಮಧ್ಯೆ
ಹೊಸದನ್ನು ಅರಸುತ್ತಾ
ಸಾಗುವ ಕಾಲುಹಾದಿ
ದಣಿಯದ ಕಾಲುಗಳು
ಮುಳ್ಳುಕಂಟಿಗಳ ಸರಿಸಿ
ಮಣ್ಣ ಸವೆಸಿ
ಇಕ್ಕೆಲಗಳ
ಮುಟ್ಟಿದರೆ ಮುನಿಗಳನ್ನು
ಮುಟ್ಟಿ
ಮುದುರಿದವುಗಳನ್ನು
ತಟ್ಟಿ ಎಬ್ಬಿಸಿ
ಸಾಗುತ್ತಾರೆ
ಮೃದುವಾಗಿ ಸ್ಪರ್ಶಿಸುತ್ತಾರೆ
ಹಸಿರು ಗರಿಕೆಗಳ
ಕಣ್ಣ ತುಂಬಿಕೊಳ್ಳುತ್ತಾರೆ
ಇಬ್ಬನಿ ಹನಿಗಳ
ಹರಿಸುತ್ತಾರೆ ದೃಷ್ಟಿ
ಅಡಿಯಿಂದ ಮುಡಿವರೆಗೂ
ಗೆದ್ದಲು ಹಿಡಿದ ಆಲದ ಮೇಲೆ
ಬಿದಕಿ ಬೇರುಗಳ
ಬೇಕಿ ಬಳಲುಗಳ

ಗೆದ್ದಲ ಅಳಿಸುತ್ತಾರೆ
ಉಳಿಸುತ್ತಾರೆ
ಅಜ್ಜ ನೆಟ್ಟಾಲಕ್ಕೆ
ನೇಣು ಹಾಕಿಕೊಳ್ಳುವವರ
ಸಾಗುತಿದೆ ದಾರಿ
ಬಾಗಿ ಬಳುಕಿ
ಏರುತಗ್ಗುಗಳಲ್ಲಿ
ಹೆಜ್ಜೆ ಸಪ್ಪಳಗಳ
ಹೀರಿಕೊಂಡ ನೆಲ
ಹದವಾಗಿದೆ
ಬರಬಹುದು ಬರುವವರು
ರಾಜಮಾರ್ಗವ ಬಿಟ್ಟು
ತೆರೆದುಕೊಂಡಿದೆ
ನಿಮಗೆ
ಅವರ ಮನದ ಹಾದಿ




■ ಡಾ.ಸಿ. ರವೀಂದ್ರನಾಥ್, ಮೈಸೂರು

ಗಣಿ ಅಗೆದಷ್ಟೂ ಗೌರಿಗೇ ಲಾಭ!

..... ಉಶ್.... ಅಮ್ಮಾ.....!

ಇಡೀ ಆಫೀಸಿಗೆ ಕೇಳಿಸುವಂತಾ fatigue ತರದ ಈ ಕೂಗು ತೂರಟುದ್ದು ನಮ್ಮ ಕ್ಯಾಪ್ಟನ್ ಛೇಂಬರಿನಿಂದ. ಮೊನ್ನೆಯ ಮಟ್ಟಿಗೆ ಅದು ಗೌರಿಯ ಆರನೇ ಬಳಲಿಕೆಯ ನಿಟ್ಟುಸಿರು.



'ಅಲ್ಲಾ ಮಾಡುತ್ತಿರೋದು ಅಪ್ಪನ ಕೆಲಸ, ಆವರೆ ಅಮ್ಮನ್ನ ಕರೆಯುತ್ತಿದ್ದಾರಲ್ಲ' ಅಂತಾ ತಮಾಷೆ ಮಾಡಿಕೊಂಡು ನಾವೆಲ್ಲಾ ನಮ್ಮ ಪಾಡಿಗೆ ಕೆಲಸ ಮುಂದುವರೆಸಿದೆವು. ಈ ಹೊಸ ವರ್ಷ ಶುರುವಾದಾಗಿನಿಂದ ನಮ್ಮ ತಂಡ ಮೈಮೇಲೆಳೆದುಕೊಂಡಿರೋ ಕೆಲಸಗಳ ರಾಶಿ ನೋಡಿದರೆ ಬರೀ 'ಅಮ್ಮಾ' ಅನ್ನುವುದೇನು, ಇದುವರೆಗೂ ಯಾರ ಕಣ್ಣಿಗೂ ಬಿದ್ದಿರದ ನಾವು ನಂಬದ ದೇವರನ್ನೂ ಕೂಗಿ ಕರೆಯಬೇಕು ಹಾಗಿದೆ ನಮ್ಮ ಸ್ಥಿತಿ.

ಮುಂದಿನ ಮಾರ್ಚ್ 8ರಂದು ನಡೆಯುವ ಲಂಕೇಶ್ ಹಾಗೂ ಗೈಡ್ ವಾರ್ಷಿಕೋತ್ಸವದ ತಯಾರಿ ಇದು. ಅವತ್ತು ಲಂಕೇಶ್ ಮೇಷ್ಟ್ರ ಹುಟ್ಟುಹಬ್ಬವೂ ಹೌದು. ಹಾಗಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಲಂಕೇಶರ ಒಂದೆರಡು ಹೊಸ ಪುಸ್ತಕ ಪ್ರಕಟಿಸುವ ಯೋಜನೆ ಹಾಕಿಕೊಂಡು ಕೆಲಸ ಮಾಡುತ್ತಿದ್ದೇವೆ. ಈಗಷ್ಟೇ ಎಲ್. ಬಸವರಾಜುರ ಕುರಿತಾದ 'ಬಸವರಾಜ ಮಾರ್ಗ' ಪುಸ್ತಕ ರೂಪಿಸಿ ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ನೇಮಕಾತಿಯ 500 ಪುಟದ ಪುಸ್ತಕ ಸಿದ್ಧ ಮಾಡಿ ಸುಸ್ತಾಗಿದ್ದ ನಾವು ಒಂದು ದಿನವನ್ನೂ ವ್ಯರ್ಥ ಮಾಡದೆ ಹೊಸ ಕೆಲಸಕ್ಕೆ ಕೈ ಹಾಕಿದ್ದೆವು.

ನಮ್ಮ ಮೈನಿಂಗ್ ಕಾರ್ಯ ಶುರುವಾದದ್ದೇ ಹೀಗೆ.

ಕಳೆದ ವರ್ಷ ಲಂಕೇಶರ 'ನೀಲು' ಪದ್ಯಗಳ ಮೊದಲನೇ ಸಂಗ್ರಹವನ್ನು ಸಂಸ್ಥೆ ಪ್ರಕಟಿಸಿತ್ತು. ಅದನ್ನು ಓದುಗರು ಸಡಗರದಿಂದ ಬರಮಾಡಿಕೊಂಡರು. ಈ ಬಾರಿ ನೀಲು 2 ಮತ್ತು ಮರೆಯುವ ಮುನ್ನ ಪುಸ್ತಕ ರೂಪದಲ್ಲಿ ಬರಲು ತಯಾರಾಗುತ್ತಿವೆ. ಅದರ ಜವಾಬ್ದಾರಿ ಗೌರಿಯವರದ್ದು. ಇದನ್ನು plan ಮಾಡುತ್ತಿದ್ದಾಗಲೇ ಸಿನಿಮಾ ಮತ್ತು ಆಟದ ಬಗ್ಗೆ ಲಂಕೇಶರ ಬರಹಗಳನ್ನು ನಾನು ಸಂಗ್ರಹಿಸಿ ಹೊಸ ಪುಸ್ತಕ ಮಾಡುವುದೆಂದು ಹೊರಟೆವು. ಖೈರ್ಲಾಂಜಿ ಮೊದಲೇ ನಮ್ಮ ಯೋಜನೆಯ ಭಾಗವಾಗಿತ್ತು, ಅದರ ನಿರ್ವಹಣೆ ಜವಾಬ್ದಾರಿಯನ್ನು ಶಿವಸುಂದರ್‌ಗೆ ವಹಿಸಲಾಯಿತು. ಇದೇ ರಭಸದಲ್ಲಿ ಕುಮಾರ್ ಸಮತಳ ಸ್ವತಃ ಅನುಭವಿಸಿ ಬರೆದ 'ಜೈಲೆಂಬ ಲೋಕವೂ' ಸೇರಿಕೊಂಡಿತು. ಇನ್ನೊಂದು ಕೊರೆ ಯಾಕೆ

ಬಿಡಿ ಚಿತ್ರಗಳು

• ಈಶ


ಉಳಿಸಬೇಕೆಂದು ನಮ್ಮ ಟೀಂನವರೆಲ್ಲಾ ಒತ್ತಾಯಿಸಿದ್ದರಿಂದ ಗೌರಿಯ ಸಂಪಾದಕೀಯ ಅಂಕಣ ಬರಹ 'ಕಂಡ ಹಾಗೆ'ಯೂ ನಮ್ಮ project ನ ಭಾಗವಾಯಿತು. ಇದರ ಬಗ್ಗೆ ನಾವು ಚರ್ಚಿಸುತ್ತಿದ್ದಾಗ 'ಕಂಡ ಹಾಗೆ ಈಗ ಬೇಡ, ಮುಂದೆ ಯಾವಾಗಲಾದರೂ ಹಾಕೋಣ' ಅಂದರು ನಮ್ಮ ಕ್ಯಾಪ್ಟನ್.

ಅದು ಅವರ ಸಂಕೋಚ.

'ನಾನು ಜರ್ನಲಿಸ್ಟ್, ಸಾಹಿತಿಯಲ್ಲ' ಅನ್ನುವುದು ಅವರ ವಾದ. 'ಆದರೇನೂ, ಅದೊಂದು ಅಂಕಣ ಬರಹ ತಾನೆ. ತೀರಾ ತಡವಾದರೆ ಕೆಲ ಬರಹ, ನಿಲುವುಗಳಿಗೆ ಸಮಕಾಲೀನತೆ ಇಲ್ಲದಂತಾಗುತ್ತದೆ' ಎಂಬುದು ನಮ್ಮ ಪ್ರತಿವಾದ.

ಯಾವಾಗಲೂ ಆಗುವಂತೆ, ನಾವೆಲ್ಲಾ ಸ್ನೇಹ ಪೂರ್ವಕವಾಗಿ ಒತ್ತಾಯ ಹೇರಿದಾಗೆಲ್ಲಾ ಮಣಿಯುವಂತೆ ಈ ಬಾರಿಯೂ ಗೌರಿ ಮಣಿದರು. ಹಾಗಾಗಿ ಬರೀ ಉಶ್ ಅಮ್ಮ ಅಲ್ಲಾ ಈ ಬಾರಿ ಅಮ್ಮಮ್ಮಾ ಅನ್ನುವಂತೆ ನಾವೆಲ್ಲಾ ನೀಲು 2, ಮರೆಯುವ ಮುನ್ನ ಜೊತೆಗೆ 'ಕಂಡ ಹಾಗೆ'ಯ ಮೊದಲ 4 ವರ್ಷಗಳ ಬರಹಗಳನ್ನು ಆರಿಸಿ, ಎಡಿಟ್ ಮಾಡಿ ರೆಡಿ ಮಾಡುವ ಜವಾಬ್ದಾರಿಯನ್ನು ಅವರ ಮೇಲೇ ಹೊರಿಸಿದ್ದೇವೆ. ಇವೆಲ್ಲಾ ಒಟ್ಟು ಸೇರಿದರೆ ಹತ್ತಿರತ್ತಿರ ಸಾವಿರ ಪುಟಗಳ ಒಟ್ಟು 6 ಪುಸ್ತಕಗಳಾಗಲಿವೆ. ಇದರ ಕಷ್ಟ ಏನೆಂದರೆ ಸುಮಾರು 25 ವರ್ಷಗಳ ಲಂಕೇಶ್ ಪತ್ರಿಕೆಯ ಪ್ರತಿ ಸಂಚಿಕೆಯನ್ನು ಹೊರತೆಗೆದು ಆಯಾ ಪುಸ್ತಕಗಳಿಗೆ ಬೇಕಾಗುವ ಲಂಕೇಶರ ಬರಹಗಳನ್ನು ಆರಿಸಿ, ಜೆರಾಕ್ಸ್ ಮಾಡಿಸಿ ಅನಗತ್ಯ ಭಾಗಗಳನ್ನು edit ಮಾಡಿ ಕಂಪ್ಯೋಸಿಂಗ್‌ಗೆ ನೀಡಬೇಕು. ಪ್ರತೀ ವಾರದ ಲಂಕೇಶ್ ವಾರಪತ್ರಿಕೆಯ ಕೆಲಸ, ಮಾಸಿಕ ಗೈಡ್‌ನ ಕೆಲಸ ಮಾಡುತ್ತಲೇ ಜೊತೆಜೊತೆಯಾಗಿ ಈ ಪುಸ್ತಕಗಳ ಕೆಲಸಗಳನ್ನು ನಿಭಾಯಿಸುವುದೆಂದರೆ ಬಳಲಿಕೆ ತಂತಾನೆ ಅಟ್ಟಿಸಿಕೊಂಡು ಬರುತ್ತದೆ. ನಿದ್ದೆ, ಹರಟೆ, ಗೆಳೆಯರ ಭೇಟಿಗಳೆಲ್ಲಾ ಬದಿಗೆ ಸರಿಯುತ್ತವೆ. ಈ ತಕ್ಷಣದಲ್ಲಿ ನಮ್ಮ ಟೀಂನಲ್ಲಿ exhaust ಆಗದಿರುವ ವ್ಯಕ್ತಿಯೆಂದರೆ ಸರ್ಕ್ಯುಲೇಷನ್ ಮುಖ್ಯಸ್ಥ ರಾಜು ಮಾತ್ರ. ಅಂದುಕೊಂಡಂತೆ ಮಾರ್ಚ್ 8ರಂದು ಈ ಪುಸ್ತಕಗಳನ್ನು ಹೊರತಂದ ನಂತರ ಅವರಿಗೂ ಸುಸ್ತು ಮಾಡಿಸಲಿದ್ದೇವೆ.

"ಲಂಕೇಶ್ ಪ್ರಕಾಶನ ಮತ್ತೆ ಗೈಡ್ ಪ್ರಕಾಶನದಿಂದ ಇನ್ನೆರಡು ವರ್ಷದಲ್ಲಿ ಇನ್ನೂರು ಟೈಟಲ್ ರೆಡಿ ಮಾಡಿ



ಕೊಡಿ, ಮಿಕ್ಕಿದ್ದು ನಾನು ನೋಡಿಕೊಳ್ಳುತ್ತೇನೆ" ಎಂದು ರಾಜು ಯಾವಾಗಲೂ ಹೇಳುತ್ತಿರುತ್ತಾರೆ.

ಇದು ಅಸಾಧ್ಯ ಅನ್ನಿಸುತ್ತಿಲ್ಲ. ಲಂಕೇಶರ ಸಿನಿಮಾ-ಆಟದ ಬರಹಗಳಿಗಾಗಿ ನಾವು ಕೆಲವರು ಪತ್ರಿಕೆಯ ಹಳೆಯ ಸಂಚಿಕೆಗಳನ್ನು ತಿರುವಿ ಹಾಕುತ್ತಿದ್ದಾಗ ಹಾಗನ್ನಿಸಿದೆ. ಪಾಶ್ಚಾತ್ಯ ಲೇಖಕರು, ರಂಗಭೂಮಿ, ವ್ಯಕ್ತಿಚಿತ್ರಗಳು, ಸಾಹಿತ್ಯ ವಿಮರ್ಶೆ ಕುರಿತ ಲಂಕೇಶರ ಅಸಂಖ್ಯ ಬಿಡಿ ಬರಹಗಳ ರಾಶಿಯೇ ಅಲ್ಲಿದೆ. ಇವನ್ನೆಲ್ಲಾ ಜೋಡಿಸಿ ಪ್ರಕಟಿಸಿದರೆ ಕನಿಷ್ಠ ಇನ್ನೂ ಹತ್ತು ಪುಸ್ತಕಗಳಾಗಬಹುದು. ಜೊತೆಗೆ ಇನ್ನಿತರ ಪ್ರಮುಖರ ಅನೇಕ ಬರಹಗಳ ಪುಸ್ತಕಗಳಾಗಬಹುದು. ಇದನ್ನೆಲ್ಲಾ ನೋಡುತ್ತಾ ಕೆಲವೊಮ್ಮೆ ಮಾಡಬೇಕಾದ ಕೆಲಸ ಮರೆತು ನಿಂತ ಸ್ಥಳದಲ್ಲೇ ಅವನ್ನು ಓದುತ್ತಾ ಇದ್ದಾಗ ನಾನು 'ಗಣಿ ಅಗೆದಷ್ಟೂ ಗೌರಿಗೇ ಲಾಭ' ಅಂದೆ ತಮಾಷೆಯಾಗಿ. ಗೌರಿ ನಕ್ಕು, 'ಸಂಸ್ಥೆಗೆ ಅನ್ನಿ' ಅಂದರು. ನಾವು ಮಾತನಾಡಿಕೊಂಡ ಒಂದು ವಿಚಾರ ಉತ್ಪ್ರೇಕ್ಷೆ ಅನ್ನಿಸಲಾರದು ಎಂಬ ಧೈರ್ಯದಿಂದ ಇಲ್ಲಿ ಹೇಳಬಹುದು.

ಅದು ಲಂಕೇಶರ ಬರವಣಿಗೆಯ ವ್ಯಾಪ್ತಿ ಮತ್ತು ಅಗಾಧತೆಯದ್ದು.

ರಾಜಕೀಯ ವಿಶ್ಲೇಷಣೆ, ಸಾಹಿತ್ಯ ನಾಟಕ, ನೀಲು ಕಾವ್ಯ, ವಿಮರ್ಶೆ, ಸಿನಿಮಾ, ಕ್ರೀಡೆ, ಮರೆಯುವ ಮುನ್ನದಂತಹ ಹತ್ತಾರು ಸಂಗತಿಗಳಿಗೆ ಲಂಕೇಶ್ ಏಕಕಾಲದಲ್ಲಿ ಸ್ಪಂದಿಸಿದ್ದಾರೆ. ಅವರ ಒಂದು ಕಣ್ಣು ನಷ್ಟವಾದ ಮೇಲೂ, ನಿರ್ಗಮಿಸುವ ಮುನ್ನಿನ ಎರಡು-ಮೂರು ವರ್ಷಗಳಲ್ಲಿ ತಾವೇ ತಿಂಗಳಲ್ಲಿ ಎರಡಾದರೂ ಪುಸ್ತಕ ವಿಮರ್ಶೆ ಬರೆದಿದ್ದಾರೆ. ಈ ಮಟ್ಟದ ಎನರ್ಜಿಯನ್ನು ಬೇರೆ ಯಾರಾದರೂ ಕನ್ನಡ ಬರಹಗಾರರು ತೋರಿದ್ದಾರ ಎಂದು ಚೆಕ್ ಮಾಡಬೇಕಿದೆ. ಲಂಕೇಶ್ ಬರಹಗಳೆಂಬ ಗಣಿಯನ್ನು ಅಗೆಯುತ್ತಾ ಅಗೆಯುತ್ತಾ ಸಿಗುವ ಅಮೂಲ್ಯರಾದದ್ದನ್ನೆಲ್ಲ ನಿಮಗೊಪ್ಪಿಸುವ ಸಡಗರ ನಮಗೆ. ಅದೇ ರೀತಿ ಹೊಸದಾದ 'ಖೈರ್ಲಾಂಜಿ', 'ಜೈಲೆಂಬ ಲೋಕದಲ್ಲಿ' ಪ್ರಕಟಿತ 'ಬಸವರಾಜ ಮಾರ್ಗ', 'ಡಿಸೆಂಬರ್ 13' ಮುಂತಾದವು ನಮ್ಮ ತಂಡದವರ ಜನಪರ ಕಾಳಜಿಗಳ, ಸಂಕೇತ. ನಮ್ಮ ಕೆಲಸ ಹಾಗೂ ಚಟುವಟಿಕೆಗಳೆಲ್ಲಾ ಹೀಗೇ ಸಂಯೋಜನೆಗೊಂಡಿರಬೇಕೆಂಬ ನಿಲುವು ನಮ್ಮದು. ನಮ್ಮ ಸಿದ್ಧತೆಗಳೆಲ್ಲ ಹೀಗೆ ಸಾಗುತ್ತಿರುವಾಗಲೇ ಅದೇ ದಿನ ಸಂಜೆ....

'Wah... my Appa is great' ಎಂಬ ಉದ್ಗಾರ ಕೇಳಿಬಂತು. ಲಂಕೇಶರ ಮರೆಯುವ ಮುನ್ನ ಪುಸ್ತಕದ ಟಿಪ್ಪಣಿಯೊಂದನ್ನು ಓದಿ ಹೊರಟ ಮೆಚ್ಚುಗೆಯ ಮಾತದು. ಆ ದನಿ ಬಂದಿದ್ದು ಬೆಳಗ್ಗೆ 'ಉಶ್... ಅಮ್ಮಾ...' ಅಂದಿದ್ದ ನಮ್ಮ ಕ್ಯಾಪ್ಟನ್ ಛೇಂಬರಿನಿಂದ.

ವಂಚಕ ನಾಚಪ್ಪನ ಜಾತಕ ಬಿಚ್ಚಿಟ್ಟಿದ್ದೀರಿ

'ಕೊಡಗಿಗೊಂದು ಮಂಡೆತುಣಿ - ನಂದಿನೆರವಂಡ ನಾಚಪ್ಪ ಕೊಡವ' ಈ ಲೇಖನ ಓದುತ್ತಿದ್ದಂತೆ ನನ್ನ ಪಿ.ಯು.ಸಿ. ಗೆಳೆಯನೊಬ್ಬನ ಮಾತು ನೆನಪಿಗೆ ಬಂತು. ಆತ ಪ್ರತಿದಿನ ಕ್ಯಾಪ್ ಹಾಕಿ ಕ್ಲಾಸ್‌ಗೆ ಬರುತ್ತಿದ್ದ. ಒಮ್ಮೆ ಆತ ಟೊಪ್ಪಿ ಹಾಕುತ್ತಿರುವ ಕಾರಣ ಕೇಳಿದಾಗ ಆತ ಹೇಳಿದ ಮಾತು: 'ನಾನು ಟೊಪ್ಪಿ ಹಾಕ್ಕೊಂಡು ಬರೋದೇ ಬೇರೆಯವರಿಗೆ ಟೊಪ್ಪಿ ಹಾಕಲಿಕ್ಕೆ' ಎಂದು. ಫೆಲ್ಟ್ ಹ್ಯಾಟ್, ಪನಾಮ ಕ್ಯಾಪ್, ಕ್ರಿಕೆಟ್ ಕ್ಯಾಪ್, ಇದೀಗ ಮಂಡೆತುಣಿ, ನಾಚಪ್ಪ ಹಾಕುವುದೆಲ್ಲಾ ನನ್ನ ಗೆಳೆಯನ ಮಾತಿನಂತೆ ಮುಗ್ಧ ಕೊಡವರಿಗಾಗಿ ಸಾಂದರ್ಭಿಕ ಟೊಪ್ಪಿಗಳನ್ನು ತಯಾರಿಸಿಕೊಂಡಂತಿದೆ.

ಕೊಡಗಿನಲ್ಲಿ ಬಹಳಷ್ಟು ಸಂಘಟನೆಗಳು ಹುಟ್ಟಿ ಅದರ ತಿಥಿಯೂಟ ಮಾಡಿಯಾಗಿದೆ. ಸಂಘಟನೆಗಳ ನಾಮಕರಣವಾದಾಗಲೆಲ್ಲ ಕೊಡವರು ಹಿಂದುಮುಂದು ನೋಡದೆ ಬೃಹತ್ ಪ್ರಮಾಣದಲ್ಲಿ ಬೆಂಬಲಿಸುವುದು ಹಾಗೂ ಸಂಘಟನೆಗಳ ಬಣ್ಣ ಬಯಲಾದಂತೆ ಅದನ್ನು ಬೆತ್ತಲುಗೊಳಿಸುವುದು ಕಳೆದ 25 ವರ್ಷಗಳಿಂದ ಸರ್ವೇಸಾಮಾನ್ಯವಾಗಿದೆ.

ತೆ
ಹೊಗಳಿಕೆ
ಚಿ
ಕೆ

ಕೊಡವರೆಂದರೆ 20ನೇ ಶತಮಾನದಲ್ಲಿ ಒಂದಾಗಿ ಬೆರೆತುಹೋಗಿರುವ ಮಲ್ಲ ಕೊಡವ, ಸಣ್ಣ ಕೊಡವ, ಜಮ್ಮ ಕೊಡವ ಮತ್ತು ಬೊಡ್ಡ ಕೊಡವ ನಾಲ್ಕು ಪಂಗಡ. ಇವರಲ್ಲಿ ತರುವ ಕೊಡುವ ಸಂಬಂಧಗಳಿರಲಿಲ್ಲ ಎಂದು ವರದಿಗಾರ ಉಲ್ಲೇಖಿಸಿದ್ದರೂ, ಕೊಡವರೆಂದರೆ ಮತ್ತು ಕೊಡವ ಸಂಸ್ಕೃತಿಯೆಂದರೆ ಅದೊಂದು ಪಕ್ಕಾ ಪ್ರಗತಿಪರ ಚಿಂತನೆಯಲ್ಲಿ ಹುಟ್ಟಿಕೊಂಡಂಥ ಸಂಸ್ಕೃತಿ. ಈ ಜಾತಿ, ಸಂಸ ತಿ ಹುಟ್ಟಿಕೊಂಡದ್ದೆ ಅಂತರ್ಜಾತಿ ವಿವಾಹದಿಂದ. ಇಲ್ಲಿ ಹೆಣ್ಣುಗಂಡಿಗೆ ಮೊದಲಿಂದಲೂ ಸಮಾನ ಹಕ್ಕು ನೀಡಲಾಗಿತ್ತು, ಈ ಜನಾಂಗ ವಿವಾಹ ವಿಚ್ಛೇದನ ಮತ್ತು ವಿಧವಾ ವಿವಾಹಕ್ಕೆ ಇಲ್ಲಿ ತನ್ನದೇ ಆದ ನೀತಿನಡವಳಿಕೆಗಳನ್ನು ಮಾಡಿಕೊಂಡಿತ್ತು, ನಾಮಧಾರಿಗಳನ್ನು ಬೆನ್ನಲ್ಲಿ ಕಟ್ಟಿಕೊಂಡು ಕೊಡವ ಸ್ವಾಯತ್ತತೆಗೆ, ಕೊಡವ ಉದ್ಧಾರಕ್ಕೆ 'ಓರಾಟ' ನಡೆಸುವ ನಾಚಪ್ಪ ಕೊಡವರು ಒಂದು ಪ್ರತ್ಯೇಕ ಧರ್ಮ ಎಂದು ಹೇಳುತ್ತಿದ್ದರೂ ಕೊಡವರು ಇತ್ತೀಚೆಗೆ ಗಣಪತಿ ಹೋಮ, ಸತ್ಯನಾರಾಯಣಪೂಜೆ ಮಾಡುತ್ತಿರುವುದು ಕೊಡವ ಸಂಸ್ಕೃತಿಯ ಭಾಗವಲ್ಲ ಎಂದು ಎದೆತಟ್ಟಿ ಎಂದೂ ಫತ್ವ ಹೊರಡಿಸಲೇ ಇಲ್ಲ.

ಸಂಘಪರಿವಾರ ಮುಸ್ಲಿಮ್ ಎಂಬುದು ದೆವ್ವ ಎಂದು ಬಿಂಬಿಸಿ ತಮ್ಮ ಬೇಳೆಕಾಳು ಬೇಯಿಸಿಕೊಳ್ಳುತ್ತಿರುವಂತೆ ಮಂಡೆತುಣಿ ನಾಚಪ್ಪ ಕೊಡವನಿಗೆ ಶತ್ರುಗಳಿಲ್ಲದೆ ಪರಿತಪಿಸುತಿದ್ದ ಸಮಯದಲ್ಲಿ ರಾತ್ರೋರಾತ್ರಿ ಕನಸಿನಲ್ಲಿ ಪ್ರಗತಿಪರ ಚಿಂತಕರು ನಕ್ಸಲರಾಗಿ, ಬುಡಕಟ್ಟು ಜನರು ಬುಡಕಟ್ಟು ಮಾಫಿಯಾವಾಗಿ, ದಲಿತರು ದಲಿತ ಮಾಫಿಯಾವಾಗಿ ಕಾಣಿಸಿಕೊಂಡು ಮಂಡೆತುಣಿಯಲ್ಲಿ ಬೆವರು ಒರೆಸಿಕೊಳ್ಳಲು ಪುರುಸೊತ್ತು ಇಲ್ಲದಂತೆ ಊರೂರು ತಿರುಗುತ್ತಾ ಡಂಗೂರ ಸಾರಲು ಹೊರಟದ್ದಂತೂ ನಿಜ.

ಕೊಡಗಿನ ಪೊಲೀಸರಂತೂ ನಮ್ಮ ಕಣ್ಣಿಗೆ ಬೀಳದ ನಕ್ಸಲರು, ಈ ಮಾಫಿಯಾಗಳು ನಾಚಪ್ಪ ಕೊಡವನ ಕಣ್ಣಿಗೆ ಮಾತ್ರ ಹೇಗೆ ಕಾಣಿಸುತ್ತಾರೆ ಎಂದು ಟೊಪ್ಪಿ ತೆಗೆದು ತಲೆ ಪರಚಿಕೊಳ್ಳುತ್ತಿದ್ದಾರೆ. ಈ ನಾಚಪ್ಪ ಶೂರ ಮತ್ತು ಪ್ರಾಮಾಣಿಕರಾದ ಕೊಡವ ಜನಾಂಗಕ್ಕೇ ಕಳಂಕ!

ವಂಚಕ ನಾಚಪ್ಪನ ಜಾತಕ ಬಿಚ್ಚಿಟ್ಟ ಪತ್ರಿಕೆಗೆ ಅಭಿನಂದನೆಗಳು.

- ಮುಕ್ಕಾಟಿರ ಅನಿಲ್, ವೀರಾಜಪೇಟೆ

ಕಳೆದ ವಾರದ ನಿಮ್ಮ ಪತ್ರಿಕೆಯಲ್ಲಿ ಪಾಂಡವಪುರದ ಕೊಠಾರಿ ಶುಗರ್ಸ್ ಕುರಿತಾದ ಒಂದು ಲೇಖನವಿದೆ. ಅದರಲ್ಲಿನ ಬಹುಪಾಲು ಸಂಗತಿಗಳು ನಿಜವಾಗಿವೆ. ಕಬ್ಬು ಬೆಳೆಯುತ್ತಿರುವ ರೈತರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿರುವ ಸರ್ಕಾರ, ಸಕ್ಕರೆ ಕಾರ್ಖಾನೆಯ ಮಾಲೀಕರೊಂದಿಗೆ ಸರಸ ನಡೆಸುತ್ತಿದೆ. ಈ ಬಾರಿ ಸಕ್ಕರೆ ಮತ್ತು ಬೆಲ್ಲದ ದರ ಅತ್ಯಂತ ಹೆಚ್ಚಾಗಿದ್ದು ಸಕ್ಕರೆ ಕಾರ್ಖಾನೆಗಳಿಗೆ ಕಬ್ಬಿನ ಕೊರತೆ ಉಂಟಾಗಿದೆ. ಹಾಗಾಗಿ ತಮ್ಮ ವ್ಯಾಪ್ತಿಯ ಕಬ್ಬು ಮಾತ್ರವಲ್ಲದೆ, ಇತರೆ ಪ್ರದೇಶದ ಕಬ್ಬನ್ನೂ ಒಪ್ಪಂದ ಮಾಡಿಸಿಕೊಳ್ಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಪಾಂಡವಪುರ ಫ್ಯಾಕ್ಟರಿಯನ್ನು ಒಂದೋ ಮುಳುಗಿಸಿಬಿಡಬೇಕು ಇಲ್ಲವೇ ಅದನ್ನು ಶಾಶ್ವತ ವಾಗಿ ತನ್ನದನ್ನು ಮಾಡಿಕೊಳ್ಳಬೇಕೆಂದು ಕೊಠಾರಿ ಹೊರಟಿದ್ದಾನೆ. ಅದರ ಕುರಿತು ಸರಿಯಾದ ಸಮಯದಲ್ಲಿ ನೀವು ಲೇಖನ ಪ್ರಕಟಿಸಿದ್ದೀರಿ. ಪತ್ರಿಕೆಗೆ ಅಭಿನಂದನೆಗಳು.


ಆದರೆ ಇನ್ನೊಂದು ಪ್ರಮುಖ ವಿಚಾರದಲ್ಲಿ ಅದೇ ಲೇಖನದಲ್ಲಿ ಬಂದಿರುವ ವಿಚಾರ ಸತ್ಯಕ್ಕೆ ದೂರವಾದುದ್ದಾಗಿದೆ. ಮಾತ್ರವಲ್ಲ, ಪ್ರಗತಿಪರ ಸಂಘಟನೆಗಳಿಗೆ ಘಾಸಿಯುಂಟು ಮಾಡುವಂಥದ್ದಾಗಿದೆ. ರೈತ ಸಂಘದ ಅಧ್ಯಕ್ಷ ಪುಟ್ಟಣ್ಣಯ್ಯನವರು ಮಾತನಾಡಲಿ ಎಂದು ಬಯಸಿರುವುದು ಸರಿಯಾದದ್ದೇ ಆದರೂ, ಅದಕ್ಕಾಗಿ ಅವರೂ 'ಡೀಲ್' ಆಗಿದ್ದಾರೆಯೇ ಎಂದೆಲ್ಲ ಚುಚ್ಚಿರುವುದು ಅನಗತ್ಯವಾಗಿತ್ತು, ಅದರಲ್ಲೂ ಪಿಎಸ್‌ಎಸ್‌ಕೆಗೆ ಈ ಹಿಂದೆ ಅಧ್ಯಕ್ಷರಾಗಿದ್ದ ಕೆ.ಎಸ್.ನಂಜುಂಡೇಗೌಡರನ್ನು ಭ್ರಷ್ಟ ಎಂದು ಕರೆದು ಏಕವಚನ ಬಳಸಿರುವುದನ್ನು ನಿಮ್ಮ ಪತ್ರಿಕೆಯಲ್ಲಿ ನೋಡಿ ಬೇಸರವಾಯಿತು.

ವಾಸ್ತವದಲ್ಲಿ ರೈತಸಂಘ ಪಿಎಸ್‌ಎಸ್‌ಕೆ ಆಡಳಿತ ಹಿಡಿಯುವಷ್ಟರಲ್ಲಿ ಜಾಗತೀಕರಣ ನೀತಿಯು ಜಾರಿಗೆ ಬಂದು ಒಂದಾದ ಮೇಲೆ ಒಂದು ಕ್ಷೇತ್ರವನ್ನು ಖಾಸಗಿಯವರಿಗೆ ಕೊಡಲು ಸರ್ಕಾರ ಎಲ್ಲಾ ಹುನ್ನಾರಗಳನ್ನು ಹೂಡುತ್ತಿತ್ತು, ಸಹಕಾರ ಕ್ಷೇತ್ರದ ಕಾರ್ಖಾನೆಗಳು ಉಳಿಯಲು ಬೇಕಾದ ಯಾವ ಸಹಕಾರವನ್ನೂ ಸರ್ಕಾರಗಳು ನೀಡುತ್ತಿರಲಿಲ್ಲ, ಈ ಕಾರ್ಖಾನೆಯಲ್ಲಿನ ಯಂತ್ರಗಳೂ ಬಹಳ ಹಳೆಯದಾಗಿದ್ದು, ಅಷ್ಟು ಹೊತ್ತಿಗಾಗಲೇ ಕಷ್ಟದಲ್ಲಿತ್ತು, ಆ ಸಂದರ್ಭದಲ್ಲಿ ರೈತಸಂಘ ಮತ್ತು ಕಾರ್ಖಾನೆಯ ಆಡಳಿತ ಮಂಡಳಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ನಂಜುಂಡೇಗೌಡರು ಸಾಕಷ್ಟು ಪ್ರಾಮಾಣಿಕ ಪ್ರಯತ್ನವನ್ನೇ ಮಾಡಿದ್ದರು. ಇದು ಈ ಭಾಗದಲ್ಲಿ ಬಹುತೇಕರಲ್ಲಿ ಇರುವ ಅಭಿಪ್ರಾಯವಾಗಿದೆ. ಹಾಗಿರುವಾಗ ನಂಜುಂಡೇಗೌಡರ ವಿರುದ್ಧದ ವಿಚಾರಗಳನ್ನು ನಿಮ್ಮ ಪತ್ರಿಕೆಯಲ್ಲಿ ಬರೆದಿರುವುದು ಖಂಡಿತ ಸರಿಯಲ್ಲ. ರೈತಸಂಘದ ಕುರಿತು, ಅದರ ನಾಯಕರ ಕುರಿತು ಇರಬಹುದಾದ ವಿಮರ್ಶೆಗಳನ್ನು ನಾಡಿನ ಮತ್ತು ಅದೇ ಚಳವಳಿಯ ಹಿತದೃಷ್ಟಿಯಿಂದ ವಿಮರ್ಶೆ ಮಾಡುವುದು ಬೇರೆ, ಈ ರೀತಿಯ ಸುಳ್ಳು ಆರೋಪಗಳನ್ನು ಹೊರಿಸುವುದು ಬೇರೆ ಎಂದೆನಿಸಿದ್ದರಿಂದ ಈ ಪತ್ರವನ್ನು ಬರೆಯುತ್ತಿದ್ದೇನೆ.

- ವಾಸು ಎಚ್.ವಿ., ಕರ್ನಾಟಕ ಜನಪರ ವೇದಿಕೆ

ಸ್ಪಷ್ಟೀಕರಣ

ಕಳೆದ ಸಂಚಿಕೆಯಲ್ಲಿ 'ಪಾಂಡವಪುರ ಸಕ್ಕರೆ ಕಾರ್ಖಾನೆಯ ಗೋಳು: ದರೋಡೆಗಿಳಿದ ಕೊಠಾರಿ' ಎಂಬ ವರದಿಯಲ್ಲಿ ರೈತಸಂಘದ ಅಧ್ಯಕ್ಷ ಕೆ.ಎಸ್. ನಂಜುಂಡೇಗೌಡರ ಭ್ರಷ್ಟಾಚಾರದಿಂದಾಗಿ ಪಿಎಸ್‌ಎಸ್‌ಕೆ ಅವನತಿಯ ದಾರಿ ಹಿಡಿದು ಮುಚ್ಚೇ ಹೋಯಿತು' ಎಂಬ ವಾಕ್ಯವು ಕೇವಲ ತಾಂತ್ರಿಕ ದೋಷದಿಂದಷ್ಟೇ ಬಂದಿದೆ. ವಾಸ್ತವದಲ್ಲಿ ಪಿಎಸ್‌ಎಸ್‌ಕೆಗೆ ನಂಜುಂಡೇಗೌಡರು ಅಧ್ಯಕ್ಷರಾಗುವ ಹೊತ್ತಿಗಾಗಲೇ ಕಾರ್ಖಾನೆ ಅವನತಿಯ ದಾರಿಯಲ್ಲಿ ಬಹಳಷ್ಟು ಮುಂದೆಹೋಗಿಬಿಟ್ಟಿತ್ತು. ಅವರು ಸಾಕಷ್ಟು ಪರಿಶ್ರಮಪಟ್ಟು ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲು ಪ್ರಯತ್ನಿಸಿದರಾದರೂ ಅದು ಫಲಪ್ರದವಾಗಲಿಲ್ಲ. ಕಾರ್ಖಾನೆಯ ಬಗ್ಗೆ ಅಪಾರ ಆಕಾಂಕ್ಷೆ, ನಿರೀಕ್ಷೆಗಳನ್ನಿಟ್ಟುಕೊಂಡಿದ್ದ ರೈತರಿಗೆ ಸಹಜವಾಗಿ ಇದರಿಂದ ನಿರಾಶೆಯಾಗಿದ್ದು ನಿಜ. ಆದರೆ, ಪತ್ರಿಕೆಯಲ್ಲಿ ಅವರ ಕೊಡುಗೆಗೆ ತದ್ವಿರುದ್ಧವಾದ ಅರ್ಥ ಬರುವ ವಾಕ್ಯವೊಂದು ಪ್ರಕಟವಾಗಿದ್ದಕ್ಕೆ ವಿಷಾದಿಸುತ್ತೇವೆ.



...ಗಿನ್ನೂ ನಲವತ್ತಮೂರು ಧಾಟಿ ನಲವತ್ತನಾಲ್ಕಕ್ಕೆ ...ಸಿರುವ ರೆಹಮಾನ್ ಎಂಬ ಮ್ಯೂಸಿಕ್ ಮಾಂತ್ರಿಕ ...ಎಲ್ಲರ ಮೆಚ್ಚುಗೆಯ ಕೇಂದ್ರಬಿಂದು. ರಾಷ್ಟ್ರೀಯ ...ಗಳಿಂದ ಹಿಡಿದು ಪುಡಿ ಚಾನೆಲ್‌ನವರೂ ಈಗ ...ಮಾನ್ ಮಂತ್ರ ಪಠಿಸುತ್ತಿದ್ದಾರೆ. ಕೆಲವು ಮಾಧ್ಯಮ ...ೂ 'ರೆಹಮಾನ್ ಸೋಲಿಲ್ಲದ ಸರದಾರ' ಎಂದೇ ...ಯುತ್ತಿವೆ. ಆದರೆ, ರೆಹಮಾನ್ ಬಳಿಯೇ ಹೋಗಿ ...ಾತನ್ನು ಹೇಳಿದರೂ ಸ್ವತಃ ಆತನೇ ಈ ಮಾತನ್ನು ...ಪ್ಪುದಿಲ್ಲ. ಯಾಕೆಂದರೆ ರೆಹಮಾನ್ ಎಂಬ ಯಶಸ್ವೀ ...ಷ ಕೂಡ ಸೋಲಿನ ಹೊಡೆತಗಳಿಗೆ ಮೈ ...ವರೇ.

...ದಿನೇಳು ವರ್ಷಗಳ ಹಿಂದೆ ಬಂದ 'ರೋಜಾ' ... ಮೂಲಕ ತನ್ನ ಸಂಗೀತ ಪ್ರಭೆಯನ್ನು ದೇಶಕ್ಕೇ ...ಸಿದ ರೆಹಮಾನ್ ಇಂದು ಆಸ್ಕರ್ ಗರಿಯನ್ನು ತನ್ನ ಮುಡಿಗೇರಿಸಿಕೊಂಡಿದ್ದಾರೆ. ಈ ನಡುವೆ ಹಲವಾರು ಹಿಟ್ ಹಾಡುಗಳನ್ನು ನೀಡಿದ್ದರೂ ಅದರ ಜೊತೆಜೊತೆಗೆ ಹಲವೊಮ್ಮೆ ಸೋಲಿನ ರುಚಿಯನ್ನೂ ಕಂಡಿದ್ದಾರೆ. ಅದನ್ನು ನೋಡಿ ಹಲವರು "ಇತ್ತೀಚೆಗೆ ರೆಹಮಾನ್‌ನ ಟ್ಯೂನ್‌ಗಳು ಸ್ಟೇಲ್ ಆಗುತ್ತಿವೆ. ರೆಹಮಾನ್ ಜಮಾನಾ ಮುಗಿದುಹೋಯ್ತು. ಇನ್ನು ಆತನಿಂದ ಸಂಗೀತದಲ್ಲಿ ಹೊಸ ರೀತಿಯ ಜಾದೂ ಮಾಡಲು ಸಾಧ್ಯವಿಲ್ಲ" ಎಂದು ಷರಾ ಬರೆದಿದ್ದರು.

ಇಂಥ ಮಾತುಗಳಿಗೆ ಇಂಬು ಕೊಡುವಂತೆ 2006-07ರಲ್ಲಿ ರೆಹಮಾನ್ ಕೆರಿಯರ್ ಗ್ರಾಫ್ ಕೂಡ ಕೊಂಚ ಕಳೆಗುಂದಿತ್ತು. ಕಳೆದೆರಡು ವರ್ಷಗಳಿಂದೀಚೆಗೆ ರೆಹಮಾನ್ ಸಂಗೀತ ನೀಡಿದ್ದ 'ಅಳಗಿಯ ತಮಿಳ್ ಮಗನ್', ಭಾರತೀ ರಾಜಾ ನಿರ್ದೇಶನದ 'ಕಣ್‌ಗಳಿಲ್ ಖೈದ್ ಸೆಯ್', 'ಶಿವಾಜಿ' ಮತ್ತು 'ವಾಟರ್' ಚಿತ್ರಗಳ ಸಂಗೀತ ಮಾರುಕಟ್ಟೆಯಲ್ಲಿ ನಿರೀಕ್ಷಿಸಿದಷ್ಟು ಯಶಸ್ವಿಯಾಗಿರಲಿಲ್ಲ. ಜೊತೆಗೆ ಭಾರತ ಚಿತ್ರರಂಗದಲ್ಲಿ ದೊಡ್ಡ ಮಟ್ಟದ ನಿರೀಕ್ಷೆ ಮೂಡಿಸಿದ್ದ 'ಜೋಧಾ ಅಕ್ಬರ್' ಚಿತ್ರದ ಮ್ಯೂಸಿಕ್ ಕೂಡಾ ಠುಸ್ ಎಂದಿತ್ತು. ಇದೇ ಹೊತ್ತಿಗೆ 'ವಾರಿಯರ್ಸ್ ಆಫ್ ಹೆವೆನ್ ಅಂಡ್ ಅರ್ಥ್' ಎಂಬ ಹಾಲಿವುಡ್ ಚಿತ್ರಕ್ಕೆ ರೆಹಮಾನ್ ಸಂಗೀತ ನೀಡಿದ್ದರು. ಆದರೆ ಹಾಲಿವುಡ್ ಮಂದಿಯಿಂದ ಅದಕ್ಕೆ ದಕ್ಕಬೇಕಾದ ಸ್ಥಾನ-ಮಾನ ದೊರಕಲೇ ಇಲ್ಲ. ಚಿರಂಜೀವಿ ನಟಿಸಿ, ಹಾಲಿವುಡ್‌ನಲ್ಲಿ ನಿರ್ಮಾಣವಾಗಬೇಕಿದ್ದ 'ದಿ ರಿಟರ್ನ್ ಆಫ್ ದಿ ಥೀಫ್ ಆಫ್ ಬಾಗ್ದಾದ್' ಚಿತ್ರಕ್ಕೆ ಸಂಗೀತ ನೀಡುವ ಮಹದಾಸೆ ರೆಹಮಾನ್‌ರದ್ದಾಗಿದ್ದಾದರೂ ಆ ಚಿತ್ರ ಆರಂಭದ ಮುನ್ನವೇ ಡ್ರಾಪ್ ಆಗಿದ್ದರಿಂದ ರೆಹಮಾನ್ ಮತ್ತಷ್ಟು ದಲ್ ಆಗಿದ್ದರು.

■ ಅರುಣ್ ಕುಮಾರ್.ಜಿ

ರೆಹಮಾನ್ ಸಂಗೀತ ನೀಡಿದ್ದ ಚಿತ್ರಗಳು ಹೀಗೆ ತಲೆ ಕೆಳಗಾಗುತ್ತಿರುವ ವೇಳೆಗೆ ಹಿಂದಿಯಲ್ಲಿ ಸಂದೀಪ್ ಚೌಟ, ಅಮರ್ ಮೊಹಿಲೆ, ಸಲೀಂ ಸುಲೇಮಾನ್, ವಿಶಾಲ್-ಶೇಖರ್‌ರ ಎಂಬ ಹೊಸಬರ ಅಲೆ ಅಪ್ಪಳಿಸಿತ್ತು. ತಮಿಳಿನಲ್ಲಿ ಕಳೆದ ಹದಿನಾರು ವರ್ಷ ರೆಹಮಾನ್ ಕಾಯ್ದುಕೊಂಡು ಬಂದಿದ್ದ ನಂ. 1 ಪಟ್ಟಕ್ಕೆ ಹ್ಯಾರಿಸ್ ಜಯರಾಜ್, ವಿದ್ಯಾಸಾಗರ್, ಇಳಯರಾಜಾ ಅವರ ಪುತ್ರ ಯುವನ್ ಶಂಕರ್ ರಾಜಾ, ಮತ್ತೊಬ್ಬ ಸಂಗೀತ ನಿರ್ದೇಶಕ ದೇವಾ ಅವರ ಮಗ ಕಾರ್ತಿಕ್ ದೇವಾ.... ಹೀಗೆ ಹೊಸ ಹುಡುಗರೇ ಲಗ್ಗೆ ಹಾಕಿದ್ದರು. ಆಗ ರೆಹಮಾನ್ "ಇತ್ತೀಚೆಗೆ ನನಗೆ ಸಿನಿಮಾ ಸಂಗೀತದ ಬಗೆಗಿನ ಆಸಕ್ತಿ ಕ್ಷೀಣಿಸುತ್ತಾ ಹೋಗುತ್ತಿದೆ" ಎಂಬ ಮಾತುಗಳನ್ನಾಡಿ ಸಂಪೂರ್ಣವಾಗಿ ಆಲ್ಬಂಗಳ ಕಡೆಗೆ ವಾಲಿದ್ದರು.

ಇವೆಲ್ಲಾ ರೆಹಮಾನ್‌ರ ಡೌನ್‌ಫಾಲ್‌ನ ಸೂಚನೆಯಂತೆ ಕಂಡಿದ್ದವು. ಆದರೆ ಅಸಾಧಾರಣ ಪ್ರತಿಭೆಯನ್ನು ಹೊಂದಿರುವ ರೆಹಮಾನ್‌ರಂಥ ಟ್ಯಾಲೆಂಟೆಡ್ ವ್ಯಕ್ತಿ ಅಷ್ಟು ಸಣ್ಣ ಸೋಲಿಗೆ, ಹಿನ್ನಡೆಗೆ ಅಳುಕುವುದುಂಟೇ?

ನೋ ಛಾನ್ಸ್!

ಹೊಸ ಸಾಧ್ಯತೆಗಳ ಅನ್ವೇಷಣೆಯಲ್ಲಿದ್ದ ರೆಹಮಾನ್‌ಗೆ ಅದೇ ಸಮಯಕ್ಕೆ 'ಸ್ಲಂಡಾಗ್ ಮಿಲಿಯನೇರ್' ಚಿತ್ರಕ್ಕೆ ಸಂಗೀತ ನೀಡುವ ಅವಕಾಶ ಸಿಕ್ಕಿತು. ಮತ್ತೆ ಮೈಕೊಡವಿ ಎದ್ದು ನಿಲ್ಲಲು ರೆಹಮಾನ್‌ನಂಥ ಕ್ರಿಯಾಶೀಲ, ಪ್ರತಿಭಾವಂತನಿಗೆ ಇದಕ್ಕಿಂತ ಬೇರೆ ಇನ್ನೇನು ಬೇಕು?

ಲಂಕೇಶರ 'ನೀಲು' ಕವನವೊಂದು ಹೇಳಿರುವಂತೆ 'ಸಾವಿನ ಭಯವೇ ನಿಜಕ್ಕೂ ಬದುಕುವ ಆಸೆಗೆ ಸ್ಫೂರ್ತಿ'. ರೆಹಮಾನ್‌ನಲ್ಲಿದ್ದ ಸೋಲಿನ ಭಯವೇ ದೊಡ್ಡ ಸಾಧನೆಗೆ ಸೋಪಾನವಾಗಿದೆ ಎಂಬುದರಲ್ಲಿ ಅನುಮಾನವಿಲ್ಲ. ಸೋಲನ್ನೇ ಗೆಲುವಿನ ಏಣಿಯನ್ನಾಗಿಸಿಕೊಳ್ಳುವುದು ನಿಜವಾದ ಸಾಧಕನ ತಾಕತ್ತು ಕೂಡ!

ರೆಹಮಾನ್ ಎಂಬ ದೈತ್ಯ ಪ್ರತಿಭೆಗೆ ಕಂಗ್ರಾಟ್ಸ್! ■

ಅಘೋರಿ ದೇವರು!

...ಮಿಳಿನಲ್ಲಿ 'ನಾನ್ ಕಡವುಳ್' ಎಂಬ ...ಂದು ಬಂದಿದೆ. ನಾನ್ ಕಡವುಳ್ ... 'ನಾನೇ ದೇವರು' ಎಂದರ್ಥ. ...ದು ಇದು ಭಕ್ತಿಪ್ರಧಾನ ಚಿತ್ರವಲ್ಲ. ...ಗಿ ಸಮಾಜದ ಮುಖ್ಯವಾಹಿನಿ... ದೂರವಿರುವ ಅಘೋರಿಗಳ ವಿಕ್ಷಿಪ್ತ ... ವಿಲಕ್ಷಣ ಲೋಕವನ್ನು ತೆರೆದಿಡುವ ...ಸದಾ ಹೊಸಹೊಸ ಪ್ರಯತ್ನಗಳನ್ನು ...ತ್ತಾ ಇಡೀ ಇಂಡಿಯಾ ಚಿತ್ರರಂಗವನ್ನು ... ಬೆಚ್ಚಿಬೀಳಿಸುವ ಬಾಲಾ ಈ ...ನ್ನು ನಿರ್ದೇಶಿಸಿದ್ದಾರೆ.


...ಬದಹಾಗೆ, ಈ ಚಿತ್ರಕ್ಕೆ ಬಾಲಾ ...ಕೊಂಡ ಸಮಯ ಎಷ್ಟು ಗೊತ್ತೆ? ... ಮೂರೂವರೆ ವರ್ಷ! ಖರ್ಚಾಗಿರು... ಬರೀ ಇಪ್ಪತ್ತು ಕೋಟಿ!!


...ೂದಲಿಗೆ ಈ ಚಿತ್ರಕ್ಕೆ ಮೂವತ್ತು ... ಅಡಿಗಳಷ್ಟು ಶೂಟ್ ಮಾಡಿ ...ಕಾರ ಸುರೇಶ್ ಅರಸ್‌ರೊಂದಿಗೆ ...ಗ್ ಟೇಬಲ್ ಮುಂದೆ ಕುಳಿತ ...ಗೆ ಯಾಕೋ ಅದು ಇಷ್ಟವಾಗಲಿಲ್ಲ. ... ಆಗ ಚಿತ್ರೀಕರಿಸಿದ್ದ ರೀಲುಗಳಲ್ಲಿ ...ನೂರು ನಿಮಿಷದ ದೃಶ್ಯಗಳನ್ನು ಮಾತ್ರ ಉಳಿಸಿಕೊಂಡು ...ಉಳಿದೆಲ್ಲಾ ರೀಲ್‌ಗಳನ್ನು ಕಸದಬುಟ್ಟಿಗೆ ಬಿಸಾಡಿದರಂತೆ. ...ದ ಆದ ನಷ್ಟ ಏಳು ಕೋಟಿ ರೂಪಾಯಿಗಳು. ತನ್ನ ...ದಿಂದಾಗಿ ನಷ್ಟಕ್ಕೀಡಾದ ನಿರ್ಮಾಪಕನ ಮನವೊಲಿಸಿ ...ಬ್ಬ ನಿರ್ಮಾಪಕರಿಂದ ಹಣ ಹೂಡಿಸಿ ಚಿತ್ರ ...ರ್ಣಗೊಳಿಸಿ ಈಗ ಬಿಡುಗಡೆಗೊಳಿಸಿದ್ದಾರೆ ಬಾಲಾ.

... ಚಿತ್ರದ ಮುಖ್ಯ ಪಾತ್ರವಾದ ಅಘೋರಿ ನಾಯಕನಾಗಿ ...ರುವ ಆರ್ಯನ ಶ್ರಮದ ಬಗ್ಗೆಯೇ ಎಲ್ಲರೂ ...ಯುತ್ತಿದ್ದಾರೆ. ತಲೆಕೆಳಗು ಮಾಡಿ ಕಾಲುಗಳನ್ನು ಮೇಲಕ್ಕೆ ... ಧ್ಯಾನ ಮಾಡುವ ದೃಶ್ಯವಂತೂ ಮೈನವಿರೇಳಿಸು... ಇದರ ಚಿತ್ರೀಕರಣದ ಸಂದರ್ಭದಲ್ಲಿ ಆತ ಹಲವೊಮ್ಮೆ ...ಂಟೆಗೂ ಹೆಚ್ಚು ಕಾಲ ಇದೇ ಭಂಗಿಯಲ್ಲಿ ಇರಬೇಕಿತ್ತು. ... ಆತನ ದೇಹದ ಕತೆ ಏನಾಗಿರಬೇಡ?

...ಷ್ಟು ಕುಂಭಮೇಳದಲ್ಲಿ ಆತ ಸ್ನಾನ ಮಾಡುವ ...ಂತೂ ಮೈಮೇಲೆ ಒಂದಿಂಚೂ ಬಟ್ಟೆಯಿಲ್ಲದೆ ... ನಟಿಸಿದ್ದನಂತೆ! ಆದರೆ ಸೆನ್ಸಾರ್ ತಕರಾರಿನಿಂದ ಆ ದೃಶ್ಯ ಕತ್ತರಿಸಿಹೋಗಿದೆ. ಇಡೀ ಚಿತ್ರದಲ್ಲಿ ನೈಜ ಬೆಳಕನ್ನೇ ಬಳಸಿಕೊಂಡು ಚಿತ್ರೀಕರಿಸಿದ್ದಾರೆ. ಜೊತೆಗೆ ಅದ್ಭುತವೆನಿಸುವ ಎಡಿಟಿಂಗ್ ಕೆಲಸ ಮಾಡಿರುವ 'ನಾನ್ ಕಡವುಳ್' ಚಿತ್ರದ ಸಂಕಲನಕಾರ ನಮ್ಮ ಕನ್ನಡಿಗ ಸುರೇಶ್ ಅರಸ್ ಅವರನ್ನು ಮತ್ತೊಮ್ಮೆ ಎಲ್ಲರೂ ಕೊಂಡಾಡುತ್ತಿದ್ದಾರೆ.

ವಿಚಿತ್ರ ಭಂಗಿಯಲ್ಲಿ ಆರ್ಯ






ಈ ಹಿಂದೆ ಹುಚ್ಚು ಪ್ರೇಮಿಯ ಕಥಾನಕವನ್ನು ಹೊಂದಿದ್ದ 'ಸೇದು' ಅನ್ನೋ ಚಿತ್ರವನ್ನು ಬಾಲಾ ನಿರ್ದೇಶಿಸಿದ್ದರು. ಆ ಚಿತ್ರದ ಹುಚ್ಚನ ಪಾತ್ರದಲ್ಲಿ ಮನೋಜ್ಞವಾಗಿ ನಟಿಸಿದ್ದರಿಂದಲೇ ನಟ ವಿಕ್ರಮ್‌ಗೆ ಸ್ಟಾರ್ ವ್ಯಾಲ್ಯೂ ದೊರಕಿತ್ತು. ಇದೇ 'ಸೇದು' ಚಿತ್ರವನ್ನೇ ಕನ್ನಡದಲ್ಲಿ 'ಹುಚ್ಚ' ಎಂದು ಭಟ್ಟಿ ಇಳಿಸಲಾಗಿತ್ತು. ಇದರಿಂದ ಸುದೀಪ್ ಕೂಡ ಕನ್ನಡ ಚಿತ್ರರಂಗದಲ್ಲಿ ಹೊಸ ಕಿಚ್ಚು ಮೂಡಿಸಿದರು ಅನ್ನೋದು ಬೇರೆ ವಿಷಯ. ಬಾಲಾ ಮಾಡಿದ ಮತ್ತೊಂದು ಚಿತ್ರ 'ಪಿತಾಮಗನ್' ಕೂಡ ತಮಿಳು ಚಿತ್ರರಂಗದಲ್ಲಿ ಹೊಸ ಸಂಚಲನವನ್ನು ಮೂಡಿಸಿತ್ತು. ವಿಕ್ರಂ ಮತ್ತು ಸೂರ್ಯ ಅದರಲ್ಲಿ ಜೊತೆಯಾಗಿ ನಟಿಸಿ ಹಲವಾರು ಪ್ರಶಸ್ತಿಗಳನ್ನೂ ಗಿಟ್ಟಿಸಿಕೊಂಡಿದ್ದರು. ಅದೇ 'ಪಿತಾಮಗನ್'ನನ್ನು ಕನ್ನಡದಲ್ಲಿ 'ಅನಾಥ'ರನ್ನಾಗಿ ರಿಮೇಕಿಸಿ ಬಾಲಾರ ಮೂಲ ಚಿಂತನೆ, ಕಲ್ಪನೆಗೇ ಕೊಳ್ಳಿ ಇಟ್ಟಿದ್ದು ನಮ್ಮ ನಿರ್ದೇಶಕ ಸಾಧು ಕೋಕಿಲ ಎಂಬ ಆಸಾಮಿಯ ಹಿರಿಮೆ.

ಒಟ್ಟನಲ್ಲಿ ಬಾಲಾನ ಬೆನ್ನುಬಿದ್ದು ಆತ ನಿರ್ದೇಶಿಸಿದ ಚಿತ್ರಗಳ ಹಕ್ಕು ಪಡೆಯಲು ಚಾತಕಪಕ್ಷಿಗಳಂತೆ ಕಾಯುವ ನಮ್ಮ ಕನ್ನಡದ ಕೆಲ ನಿರ್ಮಾಪಕರು 'ನಾನ್ ಕಡವುಳ್' ಚಿತ್ರವನ್ನೂ ಕದ್ದು ತಂದು ಉಪೇಂದ್ರ ಅಥವಾ ಸುದೀಪರನ್ನು 'ಅಘೋರಿ'ಯನ್ನಾಗಿಸುವ ಘೋರ ಚಿಂತನೆ ನಡೆಸಿದ್ದಾರೆ.

ತಮಿಳಿನ 'ಕಡವುಳ್' ಹಣೆಬರಹ ಕನ್ನಡದಲ್ಲಿ ಕೆಟ್ಟುಹೋಗಲೇಬೇಕೆಂಬುದಿದ್ದರೆ ಆ ದೇವರೇ ಬಂದರೂ ತಪ್ಪಿಸಲು ಸಾಧ್ಯವಿಲ್ಲ! ■





'ಯಜಮಾನ್ರು' ಸಂಚಿಗೆ 'ಸಂಭಾಷಣೆ' ಬಲಿ!

'ದೊಡ್ಡವರ' ಹೊಡೆತಕ್ಕೆ ಸಿಲುಕಿದ ಹೊಸಬರ ಚಿತ್ರವೊಂದು ಮತ್ತೊಮ್ಮೆ 'ಅಕಾಲಿಕ ಮರಣ' ಹೊಂದಿದೆ.

ಮೊನ್ನೆ ಶುಕ್ರವಾರದ ಸಿನಿಮಾ ಪುರವಣಿಗಳಲ್ಲಿ ಜಾಹೀರಾತು ನೀಡಿರುವ ಆ ಚಿತ್ರ ತಂಡದವರು "ಪ್ರಬಲವಾದ ಒತ್ತಡಗಳಿಂದ ನಮ್ಮ 'ಈ ಸಂಭಾಷಣೆ' ಕನ್ನಡ ಚಲನಚಿತ್ರವನ್ನು ನರ್ತಕಿ ಚಿತ್ರಮಂದಿರದಿಂದ ವರ್ಗಾಯಿಸಲಾಗಿದೆ" ಎಂದಿದ್ದಾರೆ.


ಆಗಿರುವುದಿಷ್ಟೇ: ಕಳೆದ ವಾರವಷ್ಟೇ ಯುವ ನಿರ್ದೇಶಕ ರಾಜಶೇಖರ್ ನಿರ್ದೇಶನದ ಚೊಚ್ಚಲ ಚಿತ್ರ 'ಈ ಸಂಭಾಷಣೆ' ಬಿಡುಗಡೆಯಾಗಿತ್ತು. ಥಿಯೇಟರ್ ಮಾಲೀಕರ ಹೊಸ ಸಂಪ್ರದಾಯದಂತೆ ಎರಡು ವಾರ ಚಿತ್ರವನ್ನು ತೆಗೆಯುವಂತಿಲ್ಲ ಎಂಬ ಅಗ್ರಿಮೆಂಟ್ ಕೂಡಾ ಆಗಿತ್ತು. ಆದರೆ ಸಾಹಸಸಿಂಹ ವಿಷ್ಣುವರ್ಧನ್ ಅವರೇ ನರ್ತಕಿ ಚಿತ್ರಮಂದಿರದ ಮುಖ್ಯಸ್ಥ ಭಾಷಾ ಅವರಿಗೆ ಫೋನು ಮಾಡಿ 'ಈ ಸಂಭಾಷಣೆ' ಚಿತ್ರವನ್ನು ತೆಗೆದು ತಮ್ಮ 'ನಂ ಯಜಮಾನರು' ಬಿಡುಗಡೆಗೊಳಿಸಬೇಕೆಂದು ಒತ್ತಡ ಹೇರಿದರಂತೆ. ಇದರೊಂದಿಗೆ ಗಾಂಧಿನಗರದ ಅಘೋಷಿತ ಸರ್ವಾಧಿಕಾರಿ ಎನ್. ಕುಮಾರ್ ಸಹ ಮೇಲಿಂದ ಮೇಲೆ ಒತ್ತಡ ಹೇರಿದ್ದಾರೆ. ಈ ಎಲ್ಲ ಫೋರ್ಸ್‌ಗಳಿಗೆ ಮಣಿದ ಭಾಷಾ ಒಪ್ಪಂದವನ್ನು ಮರೆತು 'ಯಜಮಾನರಿಗೆ' ಜೈ ಎಂದಿದ್ದಾರೆ.



ಟಿ.ಎಸ್. ನಾಗಾಭರಣ ನಿರ್ದೇಶನದ ಹಿಂದಿನ ಚಿತ್ರ 'ಕಲ್ಲರಳಿ ಹೂವಾಗಿ'ಯನ್ನು ಇದೇ ರೀತಿ ಎತ್ತಂಗಡಿ ಮಾಡಿದಾಗ ಭರಣ ಥಿಯೇಟರಿನ ಮುಂದೆ ಧರಣಿ ಕೂತು ದೊಡ್ಡ ರಾದ್ಧಾಂತ ಮಾಡಿದ್ದರು. ಈಗ ಅದೇ ಭರಣರ ಚಿತ್ರದ ಬಿಡುಗಡೆಗಾಗಿ ಬೇರೊಬ್ಬರ ಚಿತ್ರ ಪ್ರಾಣಬಿಟ್ಟಿದೆ.

ಯಾಕೋ ಏನೋ? 'ಈ ಸಂಭಾಷಣೆ' ಚಿತ್ರದ ಗ್ರಹಗತಿಯೇ ಚೆನ್ನಾಗಿದ್ದಂತಿಲ್ಲ. ಚಿತ್ರೀಕರಣದ ಸಂದರ್ಭದಲ್ಲಿ ನಟಿ ಹರಿಪ್ರಿಯಾ ಕೊಡಬಾರದ ಕಾಟ ಕೊಟ್ಟು ಚಿತ್ರತಂಡವನ್ನು ಹೈರಾಣು ಮಾಡಿದ್ದಳು. ಈಗ ಚಿತ್ರಮಂದಿರ ಸಮಸ್ಯೆಯಿಂದಾಗಿ ಮುಖ್ಯ ಚಿತ್ರಮಂದಿರದಲ್ಲೇ 'ಸಂಭಾಷಣೆ' ಸ್ಥಗಿತಗೊಂಡಿದೆ.

ನಿರ್ಮಾಪಕದ್ವಯರ ನೆಂಟಸ್ತಿಕೆ!


ರಾಕ್‌ಲೈನ್

ಕನ್ನಡದ ಕೋಟಿ ನಿರ್ಮಾಪಕರಾದ ರಾಕ್‌ಲೈನ್ ವೆಂಕಟೇಶ್ ಮತ್ತು ಮುನಿರತ್ನ ಇಬ್ಬರೂ ಈಗ 'ಸಂಬಂಧ' ಬೆಳೆಸಿದ್ದಾರೆ!

ಅಂದರೆ, ರಾಕ್‌ಲೈನ್ ಮಗ ಯತೀಶ್‌ಬಾಬುಗೆ ಮುನಿ ರತ್ನರ ಮಗಳು ಸಿಂಧೂರಿಯನ್ನು ಕೊಟ್ಟು ಮದುವೆ ಮಾಡಲು ಅವರಿಬ್ಬರೂ ನಿರ್ಧರಿಸಿದ್ದಾರೆ. ಮೊನ್ನೆ ಶನಿವಾರ ಅಶೋಕ ಹೋಟೇಲಿನಲ್ಲಿ ಆ ಯುವಕ ಯುವತಿಯ ನಿಶ್ಚಿತಾರ್ಥವನ್ನೂ ಈ ನಿರ್ಮಾಪಕದ್ವಯರು ಮುಗಿಸಿದ್ದಾರೆ. ಆದರೆ ಅಂದಿನ ಕಾರ್ಯಕ್ರಮಕ್ಕೆ ಅವರು ಚಿತ್ರರಂಗದವರನ್ನೇ ಕರೆಯದಿದ್ದದ್ದೇ ವಿಶೇಷ!


ಮುನಿರತ್ನ

ಏನಾದರೂ ಆಗಲಿ, ಮುನಿರತ್ನರ ಬೀಗರಾಗುವ ಮೂಲಕ ಧೀರ ರಾಕ್‌ಲೈನ್ ವೆಂಕಟೇಶ್ ಕುಖ್ಯಾತ ರೌಡಿ ಫಿಂಗರ್‌ಲೆಸ್ ಕೊರಂಗು ವಿಗೂ ಹತ್ತಿರದ ನೆಂಟರಾಗುತ್ತಿದ್ದಾರೆ! ■

R B P LANKESH, Kannada Weekly Price Rs. 12/- 11-03-2009 RNI No. KARKAN2005/14648/ Regd.No.KA/RNP/BGS/2036/2008-10 Posted at : Basavanagudi, B'lore-4.

ಕಾರ್ಮಿಕ ಜಿಂದಾಬಾದ್



ಕಳೆದ ವಾರ ಕಂಠೀರವ ಸ್ಟುಡಿಯೋದಲ್ಲಿರುವ ಡಾ.ರಾಜ್‌ಕುಮಾರ್ ಸಮಾಧಿ ಬಳಿ ನಿತ್ಯವೂ ಮುಸ್ಸಂಜೆಯ ಹೊತ್ತಿನಲ್ಲಿ ಆರೇಳು ಸಾವಿರ ಜನ ಸೇರುತ್ತಿದ್ದರು. ಅವರೆಲ್ಲಾ ಅಶೋಕ್ ನೇತೃತ್ವದ ಚಲನಚಿತ್ರ ಕಾರ್ಮಿಕರ ಸಂಘ ನಡೆಸುತ್ತಿದ್ದ ಪರ್ಯಾಯ 'ಅಮೃತಮಹೋತ್ಸವ ಸಮಾರಂಭಕ್ಕೆ' ಹಾಜರಾಗಿ ಅಲ್ಲಿನ ಕಾರ್ಯಕ್ರಮಗಳನ್ನು ನೋಡಿ ಸಂತೋಷದಿಂದ ತಮ್ಮ ಮನೆಗಳಿಗೆ ಹಿಂದಿರುಗುತ್ತಿದ್ದರು.

ಕಾರ್ಮಿಕರ ಸಂಘವನ್ನು ಚೇಂಬರ್‌ನವರು ನಿರ್ಲಕ್ಷಿಸಿದರು ಎಂಬ ಕಾರಣಕ್ಕೆ ಸಂಘ ಈ ಪರ್ಯಾಯ ಸಮಾರಂಭವನ್ನು ಹಮ್ಮಿಕೊಂಡಿದ್ದು ಇದನ್ನು ಪಾರ್ವತಮ್ಮ ರಾಜ್‌ಕುಮಾರ್ ಅವರು ಉದ್ಘಾಟಿಸಿದರಲ್ಲದೆ ಪ್ರತೀ ಸಂಜೆ ಚಿತ್ರರಂಗದ ನಾಯಕ-ನಾಯಕಿಯರು ತಪ್ಪದೇ ಹಾಜರಾಗುತ್ತಿದ್ದರು. ಮುಖ್ಯವಾಗಿ ರಮ್ಯಾ ಆಂದ್ರಿತಾ ರೇ ಮೊದಲಾದ ನಾಯಕಿಯರು 'ನೃತ್ಯ ಸಂಜೆ' ಎಂಬ ಕಾರ್ಯಕ್ರಮಕ್ಕೆ ಬಂದು ಅಲ್ಲಿ ಕುಣಿದುಕುಪ್ಪಳಿಸಿ ನೆರೆದಿದ್ದ ಕಾರ್ಮಿಕರನ್ನು ಸಂತೋಷಗೊಳಿಸಿದರು. ಅದೇ ರೀತಿ ದರ್ಶನ್ ಮತ್ತು ವಿಜಯ್ 'ಸಾಹಸ ಸಂಜೆ' ಕಾರ್ಯಕ್ರಮದಲ್ಲಿ ಭಾಗವಹಿಸಿ ಸಮಸ್ತ ಕಾರ್ಮಿಕರ ಸಮ್ಮುಖದಲ್ಲಿ ಲೈವ್ ಸಾಹಸಗಳನ್ನು ಮಾಡಿ ಎಲ್ಲರನ್ನು ಬೆರಗುಗೊಳಿಸಿದರು. ನಾಯಕ ನಟರು ತಮ್ಮ ಜೀವದ ಹಂಗನ್ನು ತೊರೆದು ಈ ರೀತಿ ಲೈವ್ ಸಾಹಸದಲ್ಲಿ ಭಾಗವಹಿಸಿರುವುದು ಕಡಿಮೆ. ಹೀಗಾಗಿ ಅಂದು ಕಾರ್ಮಿಕರೆಲ್ಲ ಈ ಇಬ್ಬರು ನಾಯಕನಟರನ್ನು ಮನಸಾರೆ ಅಭಿನಂದಿಸಿದರು.



ಪಾರ್ವತಮ್ಮ ರಾಜ್‌ಕುಮಾರ್ ಮತ್ತು ಅವರ ಮೂವರು ಪುತ್ರರು ಪ್ರತಿನಿತ್ಯವೂ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ ಕಾರ್ಮಿಕರಿಗೆ ತಮ್ಮ ನೈತಿಕ ಬೆಂಬಲವನ್ನು ನೀಡಿದ್ದು ಕಾರ್ಮಿಕರಲ್ಲಿ ಹೊಸ ಉತ್ಸಾಹವನ್ನು ಸೃಷ್ಟಿಸಿತು. ಅದೇ ರೀತಿಯಲ್ಲಿ ಕಾರ್ಮಿಕರಿಗೆ ಬೆಂಬಲವನ್ನು ನೀಡಿದ ಮತ್ತೊಬ್ಬ ಮಹಾನ್ ಕಲಾವಿದ ಎಂದರೆ ಹಿನ್ನೆಲೆ ಗಾಯಕ ಎಸ್ಪಿ ಬಾಲಸುಬ್ರಮಣ್ಯ. 'ಹಾಡಿನ ಸಂಜೆ' ಕಾರ್ಯಕ್ರಮದಂದು ಭಾಗವಹಿಸಲು ಸಾಧ್ಯವಾಗದ ಎಸ್ಪಿಬಿ ದಿಢೀರನೆ 'ಸಾಹಸ ಸಂಜೆ' ಕಾರ್ಯಕ್ರಮದಂದು ಬಂದು ಹಾಡಿ ಎಲ್ಲರನ್ನೂ ರಂಜಿಸಿ ಕಾರ್ಮಿಕರ ಮನಗೆದ್ದರು.

ಒಂದು ವಾರ ನಡೆದ ಈ ಕಾರ್ಯಕ್ರಮದ ಮತ್ತೊಂದು ವಿಶೇಷತೆಯೆಂದರೆ ಶಾಂಸುಂದರ್ ಎಂಬ ಹಳೇ ಕಾಲದ ಫೈಟ್ ಮಾಸ್ಟರ್ ಅನ್ನು ಕಾರ್ಮಿಕರು ಸನ್ಮಾನಿಸಿದ್ದು. ಈ ಶಾಂಸುಂದರ್ ಈಗ ನೂರು ವರ್ಷದ ಹಣ್ಣುಹಣ್ಣು ಮುದುಕ. ನಡೆಯಲು ಆಗದ ಈ ಮಾಜಿ ಫೈಟ್ ಮಾಸ್ಟರ್ ಅನ್ನು ದರ್ಶನ್, ವಿಜಯ್, ಅಶೋಕ್, ರವೀಂದ್ರನಾಥ ಮತ್ತು ಅನೇಕ ಕಾರ್ಮಿಕರು ಸೇರಿ ಎತ್ತಿಕೊಂಡು ಕರೆತಂದು ವೇದಿಕೆಯ ಮೇಲೆ ಸನ್ಮಾನಿಸಿದ್ದು ಹೃದಯಸ್ಪರ್ಶಿಯಾಗಿತ್ತು.

ಸಂಘದ ಈ ಕಾರ್ಯಕ್ರಮದಲ್ಲಿ ಆರ್ಥಿಕ ಕೊರತೆ ಎದ್ದು ಕಾಣುತ್ತಿದ್ದರೂ ಅಲ್ಲಿ ಪ್ರೀತಿ-ಗೌರವಕ್ಕೇನೂ ಕೊರತೆಯಿರಲಿಲ್ಲ. ಪ್ರತಿಯೊಬ್ಬ ಕಲಾವಿದರು "ವರ್ಷವಿಡೀ ನಮ್ಮ ಕೆಲಸ ಮಾಡುವ ಕಾರ್ಮಿಕರನ್ನು ನಾವೆಲ್ಲ ರಂಜಿಸುವುದು ನಮ್ಮ ಕರ್ತವ್ಯ" ಎಂಬ ರೀತಿಯಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ನಿಟ್ಟಿನಲ್ಲಿ ಕಾರ್ಮಿಕರ ಸಂಘದ ಅಮೃತಮಹೋತ್ಸವ ಸಮಾರಂಭ ಸಂಪೂರ್ಣ ಯಶಸ್ವಿಯಾಗಿದೆ ಎಂದು ಹೇಳಬಹುದು.

■ ಶೆಣೈ

ಇದೇನು ಕಥೆ ಯಜಮಾನ್ರೇ?

ಬಹಳ ಸಮಯದ ನಂತರ ವಿಷ್ಣು ಅಭಿನಯದ ಚಿತ್ರವೊಂದು ತೆರೆಕಂಡಿದೆ. ಇದರ ಹೆಸರು 'ನಂ ಯಜಮಾನ್ರು'. ನಾಗಾಭರಣರಂತಹ 'ಬುದ್ಧಿಜೀವಿ' ಈ ತರಹದ ಅಸಂಬದ್ಧ ಚಿತ್ರ ಮಾಡಲು ಹೇಗೆ ಸಾಧ್ಯ? ಎಂಬ ಪ್ರಶ್ನೆಯಂತೂ ಚಿತ್ರ ನೋಡಿದ ನಂತರ ಉದ್ಭವಿಸುತ್ತದೆ.

ವಿಷ್ಣು ನವ್ಯಾ ನಾಯರ್, ಲಕ್ಷ್ಮೀಗೋಪಾಲಸ್ವಾಮಿ, ಇವರೆಲ್ಲಾ ಚೆನ್ನಾಗಿ ನಟಿಸಿದ್ದಾರೆ. ಹಾಡಿನ ಚಿತ್ರೀಕರಣ ಕೂಡಾ ಸೂಪರ್. ಆದರೆ ಯಡವಟ್ಟಾಗಿರುವುದು ಕಥೆಯಲ್ಲಿ.

ಈ ಚಿತ್ರದ ಕತೆ ಹೀಗಿದೆ. ವಿಷ್ಣು ಮತ್ತವರ ಕುಟುಂಬ ರಸ್ತೆ ಅಪಘಾತಕ್ಕೊಳಗಾಗುತ್ತದೆ.. ಅದರಲ್ಲಿ ಅನೇಕರು ಸಾಯುತ್ತಾರೆ. ಆದರೆ ವಿಷ್ಣು ಹೆಂಡತಿ ಮತ್ತು ಪಕ್ಕದ ಮನೆ ಹುಡುಗಿ ಬದುಕುತ್ತಾರೆ. ಆದರೆ ಅವರ ದೇಹ ಒಂದಕ್ಕೊಂದು ಅಂಟಿಕೊಂಡಿರುತ್ತದೆ. ವೈದ್ಯರು ಸರ್ಜರಿ ಮಾಡಿದಾಗ ಹೆಂಡತಿ 'ಔಟ್'ಆಗುತ್ತಾಳೆ. ಪಕ್ಕದ್ಮನೆ ಹುಡುಗಿ ಬದುಕುತ್ತಾಳೆ. ಆಶ್ಚರ್ಯವೆಂದರೆ ಅನಂತರ ಆಕೆ ತಾನೇ ವಿಷ್ಣು ಹೆಂಡತಿ ಎಂದು 'ಭಾವಿಸಿ' ವರ್ತಿಸಲು ಶುರು ಮಾಡುತ್ತಾಳೆ. ಇದಕ್ಕೆ ವೈದ್ಯಕೀಯವಾಗಿ ಏನೋ ಒಂದು ರೋಗದ ಹೆಸರು ಹೇಳುತ್ತಾರೆ.



ವಿಷ್ಣು ಜತೆ ತನ್ನ ಪ್ರೇಯಸಿ ಇರುವುದನ್ನು ನೋಡಿ ಆಕೆಯ ಪ್ರಿಯತಮ ಅಪ್‌ಸೆಟ್ ಆಗುತ್ತಾನೆ. ಕೊನೆಗೆ ವೈದ್ಯರ ಸಹಾಯದಿಂದ ಆಕೆಯನ್ನು ಗುಣಮುಖ ಮಾಡಿ ವಿಷ್ಣು 'ನಂ ಯಜಮಾನ'ನಾಗುತ್ತಾರೆ.

ಈ ಕಥೆ ಕೇಳಿದಾಕ್ಷಣ ಚಿತ್ರ ಹೇಗಿದೆ ಎಂದು ನೀವು ಊಹಿಸಬಹುದು ತಾನೇ? ಇನ್ನು ಈ ಚಿತ್ರ ಸಾಮಾಜಿಕವೋ? ವೈಜ್ಞಾನಿಕವೋ? ಪ್ರೇಮಕಥೆಯೋ? ನೀವೇ ನಿರ್ಧರಿಸಿ. ಒಂದಂತೂ ಸತ್ಯ: ಈ ಚಿತ್ರ ಮುಗಿದು ಹೊರಬರುವುದರೊಳಗೆ ನೀವು ಕೂಡಾ ವೈದ್ಯರ ಬಳಿಹೋಗಬೇಕಾಗುತ್ತದೆ. ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ಹಳೇ ಕಾಲದ ಕಥಾವಸ್ತುವಿನ ಈ ಚಿತ್ರ ತೆರೆಕಂಡಿರುವುದು, ನಾವಿನ್ನೂ ಹಳೇ ಕಾಲದಲ್ಲೇ ಇದ್ದೇವೆ ಎಂಬುದನ್ನು ಸೂಚ್ಯವಾಗಿ ತೋರಿಸುತ್ತದೆ.

'ತಬ್ಬಲಿ'ಯು ನೀನಾದೆ ಮಗನೆ!



ಉಪೇಂದ್ರರ ಗರಡಿಯಲ್ಲಿ ಬೆಳೆದ ಲೋಕಿ ನಿರ್ದೇಶನದ 'ತಬ್ಬಲಿ' ಚಿತ್ರದ ಬಗ್ಗೆ ವಿಶೇಷವಾಗಿ ಹೇಳುವಂತಾದ್ದೇನೂ ಇಲ್ಲ. ಹಾಲಿವುಡ್‌ನ 'TSOTSI' ಎಂಬ ಚಿತ್ರದಿಂದ ಲೋಕಿ ಈ ಚಿತ್ರವನ್ನು ಕನ್ನಡಕ್ಕೆ ಭಟ್ಟಿ ಇಳಿಸಿದ್ದಾರೆ.

ಚಿತ್ರದ ಮೊದಲ ಅರ್ಧದಲ್ಲಿ ಹೇಗೆಲ್ಲಾ ಕಳ್ಳತನ ಮಾಡಬಹುದು ಎಂಬುದನ್ನು ತೋರಿಸಲಾಗಿದೆ. ವಿರಾಮದ ನಂತರ ಹಾಗೆ ಕಳ್ಳತನ ಮಾಡಿದ ನಾಯಕ ಹೇಗೆ ಒಂದು ಪುಟ್ಟ ಮಗುವಿಗಾಗಿ ಬದಲಾಗುತ್ತಾ ಹೋಗುತ್ತಾನೆ ಎಂದು ತಿಳಿಸಲಾಗಿದೆ.

ಖಳನಾಯಕ ಸತ್ಯಜಿತ್ ಅವರ ಮಗ ಆಕಾಶ್ ಈ ಚಿತ್ರದ ನಾಯಕ. ಮೊನ್ನೆ ನಿಧನರಾದ ಭರತ್ ಭಾಗವತರ ಮಗಳು ಮೇಘಾಶ್ರೀ ಇದರ ನಾಯಕಿ. ಕಲಾವಿದರ ಕುಟುಂಬದಿಂದ ಬಂದ ಇವರಿಬ್ಬರೂ ಸಾಗಬೇಕಾದ ಹಾದಿ ಸಾಕಷ್ಟಿದೆ. ನೃತ್ಯ ನಿರ್ದೇಶಕ ಮೂಗೂರು ಸುಂದರಂ ಅವರ ನೃತ್ಯವೊಂದು ಯುವಕರನ್ನು ನಾಚಿಸುವಷ್ಟು ಚೆನ್ನಾಗಿದೆ.

ಆದರೆ ಯಾವ ಹಂತದಲ್ಲೂ ಚಿತ್ರ ಪ್ರೇಕ್ಷಕನ ಮನಮುಟ್ಟುವುದಿಲ್ಲ. ಇದಕ್ಕೆ ಕಾರಣ ಕಳಪೆ ಅಭಿನಯ, ಜಾಳುಜಾಳಾದ ನಿರೂಪಣೆ ಮತ್ತು ಕತೆಯ ಕೊರತೆ. ಗ್ಲಾಮರ್ ಇಲ್ಲದ ಈ ಚಿತ್ರದಲ್ಲಿ ರೌಡಿಸಂ ಅತಿಯಾಗಿದೆ.

'ತಬ್ಬಲಿ' ಚಿತ್ರದಲ್ಲಿ ಹೊಸತನದ ಕೊರತೆಯಿರುವುದರಿಂದ ಈ ಚಿತ್ರ ಸದ್ಯದಲ್ಲೇ 'ತಬ್ಬಲಿ'ಯಾಗುವ ಸಂಭವವಿದೆ.

ಶೆಣೈ

ಗಂಡುಗಲಿಯ ಮೂಢ ನಂಬಿಕೆ!



ಸಿನಿಮಾರಂಗದಲ್ಲಿ ಬಹುತೇಕ ನಿರ್ಮಾಪಕರು ಹೀರೋನನ್ನೋ, ಕಥೆಯನ್ನೋ, ನಿರ್ದೇಶಕನನ್ನೋ ನಂಬಿ ಸಿನಿಮಾ ಮಾಡುವುದು ವಾಡಿಕೆ. ಆದರೆ ಕೊಬ್ರಿ ಮಂಜುನಾಥ ಸ್ವಾಮಿಗಳು ಜ್ಯೋತಿಷಿಯನ್ನು ನಂಬಿ ಸಿನಿಮಾ ಮಾಡಿದ್ದಾರೆ. ಅಷ್ಟೇ ಏಕೆ, ಅದೇ ಜ್ಯೋತಿಷಿಯ ಮಾತನ್ನು ನಂಬಿ ತಮ್ಮ ನಿರ್ಮಾಣದ 'ರಾಜ್‌ಕುಮಾರಿ' ಬಿಡುಗಡೆಗೆ ಸಿದ್ಧವಾಗಿ ವರ್ಷ ಕಳೆದರೂ ಅದನ್ನು ರಿಲೀಸ್ ಮಾಡದೆ ತಂಗಳು ಮಾಡಿದ್ದಾರೆ.

ಅವರು ನಂಬಿರುವ ಜ್ಯೋತಿಷಿ "2009ರ ಫೆಬ್ರವರಿಯಲ್ಲಿ ಸಿನಿಮಾ ಬಿಡುಗಡೆ ಮಾಡಿದರೆ ಚಿತ್ರ ಸೂಪರ್ ಹಿಟ್ಟಾಗುತ್ತೆ" ಎಂದಿದ್ದನಂತೆ. ಅಲ್ಲಿಗೆ ನಿರ್ದೇಶಕ ಗೋವಿಂದು ಬಗ್ಗೆಯಾಗಲಿ, ನಾಯಕ ಬಾಲಾಜಿಯ ಬಗ್ಗೆಯಾಗಲಿ ಮಂಜಣ್ಣನಿಗೆ ನಂಬಿಕೆಯಿಲ್ಲ ಅನ್ನೋದು ಖಾತ್ರಿಯಾಗುತ್ತೆ. ಅಲ್ಲದೇ ಚಿತ್ರ ಯಾವಾಗ ಬಿಡುಗಡೆಯಾದರೂ ಚೆನ್ನಾಗಿದ್ದರೆ ನಿಲ್ಲುತ್ತೆ, ಇಲ್ಲದಿದ್ದಲ್ಲಿ ತೋಪಾಗುತ್ತದೆ ಎಂಬ ಕನಿಷ್ಟ ಜ್ಞಾನವೂ ಇಲ್ಲದ ಕೊಬ್ರಿ ಮಂಜುರಂಥ 'ಗಂಡುಗಲಿ'ಗಳೇ ಹೀಗಾದರೆ ಬೇರೆಯವರ ಕಥೆ ಇನ್ನೆಂಥದಿರಬೇಕು!

ನಮ್ಮ ಕನ್ನಡ ಚಿತ್ರರಂಗದವರು ಭಯಾನಕ ಮೂಢರು ಎಂಬುದಕ್ಕೆ ಕೊಬ್ರಿ ಮಂಜುನಾಥ ಸ್ವಾಮಿಗಳಿಗಿಂತ ದೊಡ್ಡ ಉದಾಹರಣೆ ಬೇಕೇ?

ಚಿತ್ರರಂಗದ ಒಗ್ಗಟ್ಟು







PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44